ಗುರುವಾರ, ಜನವರಿ 22, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಕ್ಕಳ ವೇಷಭೂಷಣ
ಬೆಂಗಳೂರಿನಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಮತ್ತು ಅಂಬಿಗ ಚೌಡಯ್ಯ ಅವರ ವೇಷಭೂಷಣ ಧರಿಸಿದ್ದ ಮಕ್ಕಳು ಗಮನ ಸೆಳೆದರು



ಸಬಲೆಂಕಾ ಮುನ್ನಡೆ
ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತಿಗೆ ಮುನ್ನಡೆದರು



prajavani.net prajavani
ಗುರುವಾರ, ಜನವರಿ 22, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 22 | ಪುಟ 18
www.prajavani.net
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಿದ್ಧತೆ ಗುರುಗ್ರಾಮದಲ್ಲಿ ಗಣರಾಜ್ಯೋತ್ಸವ ಪರೇಡ್‌ನ ಸಿದ್ಧತೆಯ ವೇಳೆ ಎನ್‌ಸಿಸಿ ಕೆಡೆಟ್‌ವೊಬ್ಬರು ಸಹ ಕೆಡೆಟ್‌ನ ಟೋಪಿಯನ್ನು ಸರಿಪಡಿಸಿದರು

ಸೆನ್ಸೆಕ್ಸ್ 81,909 | ನಿಫ್ಟಿ 25,157 | $/₹ 91.65 | ಚಿನ್ನ (Std. 10g) ₹1,61,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,30,200 (ಬೆಂಗಳೂರು)

ರಾಜ್ಯಪಾಲ – ಸರ್ಕಾರ ಸಂಘರ್ಷ

ಜಂಟಿ ಅಧಿವೇಶನ ಇಂದು • ಭಾಷಣ ಓದಲು ಗೆಹಲೋತ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಸಿದ್ಧಪಡಿಸಿರುವ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸುವ ಅಂಶಗಳಿವೆ ಎಂಬ ಆಕ್ಷೇಪ ಎತ್ತಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್, ಗುರುವಾರ(ಜ.22) ಆರಂಭವಾಗಲಿರುವ ಜಂಟಿ ಅಧಿವೇಶನದಲ್ಲಿ ಭಾಷಣ ಓದಲು ನಿರಾಕರಿಸಿದ್ದಾರೆ. ಇದು ಸರ್ಕಾರ ಮತ್ತು ಲೋಕಭವನದ ನಡುವೆ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿದೆ.

ಅಧಿವೇಶನ ಆರಂಭವಾಗುವ ಮುನ್ನಾದಿನ ನಡೆದ ಈ ಬೆಳವಣಿಗೆ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ. ಸಂಭಾವ್ಯ ಸಾಂವಿಧಾನಿಕ ಬಿಕ್ಕಟ್ಟು ತಪ್ಪಿಸಲು ರಾಜ್ಯ ಸರ್ಕಾರ ಶತಪ್ರಯತ್ನ ನಡೆಸಿದೆ.

ಹಲವು ಸುತ್ತಿನ ಚರ್ಚೆಗಳ ನಂತರ, ಭಾಷಣದಲ್ಲಿದೆ ಎನ್ನಲಾದ 'ವಿಬಿ ಜಿ ರಾಮ್ ಜಿ ಕಾಯ್ದೆ ಭ್ರಷ್ಟಾಚಾರಕ್ಕೆ ಆಸ್ಪದ ಮಾಡಿಕೊಡುತ್ತದೆ' ಹಾಗೂ 'ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡುತ್ತದೆ' ಎಂಬ ಅಂಶವನ್ನು ಕೈಬಿಡಲು ತೀರ್ಮಾನಿಸಲಾಗಿದೆ. ಈ ವಿಷಯವನ್ನು ರಾಜ್ಯಪಾಲರ ಗಮನಕ್ಕೂ ತರಲಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

▶ 8

ಕೆಲವು ರಾಜ್ಯಗಳಲ್ಲೂ ನಡೆದಿತ್ತು ಜಟಾಪಟಿ

ರಾಜ್ಯಪಾಲರು ಮತ್ತು ಸರ್ಕಾರಗಳ ನಡುವೆ ಸಂಘರ್ಷ ಹೊಸತಲ್ಲ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳದಲ್ಲಿ ಸಂಘರ್ಷಗಳು ಆಗಾಗ ನಡೆದಿವೆ. ಕುಲಪತಿಗಳ ನೇಮಕ ಸೇರಿ ಹಲವು ಮಸೂದೆಗಳಿಗೆ ವಿಧಾನಸಭೆ ಅನುಮೋದನೆ ನೀಡಿದ್ದರೂ ರಾಜ್ಯಪಾಲರು ತಕರಾರು ತೆಗೆದಿದ್ದಾರೆ. ಕೆಲವು ಮಸೂದೆಗಳನ್ನು ರಾಷ್ಟ್ರಪತಿಗೆ ಕಳುಹಿಸಿರುವ ನಿದರ್ಶನಗಳಿವೆ.

ಮಂಗಳವಾರವಷ್ಟೇ ತಮಿಳುನಾಡು ಮತ್ತು ಕೇರಳ ವಿಧಾನಸಭೆಯಲ್ಲಿ ರಾಜ್ಯಪಾಲರು ಭಾಷಣ ಓದುವ ವಿಚಾರವಾಗಿ ಜಟಾಪಟಿ ನಡೆದಿತ್ತು. ತಮಿಳುನಾಡು ರಾಜ್ಯಪಾಲ ಆರ್. ಎನ್.ರವಿ ಭಾಷಣ ಓದದೇ ಸದನದಿಂದ ಹೊರನಡೆದಿದ್ದರೆ, ಕೇರಳ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಭಾಷಣದ ಕೆಲ ಭಾಗಗಳನ್ನು ಓದದೇ ಟೀಕೆಗೆ ಗುರಿಯಾಗಿದ್ದಾರೆ.

ರಾಜ್ಯಪಾಲರ ಮುಂದಿರುವ ಆಯ್ಕೆ



- ಜಂಟಿ ಅಧಿವೇಶನದಲ್ಲಿ ಪಾಲ್ಗೊಳ್ಳದೇ ಇರಲು ಸಂವಿಧಾನದ ವಿಧಿಗಳಲ್ಲಿ ಅವಕಾಶ ಇಲ್ಲ. ಅದನ್ನೂ ಮೀರಿ, ವಿವೇಚನಾ ತೀರ್ಮಾನದಡಿ ರಾಜ್ಯಪಾಲರು ಬಾರದಿರಬಹುದು
- ಅಧಿವೇಶನದಲ್ಲಿ ಭಾಗಿಯಾಗಿ, ಭಾಷಣವನ್ನು ಓದದೇ 'ಮಂಡಿಸಲಾಗಿದೆ' ಎಂದು ಹೇಳಿ ಹೊರ ನಡೆಯಬಹುದು
- ಭಾಷಣದಲ್ಲಿ ತಮಗೆ ಆಕ್ಷೇಪಾರ್ಹ ಎನಿಸಿರುವ ವಾಕ್ಯ ಅಥವಾ ಶಬ್ದ ಅಥವಾ ಪುಟಗಳನ್ನು ಓದದೇ ಬಿಟ್ಟು, ಸೂಕ್ತ ಎನಿಸಿದ್ದಷ್ಟನ್ನೇ ಓದಬಹುದು

ರಾಜ್ಯ ಸರ್ಕಾರದ ಮುಂದಿರುವ ಆಯ್ಕೆ

- ರಾಜ್ಯಪಾಲರನ್ನು ಮನವೊಲಿಸಿ ಕರೆತರುವ ಯತ್ನವನ್ನು ಗುರುವಾರ ಬೆಳಿಗ್ಗೆಯೂ ಮುಂದುವರಿಸಬಹುದು
- ರಾಜ್ಯಪಾಲರು ಗೈರಾದರೆ ಸುಪ್ರೀಂಕೋರ್ಟ್ ಮೊರೆ ಹೋಗಬಹುದು. ಅವರನ್ನು ವಾಪಸ್ ಕರೆಯಿಸಿಕೊಳ್ಳುವಂತೆ ಸದನದಲ್ಲೇ ನಿರ್ಣಯ ತೆಗೆದುಕೊಳ್ಳಬಹುದು
- ಸಿದ್ಧಪಡಿಸಿದ ಭಾಷಣವನ್ನು ಸಭಾಧ್ಯಕ್ಷರಿಂದ ಓದಿಸಬಹುದು ಅಥವಾ ಮಂಡನೆ ಮಾಡಿಸುವ ಅವಕಾಶವೂ ಇದೆ

ಕಾನೂನು ತಜ್ಞರ ಅಭಿಮತ

ರಾಜ್ಯಪಾಲರು ಬಾರದೇ ಇದ್ದರೆ ಅಥವಾ ಭಾಷಣ ಮಾಡದೆ ಇದ್ದರೆ ಅಧಿವೇಶನ ನಡೆಸುವಂತಿಲ್ಲ ಎಂದು ಎಲ್ಲಿ ಹೇಳಲಾಗಿದೆ? ಇಂತಹ ವಿಷಯಗಳು ಹೆಚ್ಚಾಗಿ ಕೋರ್ಟ್‌ಗೆ ಬಂದಿಲ್ಲ. ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದ ಪ್ರಕರಣಗಳು ಇವೆಯಾದರೂ ಅವುಗಳನ್ನು ಪೂರ್ವನಿದರ್ಶನ ಎನ್ನಲಾಗುವುದಿಲ್ಲ. ಒಂದು ವೇಳೆ ಸರ್ಕಾರ ರಾಜ್ಯಪಾಲರ ಅನುಪಸ್ಥಿತಿಯಲ್ಲೇ ಅಧಿವೇಶನ ನಡೆಸಿಬಿಟ್ಟರೆ ಅದನ್ನು ಪ್ರಶ್ನಿಸಿ ಕೋರ್ಟ್‌ಗೆ ಹೋಗುವವರು ಯಾರು? ಇದರಲ್ಲಿ ಕಾನೂನನ್ನು ಒರೆಗೆ ಹಚ್ಚಿ ನೋಡುವ ಮೊದಲು ಢಾಳಾಗಿ ಕಾಣುತ್ತಿರುವ ರಾಜಕೀಯವನ್ನು ಗಮನಿಸಬೇಕಿದೆ.

ಉದಯ ಹೊಳ್ಳ,
ಮಾಜಿ ಅಡ್ವೊಕೇಟ್ ಜನರಲ್, ಪದಾಂಕಿತ ಹಿರಿಯ ವಕೀಲರು

ರಾಜ್ಯಪಾಲರು ಭಾಷಣ ಓದದೆಯೇ ಅಧಿವೇಶನ ಆರಂಭಿಸುವುದು ಕಾನೂನುಬದ್ಧವಲ್ಲ. ಪಶ್ಚಿಮ ಬಂಗಾಳದಲ್ಲಿ 1966ರಲ್ಲಿ ನಡೆದಿದ್ದ ವಿಧಾನಸಭೆ ಅಧಿವೇಶನದ ಪ್ರಸಂಗ ಈ ಕಾನೂನು ಚೌಕಟ್ಟಿಗೆ ತಳಹದಿ. ಕೇಂದ್ರ ಸರ್ಕಾರವನ್ನು ರಾಜ್ಯಪಾಲರ ಬಾಯಲ್ಲಿ ದೂಷಿಸುವ, ರಾಜಕೀಯಕ್ಕೆ ಬಳಸಿಕೊಳ್ಳುವ ನಿಲುವು ಸರಿಯಲ್ಲ. ರಾಜ್ಯ ಸರ್ಕಾರ ತನ್ನ ನೀತಿಗಳು ಏನೆಂದು ಹೇಳಲಿ. ಆದರೆ, ಅವರ ಬಾಯಲ್ಲಿ ಹೇಳಿಸಿ ಯಾಕೆ ಮುಖಭಂಗ ಮಾಡಬೇಕು?

ಈ ವಿಷಯವನ್ನು ಪ್ರತಿಷ್ಠೆಯ ಪ್ರಶ್ನೆ ಮಾಡುವುದು ತರವಲ್ಲ. ರಾಜ್ಯಪಾಲರು ತೆಗೆಯಬೇಕೆಂದು ಸೂಚಿಸಿರುವ ಪ್ಯಾರಾಗಳನ್ನು ತೆಗೆದು ಓದಿಸಬೇಕು. ಈ ನಿಟ್ಟಿನಲ್ಲಿ ಅವರ ಮನವೊಲಿಸಿ ರಾಜಕೀಯ ಮಾಡುವ ಪ್ರಯತ್ನವನ್ನು ನಿಲ್ಲಿಸಬೇಕು.

ಅಶೋಕ ಹಾರನಹಳ್ಳಿ,
ಮಾಜಿ ಅಡ್ವೊಕೇಟ್ ಜನರಲ್, ಪದಾಂಕಿತ ಹಿರಿಯ ವಕೀಲರು

ಸನಾತನ ಧರ್ಮ ಅವಹೇಳನ ಹೇಳಿಕೆ: ದ್ವೇಷ ಭಾಷಣಕ್ಕೆ ಸಮ

ಉದಯನಿಧಿಗೆ ಕೋರ್ಟ್ ತರಾಟೆ



ಉದಯನಿಧಿ ಸ್ಟಾಲಿನ್



> ಡಿಸಿಎಂ ಉದಯನಿಧಿ ಸ್ಟಾಲಿನ್ ಅವರ ಭಾಷಣ ಶೇಕಡ 80ರಷ್ಟಿರುವ ಹಿಂದೂಗಳ ವಿರುದ್ಧವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅವರು ಆಡಿದ ಮಾತುಗಳು ದ್ವೇಷಭಾಷಣ ವ್ಯಾಪ್ತಿಗೆ ಒಳಪಡುತ್ತವೆ
>
> **ನ್ಯಾಯಮೂರ್ತಿ ಎಸ್.ಶ್ರೀಮತಿ,** ಮದುರೆ ಪೀಠ, ಮದ್ರಾಸ್ ಹೈಕೋರ್ಟ್

ಮದುರೆ(ಪಿಟಿಐ): 'ಸನಾತನ ಧರ್ಮ' ಕುರಿತು ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ನೀಡಿದ್ದ ಹೇಳಿಕೆಗಳನ್ನು ತಿರುಚಿದ ಆರೋಪದಡಿ ಬಿಜೆಪಿ ನಾಯಕ ಅಮಿತ್ ಮಾಳವೀಯ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸಿ ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠ ಆದೇಶಿಸಿದೆ.

'ಉದಯನಿಧಿ ಅವರು ಸನಾತನ ಧರ್ಮ ಕುರಿತು ನೀಡಿರುವ ಹೇಳಿಕೆಗಳು ದ್ವೇಷ ಭಾಷಣಕ್ಕೆ ಸಮವಾಗಿದ್ದು, ಅದನ್ನು ಪ್ರಶ್ನೆ ಮಾಡಿರುವುದು ಪ್ರತಿಕ್ರಿಯೆಯಷ್ಟೆ' ಎಂದೂ ನ್ಯಾಯಪೀಠ ಹೇಳಿದೆ.

'ದ್ವೇಷ ಭಾಷಣ' ಮಾಡಿದವರನ್ನು ಬಿಟ್ಟು, ಅದಕ್ಕೆ ಪ್ರತಿಕ್ರಿಯಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿರುವುದು ಅಚ್ಚರಿ ಮೂಡಿಸಿದೆ' ಎಂದು ನ್ಯಾಯಮೂರ್ತಿ ಎಸ್.ಶ್ರೀಮತಿ ಅವರು ಇದ್ದ ಏಕಸದಸ್ಯ ಪೀಠ ಹೇಳಿದೆ.

ತಮ್ಮ ವಿರುದ್ಧ ತಿರುಚಿರಾಪಳ್ಳಿ ನಗರ ಠಾಣೆ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಸಲ್ಲಿಸಿದ್ದ ಮೂಲ ಕ್ರಿಮಿನಲ್ ಮೇಲ್ಮನವಿಯನ್ನು ಪುರಸ್ಕರಿಸಿದ ಪೀಠ, 'ಅರ್ಜಿದಾರ ವಿರುದ್ಧದ ಪ್ರಕರಣದ ವಿಚಾರಣೆಯನ್ನು ಮುಂದುವರಿಸಿದ್ದೇ ಆದಲ್ಲಿ, ಅದು ಕಾನೂನುಪ್ರಕ್ರಿಯೆಯ ದುರ್ಬಳಕೆಯಾಗಲಿದೆ' ಎಂದು ಹೇಳಿದೆ.

2023ರಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಉದಯನಿಧಿ ಸ್ಟಾಲಿನ್, ಸನಾತನ ಧರ್ಮವನ್ನು ಮಲೇರಿಯಾ, ಡೆಂಗಿಯಂತಹ ಕಾಯಿಲೆಗಳಿಗೆ ಹೋಲಿಸಿದ್ದರಲ್ಲದೇ, 'ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು' ಎಂದು ಕರೆ ನೀಡಿದ್ದರು.

▶ 9

ಅರಿವಳಿಕೆ ಮದ್ದು ನೀಡಿ ದಂಪತಿ ಕೊಲೆ

ಪ್ರಜಾವಾಣಿ ವಾರ್ತೆ



ಡಾ.ಜಿ. ಪಿ.ಮಲ್ಲೇಶ



ಚಂದ್ರಪ್ಪ ಮತ್ತು ಜಯಮ್ಮ

ಶಿವಮೊಗ್ಗ: ಜಿಲ್ಲೆಯ ಭದ್ರಾವತಿಯಲ್ಲಿ ಹಣದ ಆಸೆಗಾಗಿ ಸ್ವಂತ ದೊಡ್ಡಪ್ಪ ಮತ್ತು ದೊಡ್ಡಮ್ಮನಿಗೆ ಆಯುರ್ವೇದ ವೈದ್ಯನೊಬ್ಬ ಅರಿವಳಿಕೆ ಚುಚ್ಚುಮದ್ದು ನೀಡಿ ಕೊಲೆ ಮಾಡಿರುವುದು ಗೊತ್ತಾಗಿದ್ದು, ಪೊಲೀಸರು ವೈದ್ಯನನ್ನು ಬಂಧಿಸಿದ್ದಾರೆ.

ಮೃತ ಚಂದ್ರಪ್ಪ ಅವರ ಸಹೋದರನ ಮಗ, ಭದ್ರಾವತಿ ತಾಲ್ಲೂಕು ಬಿ.ಬೀರನಹಳ್ಳಿ ಗ್ರಾಮದ ನಿವಾಸಿ ಡಾ.ಜಿ. ಪಿ.ಮಲ್ಲೇಶ (44) ಬಂಧಿತ ಆರೋಪಿ.

ಭದ್ರಾವತಿಯ ಭೂತನಗುಡಿ ಬಡಾವಣೆ ನಿವಾಸಿ, ವಿಐಎಸ್‌ಎಲ್ ಕಾರ್ಖಾನೆ ನಿವೃತ್ತ ನೌಕರ ಚಂದ್ರಪ್ಪ (78), ಅವರ ಪತ್ನಿ ಜಯಮ್ಮ (75) ದಂಪತಿಯು ಮಲಗಿದ್ದ ಸ್ಥಿತಿಯಲ್ಲಿಯೇ ಮೃತಪಟ್ಟಿರುವುದು ಪತ್ತೆಯಾಗಿದ್ದು, ಸಾವಿನ ಕುರಿತು ಶಂಕೆ ಮೂಡಿತ್ತು.

ಮಂಗಳವಾರ ಪ್ರಕರಣ ದಾಖಲಾಗಿದ್ದು, ಡಿವೈಎಸ್ಪಿ ಪ್ರಕಾಶ್ ರಾಥೋಡ್ ನೇತೃತ್ವದಲ್ಲಿ ತನಿಖಾ ತಂಡ ರಚನೆ ಆಗಿತ್ತು. ಸಂಬಂಧಿಯೇ ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

▶ 7

ರೂಪಾಯಿ ಮೌಲ್ಯ 68 ಪೈಸೆ ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 68 ಪೈಸೆಯಷ್ಟು ಕುಸಿದಿದೆ.

ವಹಿವಾಟಿನ ಅಂತ್ಯದ ವೇಳೆಗೆ ರೂಪಾಯಿ ಮೌಲ್ಯವು ₹91.65 ಆಗಿದೆ. ಇದು ರೂಪಾಯಿಯ ಈವರೆಗಿನ ಕನಿಷ್ಠ ಮಟ್ಟ.

ಬುಧವಾರ ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ₹91.05ರಷ್ಟು ಇತ್ತು. ದಿನದ ನಡುವೆ ಅದು ₹91.74ರವರೆಗೂ ಇಳಿದಿತ್ತು. ವಹಿವಾಟಿನ ಕೊನೆಯಲ್ಲಿ ಮೌಲ್ಯವು ₹91.65 ಆಗಿದೆ.



ವಿದೇಶಿ ಬಂಡವಾಳದ ನಿರಂತರ ಹೊರಹರಿವು, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆ, ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿರುವುದು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.



ಗ್ರಾಸಾ ಮಾಶೆಲ್‌ಗೆ ಇಂದಿರಾ ಪ್ರಶಸ್ತಿ

ನವದೆಹಲಿ (ಪಿಟಿಐ): 2025ನೇ ಸಾಲಿನ 'ಇಂದಿರಾ ಗಾಂಧಿ ಶಾಂತಿ' ಪ್ರಶಸ್ತಿಯು ಮೊಜಾಂಬಿಕದ ಹೋರಾಟಗಾರ್ತಿ ಗ್ರಾಸಾ ಮಾಶೆಲ್ ಅವರಿಗೆ ಸಂದಿದೆ.

ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಂಶ ವಲಯ ಹಾಗೂ ಕಷ್ಟಕರ ಸಂದರ್ಭಗಳಲ್ಲಿ ಮಾನವೀಯ ನೆರವು ಮತ್ತು ಆರ್ಥಿಕ ಸಬಲೀಕರಣ ಕ್ಷೇತ್ರಗಳಲ್ಲಿ ಮಾಡಿದ ಕಾರ್ಯಗಳನ್ನು ಪರಿಗಣಿಸಿ ರಾಷ್ಟ್ರೀಯ ಭದ್ರತೆಯ ಮಾಜಿ ಸಲಹೆಗಾರ ಶಿವಶಂಕರ್ ಮೆನನ್ ಅವರ ಅಧ್ಯಕ್ಷತೆಯ ಸಮಿತಿಯು ಗ್ರಾಸಾ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಇಂದಿರಾ ಗಾಂಧಿ ಸ್ಮಾರಕ ಟ್ರಸ್ಟ್ ಬುಧವಾರ ತಿಳಿಸಿದೆ.

ಪ್ರಶಸ್ತಿಯು ₹1 ಕೋಟಿ ಮೊತ್ತ, ಫಲಕ ಹಾಗೂ ಪ್ರಶಂಸನಾ ಪತ್ರ ಒಳಗೊಂಡಿದೆ. ಮೊಜಾಂಬಿಕದ ಮೊದಲ ಅಧ್ಯಕ್ಷ ಸಮೋರಾ ಮೊಯಿಸೆಸ್ ಮಾಶೆಲ್ ಅವರನ್ನು ಗ್ರಾಸಾ ಮದುವೆಯಾಗಿದ್ದರು. ಸಮೋರಾ 1986ರಲ್ಲಿ ನಿಧನರಾದ ಬಳಿಕ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರನ್ನು ವಿವಾಹವಾದರು. ಮೊಜಾಂಬಿಕ ಶಿಕ್ಷಣ ಮತ್ತು ಸಂಸ್ಕೃತಿ ಖಾತೆಯ ಮೊದಲ ಸಚಿವರಾಗಿಯೂ ಅವರು ಕಾರ್ಯನಿರ್ವಹಿಸಿದರು.

'ಚಿನ್ನಸ್ವಾಮಿ'ಯಲ್ಲೇ ಪಂದ್ಯ ಆಯೋಜಿಸಿ'

ವಿವರ ▶ 14

ಚಿನಕುರುಳಿ ಪ್ರಕಾಶ್ ಶೆಟ್ಟಿ




ಶ್ರೀ ಎಂ. ಕೃಷ್ಣಪ್ಪ
ಬೆಂಗಳೂರು ದಕ್ಷಿಣ ವಿದಾನಸಭಾ ಕ್ಷೇತ್ರ
ಡಾ|| ಮಂಜುನಾಥ್
ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಸನ್ಮಾನ್ಯ ಶ್ರೀ ನಿಖಿಲ್ ಕುಮಾರಸ್ವಾಮಿ ರವರಿಗೆ
ಜನತಾದಳ (ಜಾತ್ಯತೀತ) (ಜೆ.ಡಿ.ಎಸ್) ಯುವ ಘಟಕದ ಅಧ್ಯಕ್ಷರು
ಜನ್ಮದಿನದ ಶುಭಾಶಯಗಳು
ದಿನಾಂಕ:
22-01-2026
ಗುರುವಾರ
ನಂದಿ ಪ್ರಿಂಟ್ಸ್ ಗೊಟ್ಟಿಗೆರೆ
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶ್ರೀ ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್
ಶುಭ ಕೋರುವವರು:
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು
ನಾಮನಿರ್ದೇಶಿತ ಸದಸ್ಯರು, ಕರ್ನಾಟಕ ಸರ್ಕಾರ
ಬೆಂಗಳೂರು ದಕ್ಷಿಣ ತಾಲ್ಲೂಕು ಮಾಜಿ ತಾಲೂಕು ಪಂಚಾಯಿತಿ &
ಮಾಜಿ ಗ್ರಾಮ ಪಂಚಾಯತಿ ಸದಸ್ಯರು, ಗೊಟ್ಟಿಗೆರೆ
ಮಾಜಿ ಕಾರ್ಯಾಧ್ಯಕ್ಷ ಉತ್ತರಹಳ್ಳಿ, ವಿಧಾನಸಭಾ ಕ್ಷೇತ್ರ
ಜನರೊಂದಿಗೆ ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
Give a missed call to the number to register your JDS membership : 9964002028

‘ಇಂಟೆಕ್ಸ್ ಫಾರ್ಮಿಂಗ್ ಪ್ರದರ್ಶನ ಉತ್ತಮ ವೇದಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಷಿನ್ ಟೂಲ್ ಉದ್ಯಮದಲ್ಲಿ ತಂತ್ರಜ್ಞಾನಗಳ ಮೌಲ್ಯಮಾಪನ ಮಾಡಲು ಇಂಟೆಕ್ಸ್ ಫಾರ್ಮಿಂಗ್ ಪ್ರದರ್ಶನವು ಒಂದು ಉತ್ತಮ ವೇದಿಕೆ ಆಗಿದೆ’ ಎಂದು ಎಂಜಿನ್ ಕಾಂಪೋನೆಂಟ್ ಡಿವಿಷನ್ ರಾಣೆ (ಮದ್ರಾಸ್) ಲಿಮಿಟೆಡ್‌ನ ಅಧ್ಯಕ್ಷ ಎಸ್. ರಾಜಕುಮಾರ್ ತಿಳಿಸಿದರು.

ಭಾರತೀಯ ಮಷಿನ್ ಟೂಲ್ ತಯಾರಕರ ಸಂಘವು (ಐಎಂಟಿಎಂಎ) ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿರುವ ಇಂಟೆಕ್ಸ್ ಫಾರ್ಮಿಂಗ್‌ನ ಒಂಬತ್ತನೇ ಆವೃತ್ತಿಯ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ‘ಜಿಎಸ್‌ಟಿ ಕಡಿತ ಮಾಡಿರುವ ಕಾರಣ ಆಟೊ ಮೊಬೈಲ್‌ಗಳ ಬೇಡಿಕೆ ಹೆಚ್ಚಾಗಿದ್ದು, ಈ ಉದ್ಯಮದ ಉತ್ಪಾದನಾ ಸಾಮರ್ಥ್ಯ ವಿಸ್ತರಿಸಲು ಅನುಕೂಲವಾಗಿದೆ’ ಎಂದು ಹೇಳಿದರು.

ಏಥರ್ ಎನರ್ಜಿ ಸಹಸಂಸ್ಥಾಪಕ ತರುಣ್ ಮೆಹ್ತಾ ಮಾತನಾಡಿ, ‘ನಿರಂತರ ಸಂಶೋಧನೆ ಮತ್ತು ಅಭಿವೃದ್ಧಿಯೊಂದಿಗೆ ಭಾರತವು ಉತ್ಪಾದನಾ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಬಹುದು’ ಎಂದು ತಿಳಿಸಿದರು.

ಐಎಂಟಿಎಂಎ ಇಂಟೆಕ್ಸ್ ಪ್ರದರ್ಶನದ ಅಧ್ಯಕ್ಷ ಜಮ್ಶೆಡ್ ಗೋದ್ರೆಜ್ ಮಾತನಾಡಿ, ‘ಕೇಂದ್ರ ಸರ್ಕಾರವು ವಿವಿಧ ಯೋಜನೆಗಳ ಮೂಲಕ ಮಷಿನ್ ಟೂಲ್ ಉದ್ಯಮಕ್ಕೆ ಉತ್ತಮ ಆದ್ಯತೆ ನೀಡುತ್ತಿದ್ದು, ಇದು ಭಾರತದ ಆರ್ಥಿಕ ಬೆಳವಣಿಗೆಗೆ ಸಹಕಾರಿ ಆಗಲಿದೆ. ಇಂಟೆಕ್ಸ್ ಪ್ರದರ್ಶನವು ಉದ್ಯಮ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುತ್ತಿದೆ’ ಎಂದರು. ಐಎಂಟಿಎಂಎ ಅಧ್ಯಕ್ಷೆ ಮೋಹಿನಿ ಖೇಲ್ಕರ್ ಉಪಸ್ಥಿತರಿದ್ದರು.



ಇಂಟೆಕ್ಸ್ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಎಸ್. ರಾಜಕುಮಾರ್, ಮೋಹಿನಿ ಖೇಲ್ಕರ್, ತರುಣ್ ಮೆಹ್ತಾ, ಜಮ್ಶೆಡ್ ಗೋದ್ರೆಜ್ ಉಪಸ್ಥಿತರಿದ್ದರು

ಯೂನಿವರ್ಸಲ್ ಕೋಚಿಂಗ್ ಸೆಂಟರ್ ವಾರ್ಷಿಕೋತ್ಸವ 24ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೂನಿವರ್ಸಲ್ ಕೋಚಿಂಗ್ ಸೆಂಟರ್‌ನ 25ನೇ ವಾರ್ಷಿಕೋತ್ಸವ ಹಾಗೂ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮವನ್ನು ತಾವರೆಕೆರೆ ಹೋಬಳಿಯ ಗುರುರಾಯನಪುರದಲ್ಲಿರುವ ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಜ.24ರಂದು ಸಂಜೆ 5ಕ್ಕೆ ಹಮ್ಮಿಕೊಳ್ಳಲಾಗಿದೆ.

ಎಂಆರ್‌ಜಿ ಸಮೂಹ ಸಂಸ್ಥೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ. ಪ್ರಕಾಶ ಶೆಟ್ಟಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪೊಲೀಸ್ ಉಪ ಮಹಾನಿರೀಕ್ಷಕ ರವಿ ಡಿ. ಚನ್ನಣ್ಣನವರ್, ಸಿಜಿಎಸ್‌ಟಿ, ಬೆಂಗಳೂರು ದಕ್ಷಿಣ ವಲಯ ಆಯುಕ್ತ ಕೊಟ್ರಸ್ವಾಮಿ ಎಂ., ಅನ್ನ ಕುರುಂಗಾ ಸೊಲ್ಯೂಷನ್ಸ್ ಪ್ರೈವೆಟ್ ಲಿಮಿಟೆಡ್ ನಿರ್ದೇಶಕ ಅಶೋಕ್ ಚನ್ನೇಗೌಡ ಭಾಗವಹಿಸಲಿದ್ದಾರೆ.

ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಸಂಸ್ಥೆಯ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸಂಸ್ಥೆಯ ಆಡಳಿತ ಮಂಡಳಿ ತಿಳಿಸಿದೆ.

ಮಾಹಿತಿಗೆ 98458 96655, 89519 32948 ಅಥವಾ www.universalinstitutions.com ಸಂಪರ್ಕಿಸಬಹುದು.

ಡಬಲ್ ಡೆಕರ್ ಬಸ್‌ಗೆ ಚಾಲನೆ

ಮೂರು ಬಸ್‌ಗಳಿಗೆ ಚಾಲನೆ ನೀಡಿದ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಹತ್ತು ವರ್ಷಗಳಲ್ಲಿ ಮೈಸೂರು ದಸರಾ ರೀತಿಯಲ್ಲಿ ಬೆಂಗಳೂರು ಹಬ್ಬ ಬೆಳೆಯಲಿದೆ. ಅದಕ್ಕೆ ಪೂರಕವಾಗಿ ಈಗ ಡಬಲ್ ಡೆಕರ್ ಬಸ್ ಸಂಚಾರ ಆರಂಭಿಸಲಾಗಿದೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಲಂಡನ್ ಮಾದರಿಯ ಅಂಬಾರಿ ಡಬಲ್ ಡೆಕರ್‌ನ ಮೂರು ಬಸ್‌ಗಳಿಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಬೆಂಗಳೂರಿನಲ್ಲಿ ಪ್ರವಾಸೋದ್ಯಮಕ್ಕೆ ವಿಪುಲ ಅವಕಾಶಗಳಿದ್ದರೂ ನಾವು ಮುಚ್ಚಿಟ್ಟಿದ್ದೇವೆ. ವಿಧಾನಸೌಧವನ್ನು ಇಲ್ಲಿವರೆಗೆ ಆಡಳಿತ ಕೇಂದ್ರವಾಗಿ ಮಾತ್ರ ನೋಡಲಾಗುತ್ತಿತ್ತು. ಅದು ಪ್ರವಾಸಿಗರನ್ನು ಸೆಳೆಯುವ ಕೇಂದ್ರವೂ ಹೌದು. ಈ ರೀತಿ ಅನೇಕ ಇವೆ. ಬೆಂಗಳೂರನ್ನು ಪ್ರಮುಖ ಪ್ರವಾಸಿ ತಾಣವನ್ನಾಗಿ ಮಾಡಲಾಗುವುದು' ಎಂದು ವಿವರಿಸಿದರು.

ಬೆಂಗಳೂರು ಹಬ್ಬದಲ್ಲಿ 350ಕ್ಕೂ ಅಧಿಕ ವಿಷಯಗಳ ಪ್ರದರ್ಶನ ಇರಲಿದೆ. ಸಂಗೀತ, ಸಂಸ್ಕೃತಿ, ಕಲೆ ಇತ್ಯಾದಿಯನ್ನು ಜನರಿಗೆ ಮುಟ್ಟಿಸುವ ಪ್ರಯತ್ನವನ್ನು ಬೆಂಗಳೂರು ಹಬ್ಬ ಮಾಡುತ್ತಿದೆ. ಅದಕ್ಕೆ ಪೂರಕವಾಗಿ ಡಬಲ್ ಡೆಕರ್ ಬಸ್ ಪರಿಚಯಿಸಲಾಗಿದೆ ಎಂದು ಹೇಳಿದರು.

ಡಬಲ್ ಡೆಕರ್ ವಿಶೇಷ: ವಿಶ್ವವಿಖ್ಯಾತ ಹಂಪಿ ಮತ್ತು ಮೈಸೂರಿನ ಪ್ರವಾಸಿ ತಾಣಗಳ ವೀಕ್ಷಣೆಗಾಗಿ ಪ್ರವಾಸಿಗರಿಗೆ ಲಂಡನ್ ಬಿಗ್ ಬಸ್ ಮಾದರಿಯ 6 ಡಬಲ್ ಡೆಕರ್ ತೆರೆದ ಬಸ್ಸುಗಳನ್ನು ಕೆಎಸ್‌ಟಿಡಿಸಿ ವತಿಯಿಂದ ಪ್ರಾರಂಭಿಸಲು ಸರ್ಕಾರವು ಕಳೆದ ಬಜೆಟ್‌ನಲ್ಲಿ ₹5 ಕೋಟಿ ಒದಗಿಸಿತ್ತು. ಮೈಸೂರಿನಲ್ಲಿ ಕಳೆದ ದಸರಾ ಸಮಯದಲ್ಲಿ ಆರು ಬಸ್‌ಗಳನ್ನು ಪರಿಚಯಿಸಲಾಗಿತ್ತು. ಅದು ಯಶಸ್ವಿಯೂ ಆಗಿತ್ತು. ಹಂಪಿಯಲ್ಲಿ ರಸ್ತೆಗಳು ಕಿರಿದಾಗಿರುವುದರಿಂದ ಅಲ್ಲಿ ಡಬಲ್ ಡೆಕರ್ ಕಾರ್ಯಾಚರಣೆ ಆರಂಭಿಸಿರಲಿಲ್ಲ.

ದಸರಾ ನಂತರ ಆರು ಡಬಲ್ ಡೆಕರ್‌ಗಳಲ್ಲಿ ಮೂರನ್ನು ಮೈಸೂರಿನಲ್ಲಿ ಕಾರ್ಯಾಚರಣೆಗೆ ಇಟ್ಟು, ಉಳಿದ ಮೂರನ್ನು ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಇಳಿಸಲು ಪ್ರವಾಸೋದ್ಯಮ ಇಲಾಖೆ ನಿರ್ಧರಿಸಿತ್ತು.

ರವೀಂದ್ರ ಕಲಾಕ್ಷೇತ್ರ, ಕಾರ್ಪೊರೇಷನ್ ಸರ್ಕಲ್-ಹಡ್ಸನ್ ಸರ್ಕಲ್-ಕಸ್ತೂರಬಾ ರಸ್ತೆ-ವಿಶ್ವೇಶ್ವರಯ್ಯ ಮ್ಯೂಸಿಯಂ-ಚಿನ್ನಸ್ವಾಮಿ ಸ್ಟೇಡಿಯಂ ರಸ್ತೆ, ಅಂಚೆ ಕಚೇರಿ, ನ್ಯಾಯಾಲಯ/ವಿಧಾನಸೌಧ-ಕೆ.ಆರ್. ಸರ್ಕಲ್-ಹಡ್ಸನ್ ಸರ್ಕಲ್-ಕಾರ್ಪೊರೇಷನ್ ಸರ್ಕಲ್-ರವೀಂದ್ರ ಕಲಾಕ್ಷೇತ್ರಕ್ಕೆ ಸಂಚರಿಸಲಿದೆ.

ಮೇಲಿನ ಡೆಕ್‌ನಲ್ಲಿ 20 ಆಸನ, ಕೆಳಗಿನ ಡೆಕ್‌ನಲ್ಲಿ 20 ಆಸನ ಸೇರಿ ಒಟ್ಟು 40 ಆಸನಗಳನ್ನು ಈ ಬಸ್ ಹೊಂದಿದ್ದು, ಪ್ರತಿ ಪ್ರಯಾಣಿಕರಿಗೆ ₹180 ದರ ನಿಗದಿ ಮಾಡಲಾಗಿದೆ.



ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ಬೆಂಗಳೂರಿನಲ್ಲಿ ಪರಿಚಯಿಸಿರುವ ಡಬಲ್ ಡೆಕರ್ ಬಸ್ ಬುಧವಾರ ವಿಧಾನಸೌಧದ ಮುಂದೆ ಹಾದು ಹೋಯಿತು –ಪ್ರಜಾವಾಣಿ ಚಿತ್ರ

ಸಾಂಸ್ಕೃತಿಕ ಮುನ್ನೋಟ



ನಿರುಪಮಾ, ರಾಜೇಂದ್ರ

ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ 24ಕ್ಕೆ

ಬೆಂಗಳೂರು: ದೃಷ್ಟಿ ಆರ್ಟ್ ಸೆಂಟರ್‌ನಿಂದ ಇದೇ 24ರಂದು ಸಂಜೆ 6ಕ್ಕೆ ವೈಯಾಲಿ ಕಾವಲ್‌ನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ 21ನೇ ಆವೃತ್ತಿಯ 'ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ' ನಡೆಯಲಿದೆ.

ಈ ಬಾರಿಯ ನೃತ್ಯೋತ್ಸವವನ್ನು ಭರತ ಗೀತಾ ಎಂಬ ಶೀರ್ಷಿಕೆ ಅಡಿಯಲ್ಲಿ ಆಯೋಜಿಸಲಾಗಿದೆ. ನಮ್ಮ ದೇಶದ ಅಪರೂಪದ ಪರಂಪರೆ ಮತ್ತು ಜ್ಞಾನಕ್ಕೆ ಆಧಾರವಾದ ಭಗವದ್ಗೀತೆ ಹಾಗೂ ನಾಟ್ಯಶಾಸ್ತ್ರಕ್ಕೆ ನೃತ್ಯದ ಮೂಲಕ ನಮನ ಸಲ್ಲಿಸಲಾಗುತ್ತದೆ. ಪದ್ಮಾ ಸುಬ್ರಹ್ಮಣ್ಯಂ ಅವರು ಭರತನಾಟ್ಯದ ಮೂಲಕ ಭಗವದ್ಗೀತೆಗೆ ಕೃತಜ್ಞತೆ ಸಲ್ಲಿಸಲಿದ್ದು, ನಿರುಪಮಾ ರಾಜೇಂದ್ರ, ಟಿ.ಡಿ. ರಾಜೇಂದ್ರ ಹಾಗೂ ಅಭಿನವ ಡಾನ್ಸ್ ಕಂಪನಿಯು ಕಥಕ್ ನೃತ್ಯದ ಮೂಲಕ ನಾಟ್ಯಶಾಸ್ತ್ರಕ್ಕೆ ನಮನ ಸಲ್ಲಿಸಲಿದೆ.

ಶತಾವಧಾನಿ ಆರ್. ಗಣೇಶ್, ಕೇಂದ್ರ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಶ್ರೀನಿವಾಸ ವರಖೇಡಿ, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ಸೆಂಚುರಿ ರಿಯಲ್ ಎಸ್ಟೇಟ್ ಹೋಲ್ಡಿಂಗ್ಸ್‌ನ ಅಧ್ಯಕ್ಷ ಪಿ. ದಯಾನಂದ ಪೈ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಉತ್ಸವ ನಿರ್ದೇಶಕರಾದ ಅನುರಾಧಾ ವಿಕ್ರಾಂತ್, ಟಿ.ಎಂ. ವಿಕ್ರಾಂತ್ ತಿಳಿಸಿದ್ದಾರೆ.

ಮಾಹಿತಿಗೆ: 98441 91888



ಸ್ವಾತಿ ಅಯ್ಯಂಗಾರ್

ನೂಪುರಾರಾಧನ 24ಕ್ಕೆ

ಬೆಂಗಳೂರು: ನೂಪುರಮೈತ್ರಿ ಕಲಾ ಕೇಂದ್ರವು ಮೂರನೇ ವಾರ್ಷಿಕೋತ್ಸವದ ಅಂಗವಾಗಿ ಜ.24ರಂದು ಬೆಳಿಗ್ಗೆ 10.30ಕ್ಕೆ ಮಲ್ಲತ್ತಹಳ್ಳಿ ಕಲಾಗ್ರಾಮದಲ್ಲಿ ನೂಪುರಾರಾಧನ ಕಾರ್ಯಕ್ರಮ ಆಯೋಜಿಸಿದೆ.

ಈ ಕಾರ್ಯಕ್ರಮದಲ್ಲಿ ಸ್ವಾತಿ ಅಯ್ಯಂಗಾರ್ ಮತ್ತು ಶಿಷ್ಯ ವೃಂದವು ಭರತನಾಟ್ಯ ಪ್ರದರ್ಶನ ನೀಡಲಿದೆ. ವಿದ್ಯಾಲಕ್ಷ್ಮಿ ಎಂ.ಎಸ್., ರೂಪಾ ಪ್ರಕಾಶ್ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನ 24ಕ್ಕೆ


ಬೆಂಗಳೂರು: ಎಂಇಎಸ್ ಕಲಾವೇದಿ ಹಾಗೂ ಯಕ್ಷೇಶ್ವರಿ ಯಕ್ಷಗಾನ ಸಂಸ್ಥೆಯ ಸಹಯೋಗದಲ್ಲಿ ಇದೇ 24ರಂದು ಸಂಜೆ 5.30ಕ್ಕೆ ವಿದ್ಯಾರಣ್ಯಪುರದ ಎಂ.ಇ.ಎಸ್ ಪ್ರೊ.ಬಿ.ಆರ್. ಸುಬ್ಬರಾವ್ ಪದವಿಪೂರ್ವ ಮಹಾವಿದ್ಯಾಲಯದಲ್ಲಿ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನ ನಡೆಯಲಿದೆ. ಈ ಪ್ರದರ್ಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಉಚಿತ ಪ್ರವೇಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ಸಂಗೀತ ಕಛೇರಿ 25ಕ್ಕೆ

ಬೆಂಗಳೂರು: ಏಮ್ ಫಾರ್ ಸೇವಾದಿಂದ ಜ. 25ರಂದು ಸಂಜೆ 6.30ಕ್ಕೆ ಜಯನಗರದ ಎನ್‌ಎಂಕೆಆರ್‌ವಿ ಪಿಯು ಕಾಲೇಜಿನಲ್ಲಿ 'ಹೇ ಗೋವಿಂದ' ಭಕ್ತಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗಾಯಕ ಜಯತೀರ್ಥ ಮೇವುಂಡಿ ಅವರಿಗೆ ಪ್ರವೀಣ್ ಗೋಡ್ಖಿಂಡಿ (ಕೊಳಲು), ಬಸವರಾಜ್ ಹಿರೇಮಠ (ಹಾರ್ಮೋನಿಯಂ), ರಾಜೇಂದ್ರ ನಾಕೋಡ್ (ತಬಲಾ), ಸುಕದ್ ಮಾಣಿಕ್ ಮುಂಡೆ (ಪಕ್ವಾಜ್), ಸೂರ್ಯಕಾಂತ್ ಗೋಪಾಲ್ ಸುರ್ವೆ (ಸೈಡ್ ರಿದಂ) ಸಾಥ್ ನೀಡಲಿದ್ದಾರೆ.

'ಅಣ್ಣನ ನೆನಪು' ನಾಟಕ ಪ್ರದರ್ಶನ 25ಕ್ಕೆ



ಅಣ್ಣನ ನೆನಪು ನಾಟಕದ ದೃಶ್ಯ

ಬೆಂಗಳೂರು: ತೇಜಸ್ವಿ ವಿಸ್ಮಯ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದ ಅಂಗವಾಗಿ ಇದೇ 25ರಂದು ಸಂಜೆ 5.15ಕ್ಕೆ ಲಾಲ್‌ಬಾಗ್‌ನಲ್ಲಿ ಪ್ರವರ ಥಿಯೇಟರ್‌ನಿಂದ 'ಅಣ್ಣನ ನೆನಪು' ನಾಟಕ ಪ್ರದರ್ಶನ ಆಯೋಜಿಸಿದೆ.

ಹನು ರಾಮಸಂಜೀವ ಅವರು ಈ ನಾಟಕದ ವಿನ್ಯಾಸ ಮತ್ತು ನಿರ್ದೇಶನ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 96868 69676.

'ಯಾಮಿನಿ' ಸಂಗೀತ ಕಛೇರಿ 25ರಂದು

ಬೆಂಗಳೂರು: ಸ್ಪಿಕ್ ಮೆಕೆ ಸಂಸ್ಥೆಯಿಂದ ಜ.25ರಂದು ಸಂಜೆ 7.30ಕ್ಕೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ 'ಯಾಮಿನಿ–2026' ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಗಾಯಕರಾದ ಸಿಕ್ಕಿಲ್ ಗುರುಚರಣ್, ಜಯತೀರ್ಥ ಮೇವುಂಡಿ ಅವರಿಗೆ ಯು.ಕೆ. ಶಿವರಾಮನ್ (ಮೃದಂಗ), ಲಾರ್ಸ್ ಮುಲ್ಲರ್ (ಸ್ಯಾಕ್ಸೊಫೋನ್), ಉಸ್ತಾದ್ ಬಹಾವುದ್ದೀನ್ ದಾಗರ್ (ರುದ್ರ ವೀಣಾ), ಕಲೀಶಾಬಿ ಮಹಬೂಬ್ (ನಾದಸ್ವರ) ಸಾಥ್ ನೀಡಲಿದ್ದಾರೆ. ಶುವನಾ ನಾರಾಯಣ್ ಕಥಕ್ ನೃತ್ಯ ಪ್ರದರ್ಶನ ನೀಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಇದೆ ಎಂದು ಪ್ರಕಟಣೆ ತಿಳಿಸಿದೆ.



ಜಯತೀರ್ಥ ಮೇವುಂಡಿ

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

'ಅಧಿವೇಶನ ವ್ಯರ್ಥ ಪ್ರಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ವಿಶೇಷ ಅಧಿವೇಶನ ಕರೆದು ಕೇಂದ್ರ ಸರ್ಕಾರ ಯೋಜನೆಗೆ ಅಡ್ಡಗಾಲು ಹಾಕಲು ಪ್ರಯತ್ನ ಮಾಡುತ್ತಿದೆ. ಯೋಜನೆ ವಿರುದ್ಧದ ನಿರ್ಣಯದಿಂದ ಯಾವುದೇ ಪ್ರಯೋಜನವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ವಿಶೇಷ ಅಧಿವೇಶನದಲ್ಲಿ ವಿಬಿ–ಜಿ ರಾಮ್ ಜಿ ಯೋಜನೆಯ ವಿರುದ್ಧ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಸರ್ಕಾರದ ಇಂತಹ ಧೋರಣೆಯಿಂದ ರಾಜ್ಯಕ್ಕೆ ಏನು ಪ್ರಯೋಜನ? ಸರ್ಕಾರಕ್ಕೆ ಅಧಿವೇಶನ ನಡೆಸುವ ಅಗತ್ಯ ಇರಲಿಲ್ಲ. ಸಚಿವರು, ಪ್ರಧಾನಮಂತ್ರಿ ಅವರನ್ನು ನೇರವಾಗಿ ಭೇಟಿ ಮಾಡಬಹುದಿತ್ತು. ಅಧಿವೇಶನದ ನಿರ್ಣಯಗಳಿಂದ ಆಡಳಿತಾತ್ಮಕ ಪ್ರಯೋಜನ ಆಗುವುದಿಲ್ಲ. ಇಂತಹ ವಿಷಯಗಳಲ್ಲಿ ರಾಜಕೀಯ ಮಾಡಬಾರದು ಎಂದರು.

ಯೋಜನೆ ಕುರಿತು ಅರಿವು ಮೂಡಿಸಲು ಎಲ್ಲ ಶಾಸಕರು, ಮುಖಂಡರ ಜತೆ ಸಭೆ ನಡೆಸಲಾಗುತ್ತದೆ. ಈ ಬಗ್ಗೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿದ್ದು, ಅವರೂ ಸೇರಿದಂತೆ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾಗವಹಿಸಲಿದ್ದಾರೆ ಎಂದು ಅಶೋಕ ಅವರು ಮಾಹಿತಿ ನೀಡಿದರು.

ಕಿದ್ವಾಯಿ ಆಸ್ಪತ್ರೆಗೆ ಪ್ರಥಮ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮ ಆಸ್ಪತ್ರೆಗಳ ಸಮೀಕ್ಷೆಯಲ್ಲಿ ನಗರದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕರ್ನಾಟಕದ ಪೈಕಿ ಪ್ರಥಮ ಸ್ಥಾನ ಪಡೆದಿದೆ.

2025ರಲ್ಲಿ 'ದಿ ವೀಕ್ ಹನ್ಸಾ ಸಂಶೋಧನಾ ಸಮೀಕ್ಷೆ'ಯಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಭಾರತದಲ್ಲಿ 5ನೇ ಸ್ಥಾನ, ಕ್ಯಾನ್ಸರ್ ಆರೈಕೆಯಡಿ ಸರ್ಕಾರಿ ಆಸ್ಪತ್ರೆಗಳ ಪೈಕಿ ಕಿದ್ವಾಯಿ 3ನೇ ಸ್ಥಾನ ಪಡೆದಿದೆ ಎಂದು ಸಂಸ್ಥೆಯ ನಿರ್ದೇಶಕರಾದ ಡಾ.ಟಿ.ನವೀನ್ ತಿಳಿಸಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಅತ್ಯಾಧುನಿಕ ಕ್ಯಾನ್ಸರ್ ಆರೈಕೆ ಮತ್ತು ತಂತ್ರಜ್ಞಾನ ಆಧಾರಿತ ಸೇವೆ ಒದಗಿಸುತ್ತಿದೆ. ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿ ತಡೆಗಟ್ಟುವಿಕೆ, ಆರಂಭಿಕ ಹಂತದಲ್ಲೇ ಪತ್ತೆಹಚ್ಚುವಲ್ಲಿ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿ ಫೆರಿಫೆರಲ್ ಕ್ಯಾನ್ಸರ್ ಘಟಕ ನಿರ್ಮಿಸಿ ರೋಗಿಗಳಿಗೆ ಶೀಘ್ರ ತಪಾಸಣೆ ನಡೆಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

'ಸರ್ಕಾರಿ ಶಾಲೆಗಳನ್ನು ಮುಚ್ಚಬೇಡಿ'

ಬೆಂಗಳೂರು: 'ಗ್ರಾಮ ಪಂಚಾಯಿತಿಗಳಲ್ಲಿ ಮ್ಯಾಗ್ನೆಟ್ ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಿ, ರಾಜ್ಯದಲ್ಲಿರುವ 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ' ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಆರೋಪಿಸಿದೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿಎಸ್‌ಒನ ರಾಜ್ಯ ಘಟಕದ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, 'ಬಡ ಮಕ್ಕಳಿಂದ ಶಿಕ್ಷಣವನ್ನು ಕಸಿಯುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಕೈಬಿಡಬೇಕು' ಎಂದರು.

ಎಡ ವಿದ್ಯಾರ್ಥಿ ಸಂಘಟನೆಗಳ ಮುಖಂಡರಾದ ವೀಣಾ ನಾಯ್ಕ್, ವಿಜಯ್‌ಕುಮಾರ್ ಟಿ.ಎಸ್., ಸುಶಾಂತ್ ದುರ್ಗೇಶ್ ಇದ್ದರು.

ಫೆ.1ರಂದು '5ಕೆ ಸೇಫ್-ಎ-ಥಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಸುರಕ್ಷತೆಯ ನಿಯಮಗಳನ್ನು ಅರಿತುಕೊಂಡರೆ ಅಪಘಾತಗಳನ್ನು ಕಡಿಮೆ ಮಾಡಲು ಸಾಧ್ಯ. ಅದಕ್ಕಾಗಿ ಫೆ.1ರಂದು ಬೆಳಿಗ್ಗೆ 6ಕ್ಕೆ '5ಕೆ ಸೇಫ್-ಎ-ಥಾನ್'ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ನಮ್ಮ ರಸ್ತೆ-ನಮ್ಮ ಸುರಕ್ಷತೆ ಎಂಬ ಧ್ಯೇಯವಾಕ್ಯದೊಂದಿಗೆ ನಡೆಯಲಿರುವ ಕಾರ್ಯಕ್ರಮ ಇದು. ರಸ್ತೆ ಅಪಘಾತ ತಡೆಗಟ್ಟಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶ. ನಡಿಗೆ, ಸೈಕ್ಲಿಂಗ್ ಹಾಗೂ ಓಟ ಒಳಗೊಂಡ ಅಭಿಯಾನವಿದು' ಎಂದರು.

ಭಾಗವಹಿಸಲು ಆಸಕ್ತಿ ಇರುವವರು www.saferoadskarnataka.com ಜಾಲತಾಣದ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಯಾವುದೇ ಶುಲ್ಕ ಇರುವುದಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಲಮಂಡಳಿ ಫೋನ್ ಇನ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮಪ್ರಸಾತ್ ಮನೋಹರ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ (ಜ.23) ಬೆಳಿಗ್ಗೆ 9.30 ರಿಂದ 10.30 ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆ-ಗಳನ್ನು ಬಗೆಹರಿಸಿಕೊಳ್ಳಬಹುದು.

ದೂರವಾಣಿ ಸಂಖ್ಯೆ 080-22945119 ಮತ್ತು 080-22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರು ನೀಡುವಂತೆ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪತ್ನಿ ಕೊಂದ ಪತಿ, ಕೆಲಸಗಾರನ ಸೆರೆ

ಉಸಿರುಗಟ್ಟಿಸಿ ಕೊಲೆ ಮಾಡಿ ನೇಣು ಹಾಕಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ


ವಿರೂಪಾಕ್ಷ


ಪುಂಡಲೀಕ

ಬೆಂಗಳೂರು: ಪತ್ನಿ ಕೊಲೆ ಮಾಡಿದ್ದ ಪತಿ ಹಾಗೂ ಅವರೊಂದಿಗೆ ಕೆಲಸ ಮಾಡುತ್ತಿದ್ದ ಯುವಕನನ್ನು ಆರ್.ಆರ್ ನಗರ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಸಂತೆಮಾವತ್ತೂರು ಗ್ರಾಮದ ಎಸ್.ಆಶಾ ಅವರನ್ನು ಜ.10ರಂದು ಆರೋಪಿಗಳು ಕೊಲೆ ಮಾಡಿ, ನೇಣುಹಾಕಿದ್ದರು.

ರಾಜರಾಜೇಶ್ವರಿ ನಗರದ ಚನ್ನಸಂದ್ರದ ನಿವಾಸಿ, ಆಶಾ ಅವರ ಪತಿ ವಿರೂಪಾಕ್ಷಗೌಡ (29) ಹಾಗೂ ಗುಟ್ಟಹಳ್ಳಿಯ ಪುಂಡಲೀಕ ಜಾನಪ್ಪ ಲಮಾಣಿ (19) ಬಂಧಿತರು.

ಆಶಾ ಅವರ ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿ ಅವರ ಸಹೋದರ ಅರುಣ್‌ಕುಮಾರ್ ಅವರು ನೀಡಿದ ದೂರಿನ ಮೇಲೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತುಮಕೂರಿನ ವಿರೂಪಾಕ್ಷ ಗೌಡ ಅವರು ಆಶಾ ಅವರನ್ನು ಪ್ರೀತಿಸಿ ಮದುವೆ ಆಗಿದ್ದರು. ರಾಜರಾಜೇಶ್ವರಿ ನಗರದಲ್ಲಿ ದಂಪತಿ ನೆಲಸಿದ್ದರು. ವಿರೂಪಾಕ್ಷ ಅವರು ಆರ್‌ಆರ್ ನಗರದಲ್ಲಿ ಚಾಟ್ಸ್ ಅಂಗಡಿ ನಡೆಸುತ್ತಿದ್ದರು. ಅದೇ ಅಂಗಡಿಯಲ್ಲಿ ವಿಜಯಪುರದ ಮುದ್ದೇಬಿಹಾಳದ ಗೆದ್ದಲಮರಿ ಗ್ರಾಮದ ಪುಂಡಲೀಕ ಜಾನಪ್ಪ ಅವರು ಕೆಲಸ ಮಾಡುತ್ತಿದ್ದರು. ಕಳೆದ ಒಂದು ವರ್ಷದಿಂದ ಆಶಾ ಅವರನ್ನು ವಿರೂಪಾಕ್ಷ ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಕೆಲಸಕ್ಕೂ ಹೋಗುತ್ತಿರಲಿಲ್ಲ. ಆಶಾ ಅವರೇ ಕೆಲಸಕ್ಕೆ ಹೋಗಿ ಮನೆಯ ಬಾಡಿಗೆ ಕಟ್ಟುತ್ತಿದ್ದರು. ಆಶಾ ದುಡಿದ ಹಣವನ್ನೂ ಪತಿ ಮದ್ಯ ಸೇವನೆಗೆ ಬಳಸಿಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

ದಂಪತಿಯ ಮಧ್ಯೆ ಹೊಂದಾಣಿಕೆ ಇಲ್ಲದೇ ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಇತ್ತೀಚೆಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯು ವಿಚಾರಣೆ ಹಂತದಲ್ಲಿತ್ತು. ಜ.10ರಂದು ದಂಪತಿ ನಡುವೆ ಜಗಳ ವಿಕೋಪಕ್ಕೆ ಹೋಗಿ ವಿರೂಪಾಕ್ಷ ಹಾಗೂ ಪುಂಡಲೀಕ ಸೇರಿಕೊಂಡು ಆಶಾ ಅವರನ್ನು ಕೊಲೆ ಮಾಡಿ ನೇಣು ಹಾಕಿದ್ದರು.

ಮರಣೋತ್ತರ ಪರೀಕ್ಷೆ ನಡೆಸಿದ್ದ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರು, ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ ಎಂದು ವರದಿ ನೀಡಿದ್ದರು. ವರದಿ ಆಧರಿಸಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮದ್ಯ ಕುಡಿದು ಗಲಾಟೆ: ಗಂಡನ ಕೊಂದ ಪತ್ನಿ

ಮದ್ಯ ಕುಡಿದ ಬಳಿಕ ಮನೆಗೆ ಬಂದು ಗಲಾಟೆ ಮಾಡುತ್ತಿದ್ದ ಪತಿಯನ್ನು ಕೊಲೆ ಮಾಡಿದ ಪತ್ನಿಯನ್ನು ಬೊಮ್ಮನಹಳ್ಳಿ ಠಾಣೆಯ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಲಕ್ಷ್ಮಿ (42) ಬಂಧಿತ ಮಹಿಳೆ. ಬೊಮ್ಮನಹಳ್ಳಿಯ ಹೊಂಗಸಂದ್ರದಲ್ಲಿ ಮಂಗಳವಾರ ರಾತ್ರಿ ಈ ಕೃತ್ಯ ನಡೆದಿದೆ.

ಪತಿ ಮುರುಗೇಶ್ (50) ಅವರ ಎದೆಗೆ ಲಕ್ಷ್ಮಿ ಅವರು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮುರುಗೇಶ್–ಲಕ್ಷ್ಮಿ ದಂಪತಿಗೆ ಮೂವರು ಹೆಣ್ಣುಮಕ್ಕಳು. ಮೂವರನ್ನೂ ಮದುವೆ ಮಾಡಿಕೊಡಲಾಗಿದೆ.

ಕೂಲಿ ಕೆಲಸ ಮಾಡುತ್ತಿದ್ದ ಮುರುಗೇಶ್ ಅವರಿಗೆ ಮದ್ಯ ಸೇವಿಸುವ ಅಭ್ಯಾಸವಿತ್ತು. ಪ್ರತಿನಿತ್ಯ ಪಾನಮತ್ತರಾಗಿ ಮನೆಗೆ ಬಂದು ಪತ್ನಿಯ ಜತೆಗೆ ಜಗಳವಾಡುತ್ತಿದ್ದರು. ಅದೇ ರೀತಿ ಮಂಗಳವಾರ ರಾತ್ರಿ ಸಹ ಮದ್ಯ ಸೇವಿಸಿ, ಬಂದು ಜಗಳವಾಡಿ ಹಲ್ಲೆ ನಡೆಸಿದ್ದರು. ಇದರಿಂದ ಕೆರಳಿದ ಲಕ್ಷ್ಮಿ ಅವರು ಕೋಪದಲ್ಲಿ ಪತಿಯ ಎದೆಗೆ ಚಾಕು ಇರಿದಿದ್ದಾರೆ. ಪರಿಣಾಮ ತೀವ್ರ ರಕ್ತಸ್ರಾವವಾಗಿ ಮುರುಗೇಶ್, ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ದುಗ್ಗಣ್ಣನಿಗೆ ರತ್ನಾಕರವರ್ಣಿ ಪ್ರಶಸ್ತಿ

ಬೆಂಗಳೂರು: ದಕ್ಷಿಣ ಕನ್ನಡ ಜೈನ ಮೈತ್ರಿಕೂಟ ನೀಡುವ 2026ನೇ ಸಾಲಿನ 'ಮಹಾಕವಿ ರತ್ನಾಕರವರ್ಣಿ' ಪ್ರಶಸ್ತಿಗೆ ಮೂಲ್ಕಿಯ ಎಂ. ದುಗ್ಗಣ್ಣ ಸಾವಂತ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಸ್ಮರಣ ಸಂಚಿಕೆ ಒಳಗೊಂಡಿದೆ.


ಎಂ. ದುಗ್ಗಣ್ಣ ಸಾವಂತ

ಜ. 26ರಂದು (ಸೋಮವಾರ) ಮಧ್ಯಾಹ್ನ 3.30ಕ್ಕೆ ಬಸವನಗುಡಿಯ ಧರ್ಮಸ್ಥಳ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆಯುವ ಮೈತ್ರಿಕೂಟದ ವಾರ್ಷಿಕೋತ್ಸವ ಸಮಾರಂಭದಲ್ಲಿ ಚಕ್ರವರ್ತಿ ಸೂಲಿಬೆಲೆ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಮೈತ್ರಿಕೂಟದ ಅಧ್ಯಕ್ಷ ಡಿ. ಸುರೇಂದ್ರ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಭೇಟಿ ನೀಡಿ ಮಾಹಿತಿ ಪಡೆದರು

ಟ್ರಾಮಾ ಸೆಂಟರ್ ಮಾರ್ಚ್‌ನಲ್ಲಿ ಲೋಕಾರ್ಪಣೆ: ಸಚಿವ

ಬೆಂಗಳೂರು: 'ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯ ನೂತನ ಕಟ್ಟಡದಲ್ಲಿ ನಿರ್ಮಿಸಿರುವ ಟ್ರಾಮಾ ಕೇರ್ ಸೆಂಟರ್ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾಗಲಿದೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆಸ್ಪತ್ರೆಗೆ ಬುಧವಾರ ಭೇಟಿ ನೀಡಿ ವಿವಿಧ ಕಾಮಗಾರಿ ಪರಿಶೀಲಿಸಿ, ಸಮಸ್ಯೆ ಆಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಬೆಂಗಳೂರು ಉತ್ತರ ಭಾಗ ಮತ್ತು ಸುತ್ತಮುತ್ತಲ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಟ್ರಾಮಾ ಸೆಂಟರ್ ನಿರ್ಮಿಸಲಾಗಿದೆ. 50 ಹಾಸಿಗೆಯ ಸೌಲಭ್ಯದ ಸೆಂಟರ್‌ನಲ್ಲಿ 14 ಎಚ್‌ಡಿಯು ಹಾಸಿಗೆ, 15 ಐಸಿಯು, 2 ಶಸ್ತ್ರಚಿಕಿತ್ಸೆ ಕೊಠಡಿಯ ಸೌಲಭ್ಯ ಇರಲಿದೆ. ಬ್ಲಡ್ ಬ್ಯಾಂಕ್, ಡಿಎನ್‌ಬಿ ಅಧ್ಯಯನಕ್ಕಾಗಿ ನೂತನ ಕಟ್ಟಡ ಸಿದ್ಧವಾಗುತ್ತಿದೆ' ಎಂದು ತಿಳಿಸಿದರು.

'ತಾಯಿ–ಮಕ್ಕಳ ಆಸ್ಪತ್ರೆಯು ಸುಸಜ್ಜಿತ ಕಟ್ಟಡದಲ್ಲಿ ಡಿಸೆಂಬರ್ ವೇಳೆಗೆ ಲೋಕಾರ್ಪಣೆ ಆಗಲಿದೆ. ಆಸ್ಪತ್ರೆ ಸಿಬ್ಬಂದಿ ಕೊರತೆ ನೀಗಿಸಲಾಗುವುದು. ಅಗತ್ಯಬಿದ್ದರೆ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳುತ್ತೇವೆ' ಎಂದರು.

ಆಸ್ಪತ್ರೆಯ ಆವರಣದಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆಯ ಕೇಂದ್ರ, ಮಕ್ಕಳ ಐಸಿಯು ಕೇಂದ್ರ, ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ದಿನೇಶ್ ಗುಂಡೂರಾವ್ ಭೇಟಿ ನೀಡಿ, ರೋಗಿಗಳಿಂದ ಮಾಹಿತಿ ಪಡೆದರು.

ಸಾಮಾಜಿಕ ಜಾಲತಾಣಗಳ ಮೂಲಕ ಅಶ್ಲೀಲ ಸಂದೇಶ ರವಾನೆ

ತರಬೇತುದಾರರಿಗೆ ಕಿರುಕುಳ: ಸೆರೆ

ಪ್ರಜಾವಾಣಿ ವಾರ್ತೆ


ಸುಧೀರ್ ಕುಮಾರ್

ಬೆಂಗಳೂರು: ಮಹಿಳಾ ಫಿಟ್ನೆಸ್ ತರಬೇತುದಾರರೊಬ್ಬರಿಗೆ ಸಾಮಾಜಿಕ ಜಾಲ ತಾಣಗಳ ಮೂಲಕ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ದಕ್ಷಿಣ ವಿಭಾಗದ ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹರಿಯಾಣದ ಸುಧೀರ್ ಕುಮಾರ್ ಬಂಧಿತ. ಆರೋಪಿ ಅಶ್ಲೀಲ ಸಂದೇಶ ಕಳುಹಿಸಿದ್ದ ಸ್ಕ್ರೀನ್‌ಶಾಟ್ ಸಹಿತ 34 ವರ್ಷದ ಫಿಟ್ನೆಸ್ ತರಬೇತುದಾರರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಹರಿಯಾಣದ ಯುವತಿ, ಕಳೆದ 15 ವರ್ಷಗಳಿಂದ ನಗರದಲ್ಲಿ ಫಿಟ್ನೆಸ್ ತರಬೇತುದಾರರಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ವರ್ಷ ಹರಿಯಾಣದಲ್ಲಿ ಕುಟುಂಬಸ್ಥರ ಮನೆಗೆ ಯುವತಿ ಹೋಗಿದ್ದರು. ಅದೇ ಮನೆಗೆ ಆರೋಪಿಯೂ ಬಂದಿದ್ದ. ಆಗ ದೂರುದಾರರನ್ನು ಆರೋಪಿ ನೋಡಿದ್ದ. ನಂತರ, ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಮೂಲಕ ಅವರನ್ನು ಪರಿಚಯಿಸಿಕೊಂಡು ಕಿರುಕುಳ ನೀಡಲಾರಂಭಿಸಿದ್ದ. ಅಶ್ಲೀಲ ಸಂದೇಶ ಹಾಗೂ ಫೋಟೊಗಳನ್ನು ಕಳುಹಿಸುತ್ತಿದ್ದ. ಆರೋಪಿಯ ಕೃತ್ಯದಿಂದ ಬೇಸತ್ತಿದ್ದ ಯುವತಿ, ಆತನ ಖಾತೆಯನ್ನು ಬ್ಲಾಕ್ ಲೀಸ್ಟ್‌ಗೆ ಸೇರಿಸಿದ್ದರು. ಆದರೂ ಆತ ಬೇರೆ ಬೇರೆ ಖಾತೆಗಳ ಮೂಲಕ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದ ಎಂಬುದು ಗೊತ್ತಾಗಿದೆ.

ಜ.12ರಂದು ಬೆಂಗಳೂರಿಗೆ ಬಂದಿದ್ದ ಆರೋಪಿ, ಬನಶಂಕರಿ ಮೂರನೇ ಹಂತದಲ್ಲಿರುವ ಜಿಮ್ ಬಳಿ ತೆರಳಿ ಯುವತಿಯ ಕುರಿತು ಆಕೆಯ ಸ್ನೇಹಿತರ ಬಳಿ ವಿಚಾರಿಸಿದ್ದ. ಆರೋಪಿ ಬೆಂಗಳೂರಿಗೆ ಬಂದು ಹುಡುಕಾಟ ನಡೆಸುತ್ತಿರುವ ಮಾಹಿತಿ ತಿಳಿದು ಆತಂಕಗೊಂಡಿದ್ದ ಯುವತಿ ದೂರು ನೀಡಿದ್ದರು. ಆ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಮೊಬೈಲ್ ವಶಕ್ಕೆ ಪಡೆದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಲ್ಯಾಂಬೋರ್ಗಿನಿ ಕಾರು ಚಾಲಕನ ವಿರುದ್ಧ ಎಫ್‌ಐಆರ್

ಇಲ್ಲಿನ ಮೈಸೂರು ರಸ್ತೆಯಲ್ಲಿ ಅತಿ ವೇಗವಾಗಿ ಕಾರು ಚಾಲನೆ ಮಾಡಿ ಪಾದಚಾರಿಗಳು ಹಾಗೂ ವಾಹನ ಸವಾರರ ಜೀವಕ್ಕೆ ಅಪಾಯ ಉಂಟುಮಾಡಿದ್ದ ಲ್ಯಾಂಬೋರ್ಗಿನಿ ಕಾರು ಚಾಲಕನ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರಸ್ತೆಯ ರಾಜರಾಜೇಶ್ವರಿನಗರ ಆರ್ಚ್ ಬಳಿ 2025ರ ಡಿ.14ರಂದು ಹಸಿರು ಬಣ್ಣದ ಲ್ಯಾಂಬೋರ್ಗಿನಿ ಕಾರು ಅತಿ ವೇಗದಲ್ಲಿ ಸಂಚರಿಸಿತ್ತು. ಈ ದೃಶ್ಯವನ್ನು ಸಹ ವಾಹನ ಸವಾರರು, ಮೊಬೈಲ್‌ನಲ್ಲಿ ಸೆರೆಹಿಡಿದು, ಜ.19 ರಂದು 'ಎಕ್ಸ್' ಖಾತೆಯಲ್ಲಿ ಅದರ ವಿಡಿಯೊ ಪೋಸ್ಟ್ ಮಾಡಿದ್ದರು. ಕೆಂಗೇರಿ ಸಂಚಾರ ಠಾಣೆ ಪೊಲೀಸರು, ವಿಡಿಯೊ ಪರಿಶೀಲನೆ ನಡೆಸಿದಾಗ, ಅತಿ ವೇಗವಾಗಿ ಕಾರು ಚಾಲನೆ ಮಾಡಿದ್ದು ಪತ್ತೆಯಾಗಿತ್ತು. ಲ್ಯಾಂಬೋರ್ಗಿನಿ ಕಾರಿನ ನೋಂದಣಿ ಸಂಖ್ಯೆ ಆಧರಿಸಿ ವಾಹನದ ಮಾಲೀಕರನ್ನು ಪತ್ತೆ ಹಚ್ಚಿ, ಪ್ರಕರಣ ದಾಖಲಿಸಿದ್ದಾರೆ ಎಂದು ಗೊತ್ತಾಗಿದೆ.

'ಇಂದಿರಾನಗರದ ರೇವತಿಕುಮಾರ್ ಎಂಬುವರಿಗೆ ಸೇರಿದ ಲ್ಯಾಂಬೋರ್ಗಿನಿ ಕಾರಿನಲ್ಲಿ ಅವರ ಸಂಬಂಧಿ ರಾಜೇಂದ್ರ ಎಂಬುವರು ಡಿ.14ರಂದು ಕಾರು ಚಾಲನೆ ಮಾಡಿಕೊಂಡು ಮೈಸೂರಿಗೆ ಹೋಗಿದ್ದರು. ಅತಿ ವೇಗವಾಗಿ ಮತ್ತು ಪಥ ಬದಲಿಸುತ್ತಾ ಕಾರು ಚಾಲನೆ ಮಾಡಿದ್ದರು. ಅಲ್ಲದೇ ಕಾರಿನ ಸೈಲೆನ್ಸರ್ ಸಹ ಮಾರ್ಪಾಡು ಮಾಡಲಾಗಿತ್ತು. ಸಂಚಾರ ನಿಯಮ ಉಲ್ಲಂಘನೆ ಮಾಡಿರುವುದು ವಿಡಿಯೊದಲ್ಲಿ ಸ್ಪಷ್ಟವಾಗಿ ದಾಖಲಾಗಿದೆ. ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ, ಕಾರು ಜಪ್ತಿ ಮಾಡಿದ್ದೇವೆ' ಎಂದು ಸಂಚಾರ ಪೊಲೀಸರು ಹೇಳಿದರು.

ಆರ್‌ಟಿಒ ಅಧಿಕಾರಿಗಳು ಸಹ ಪ್ರತ್ಯೇಕವಾಗಿ ದೂರು ದಾಖಲಿಸಿ ದಂಡ ವಿಧಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಲ್ಯಾಂಬೋರ್ಗಿನಿ ಕಾರನ್ನು ರೇವತಿಕುಮಾರ್ ಅವರು ಮಹಾರಾಷ್ಟ್ರದಲ್ಲಿ ಖರೀದಿಸಿದ್ದರು. ರಾಜ್ಯದ ಸಾರಿಗೆ ಇಲಾಖೆಗೆ ತೆರಿಗೆ ಪಾವತಿಸಿದ್ದರು. ಆದರೆ, ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದಕ್ಕೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಆರೋಪಿ, ಅಧಿಕಾರಿಗಳ ಸಂಘಟಿತ ಅಪರಾಧ: ರಾಜ್ಯ ಸರ್ಕಾರ

'ಬಿಕ್ಲು ಶಿವು ಕೊಲೆ: ಪೊಲೀಸರೇ ಭಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರ ಪಾತ್ರದ ಜೊತೆಗೆ ನಮ್ಮದೇ ಸ್ಥಳೀಯ ಹಿರಿ–ಕಿರಿಯ ಪೊಲೀಸ್ ಅಧಿಕಾರಿಗಳ ಪಾತ್ರವೂ ಇದೆ. ಇದೊಂದು ಸಂಘಟಿತ ಅಪರಾಧ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಪ್ರಕರಣದ ಐದನೇ ಆರೋಪಿಯಾಗಿರುವ ಬಸವರಾಜ ಅವರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಐಡಿ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಇದೇ ಹಿನ್ನೆಲೆಯಲ್ಲಿ ಕೆಲವು ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳಿಗೆ ನೋಟಿಸ್ ಕೂಡಾ ಜಾರಿ ಮಾಡಲಾಗಿದ್ದು, ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ನಾವು ಸಾಮಾನ್ಯ ವ್ಯಕ್ತಿಯ ಜತೆ ವ್ಯವಹರಿಸುತ್ತಿಲ್ಲ. ಶಾಸಕ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಬಲವಾಗಿರುವ ವ್ಯಕ್ತಿಯೊಬ್ಬರ ಜೊತೆ ವ್ಯವಹರಿಸುತ್ತಿದ್ದೇವೆ. ಇದೆಲ್ಲವನ್ನೂ ಮರೆಮಾಚಿ ರಾಜಕೀಯ ದುರುದ್ದೇಶದಿಂದ ಬೈರತಿ ಬಸವರಾಜ ಅವರನ್ನು ಬಂಧಿಸಲು ಪ್ರಾಸಿಕ್ಯೂಷನ್ ಯತ್ನಿಸುತ್ತಿದೆ ಎಂದು ಹೇಳುವುದು ಅಪಪ್ರಚಾರ. ಅಧಿಕಾರಿಗಳ ಪಾತ್ರ ಬಯಲು ಮಾಡಲು ಬೈರತಿ ಅವರನ್ನು ಕಸ್ಟಡಿಗೆ ಪಡೆದೇ ತನಿಖೆ ನಡೆಸಬೇಕಿದೆ' ಎಂದರು.

'ಬಿಕ್ಲು ಶಿವು ತಾಯಿ ಮಾಧ್ಯಮವೊಂದಕ್ಕೆ ನೀಡಿರುವ ಹೇಳಿಕೆಯನ್ನೇ ಬೈರತಿ ಬಸವರಾಜ ಗುರಾಣಿಯಂತೆ ಬಳಸುತ್ತಿದ್ದಾರೆ. ಸಂತ್ರಸ್ತೆ ಹೇಗೆಲ್ಲಾ ಹೇಳಿಕೆ ನೀಡುವಂತೆ ಮಾಡಲಾಗಿದೆ ಎಂಬುದು ಗೊತ್ತಿದೆ. ಇದರಲ್ಲಿ ನಮ್ಮ ಪೊಲೀಸರೂ ಭಾಗಿಯಾಗಿದ್ದು, ಇದರ ಸಂಪೂರ್ಣ ಮಾಹಿತಿಯನ್ನು ಕಲೆ ಹಾಕಬೇಕಿದೆ. ಅದಕ್ಕಾಗಿ ಬೈರತಿ ಬಸವರಾಜ ಅವರನ್ನು ಕಸ್ಟಡಿಗೆ ಪಡೆದೇ ತನಿಖೆ ನಡೆಸಬೇಕಿದೆ. ಇದರಲ್ಲಿ ಸಂಘಟಿತ ಅಪರಾಧ ಮತ್ತು ಕೊಲೆ ನಡೆದಿದೆ' ಎಂದು ಬಲವಾಗಿ ಪ್ರತಿಪಾದಿಸಿದರು.

ಕೊಲೆ, ಕೊಲೆ ಯತ್ನ: ಐವರಿಗೆ ಜೀವಾವಧಿ ಶಿಕ್ಷೆ

ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಚನ್ನಕೇಶವ ನಗರದ 9ನೇ ಕ್ರಾಸ್‌ನಲ್ಲಿ ನಡೆದಿದ್ದ ಕೊಲೆ ಹಾಗೂ ಕೊಲೆ ಯತ್ನ ಪ್ರಕರಣದ ಆರು ಅಪರಾಧಿಗಳಿಗೆ ನಗರದ 63ನೇ ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಮಂಗಳವಾರ ಆದೇಶಿಸಿದೆ.

ಕಡ್ಡಿಬಾಬು ಅಲಿಯಾಸ್ ಬಾಬು, ಚಿನ್ನಪ್ಪ ಅಲಿಯಾಸ್ ಚಿನ್ನಿ, ಬುರುಗಪ್ಪ ಅಲಿಯಾಸ್ ಬುರುಗ, ಅಂಥೋಣಿ ಸ್ವಾಮಿ, ಕೆ.ಶ್ರೀನಿವಾಸ ಅಲಿಯಾಸ್ ಕೋಟೆ ಗಾರ್ಡನ್ ಸೀನಪ್ಪ ಶಿಕ್ಷೆಗೆ ಒಳಗಾದ ಅಪರಾಧಿಗಳು.

ಇದೇ ಪ್ರಕರಣದಲ್ಲಿ ರಮೇಶ್ ಅಲಿಯಾಸ್ ಆಂಧ್ರ ರಮೇಶ್ ಎಂಬಾತನೂ ಕೃತ್ಯದಲ್ಲಿ ಭಾಗಿ ಆಗಿರುವುದು ನ್ಯಾಯಾಲಯದ ವಿಚಾರಣೆಯಲ್ಲಿ ಸಾಬೀತಾಗಿದ್ದು, ಆತ ಕೆಲವು ತಿಂಗಳ ಹಿಂದೆ ಮೃತಪಟ್ಟಿದ್ದಾನೆ.

ಆರು ಮಂದಿ ಅಪರಾಧಿಗಳು ಸೇರಿಕೊಂಡು 2011ರ ಮಾರ್ಚ್ 21ರಂದು ಬಸವರಾಜ್ ಎಂಬುವರನ್ನು ಕೊಲೆ ಮಾಡಿದ್ದರು. ಅಶ್ವಥ್ ನಾರಾಯಣ ಹಾಗೂ ರಾಜು ಅವರನ್ನು ಕೊಲೆ ಮಾಡಲು ಯತ್ನಿಸಿದ್ದರು. ಅಪರಾಧಿಗಳಿಗೆ ಹಲ್ಲೆ ನಡೆಸಿದ್ದರಿಂದ ಅಶ್ವಥ್ ನಾರಾಯಣ ಹಾಗೂ ರಾಜು ಅವರು ಗಂಭೀರವಾಗಿ ಗಾಯಗೊಂಡಿದ್ದರೆ, ಬಸವರಾಜ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದರು.

ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಅಂದಿನ ತನಿಖಾಧಿಕಾರಿ ವಿ.ಕೆ. ವಾಸುದೇವ್ ಅವರು (ಪ್ರಸ್ತುತ ಅವರು ಮಡಿವಾಳ ಉಪ ವಿಭಾಗದ ಎಸಿಪಿ) ಪ್ರಕರಣದ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಅಪರಾಧಿಗಳಿಗೆ ಜ.20ರಂದು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದ್ದಾರೆ.

ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ವೆಂಕಟರಾವ್ ಹಾಗೂ ವಕೀಲೆ ರಾಖಿ ವೈದ್ಯ ಅವರು ವಾದ ಮಂಡನೆ ಮಾಡಿದ್ದರು.

ಗುಜರಾತ್ ವಾಹನಗಳಿಗೆ ಎಫ್‌ಸಿ ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್ ರಾಜ್ಯದ ವಾಹನಗಳನ್ನು ಪರಿಶೀಲಿಸದೇ ನಿಯಮ ಬಾಹಿರವಾಗಿ ವಾಹನ ಸಾಮರ್ಥ್ಯ ಪ್ರಮಾಣಪತ್ರ (ಎಫ್‌ಸಿ) ನೀಡಿದ್ದ ಹಿರಿಯ ಮೋಟಾರು ವಾಹನ ನಿರೀಕ್ಷಕ ನಿಸಾರ್ ಅಹಮದ್ ಅವರನ್ನು ಅಮಾನತು ಮಾಡಲಾಗಿದೆ.

ಗುಜರಾತ್ ರಾಜ್ಯದ ಸಾರಿಗೆ ಕಚೇರಿಯ ಇ-ಡಿಟೆಕ್ಷನ್ ತಂಡವು ವಾಹನ ಇ-ಡಿಟೆಕ್ಷನ್ ಪೋರ್ಟಲ್‌ನಲ್ಲಿ ಲಭ್ಯವಿರುವ ಡೇಟಾವನ್ನು ಪರಿಶೀಲಿಸಿದಾಗ, 41 ವಾಹನಗಳನ್ನು ಕರ್ನಾಟಕ ರಾಜ್ಯದ ಆರ್‌ಟಿಒ ಕಚೇರಿಗಳಲ್ಲಿ ತಪಾಸಣೆ ಮಾಡಿ ನಮೂನೆ-38-ಎ (ಸಾಮರ್ಥ್ಯ ಪ್ರಮಾಣಪತ್ರ) ನೀಡಿರುವುದು ಕಂಡುಬಂದಿತ್ತು. ಆದರೆ, ಅದೇ ದಿನ ಆ ವಾಹನಗಳು ಗುಜರಾತ್‌ನಲ್ಲಿರುವ ಟೋಲ್ ಪ್ಲಾಜಾಗಳ ಮೂಲಕ ಹಾದು ಹೋಗಿದ್ದವು. ಎಫ್‌ಸಿಯನ್ನು ನಿಸಾರ್ ಅಹಮದ್ ಅನುಮೋದಿಸಿರುವುದಾಗಿ ಗುಜರಾತ್‌ನ ಗಾಂಧಿನಗರ ಸಾರಿಗೆ ಆಯುಕ್ತರ ಕಚೇರಿಯ ಉಪ ನಿರ್ದೇಶಕ ತಿಳಿಸಿದ್ದರು.

ಈ ಮಾಹಿತಿ ಪಡೆದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕಾನೂನು ಕ್ರಮ ಕೈಗೊಳ್ಳುವಂತೆ ಸಾರಿಗೆ ಆಯುಕ್ತ ಎ.ಎಂ.ಯೋಗೇಶ್ ಅವರಿಗೆ ಸೂಚನೆ ನೀಡಿದ್ದರು. ಈ ಬಗ್ಗೆ ವರದಿ ನೀಡುವಂತೆ ಬೆಂಗಳೂರು ನಗರ ವಿಭಾಗದ ಜಂಟಿ ಸಾರಿಗೆ ಆಯುಕ್ತರಿಗೆ ಯೋಗೇಶ್ ಸೂಚಿಸಿದ್ದರು.

ಕೇಂದ್ರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕರಾಗಿರುವ ನಿಸಾರ್ ಅಹಮದ್ ಅರ್ಹತಾ ಪತ್ರ (ಸಾಮರ್ಥ್ಯ ಪ್ರಮಾಣಪತ್ರ) ನವೀಕರಣ ಮಾಡಿರುವುದು ಇಲಾಖೆ ವಾಹನ್ 4.0 ತಂತ್ರಾಂಶದಿಂದ ದೃಢಪಟ್ಟಿದೆ. 41 ವಾಹನಗಳು ಅದೇ ದಿನ ಗುಜರಾತ್‌ನಲ್ಲಿದ್ದುದೂ ಕಂಡುಬಂದಿದೆ. ವಾಹನಗಳನ್ನು ಭೌತಿಕವಾಗಿ ಪರಿಶೀಲನೆ ಮಾಡದೇ ನಿಯಮಬಾಹಿರವಾಗಿ ಅನುಮೋದನೆ ಮಾಡುವ ಮೂಲಕ ಕರ್ತವ್ಯ ಲೋಪ ವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು. ಅದರಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ.

ಸುಗಮ ಸಂಚಾರ ಕನಸಿನ ಮಾತು

ಹಳೆ ಮದ್ರಾಸ್ ರಸ್ತೆ, ಎನ್‌ಜಿಇಎಫ್ ವೃತ್ತ, ಕೆ.ಆರ್.ಪುರ ಸುತ್ತಮುತ್ತ ದಟ್ಟಣೆ: ಇನ್ನೂ ಸಿಗದ ಪರಿಹಾರ

• ಎ.ಎಂ.ಸುರೇಶ

ಬೆಂಗಳೂರು: ಪೂರ್ವಭಾಗದಿಂದ ನಗರ ಪ್ರವೇಶಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗಗಳಲ್ಲಿ ಒಂದಾಗಿರುವ ಹಳೆ ಮದ್ರಾಸ್ ರಸ್ತೆಯಲ್ಲಿ ಅತಿ ಹೆಚ್ಚು ವಾಹನದಟ್ಟಣೆ ಇದ್ದು, ಸುಗಮ ಸಂಚಾರ ಎನ್ನುವುದು ಪ್ರಯಾಣಿಕರಿಗೆ ಕನಸಿನ ಮಾತಾಗಿದೆ.

ಹಳೆ ಮದ್ರಾಸ್ ರಸ್ತೆಯ ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣದಿಂದ ಕೆ.ಆರ್.ಪುರ ಬಳಿಯ ಭಟ್ರಹಳ್ಳಿ ವರೆಗೆ ಸದಾ ವಾಹನದಟ್ಟಣೆ ಇರುತ್ತದೆ. ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿದ್ದು, ಸಮಸ್ಯೆ ತುಂಬಾ ಗಂಭೀರವಾಗಿದೆ. ಆದರೆ, ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನವೇ ಆಗಿಲ್ಲ.

ನಗರಪ್ರದೇಶದಲ್ಲಿ ಬರುವ ರಾಮಮೂರ್ತಿ ನಗರ, ಕೆ.ಆರ್.ಪುರ, ಎ.ನಾರಾಯಣಪುರ, ಬಿ.ನಾರಾಯಣ ಪುರ, ಮಹದೇವಪುರ, ಹೂಡಿ, ವೈಟ್‌ಫೀಲ್ಡ್ ಮೊದಲಾದ ಪ್ರದೇಶಗಳಿಗೆ ತೆರಳುವ ವಾಹನಗಳು ಅಷ್ಟೇ ಅಲ್ಲದೆ, ಹೊಸಕೋಟೆ, ಕೋಲಾರ, ಚಿಂತಾಮಣಿ, ಮಾಲೂರು, ಬಂಗಾರಪೇಟೆಗೆ ಹೋಗುವ ವಾಹನಗಳೂ ಇದೇ ಮಾರ್ಗದಲ್ಲಿ ಸಂಚರಿಸುತ್ತವೆ.

ಅಷ್ಟೇ ಅಲ್ಲದೆ, ಆಂಧ್ರಪ್ರದೇಶ, ಚೆನ್ನೈಗೆ ಹೋಗುವ ವಾಹನಗಳು ಈ ಮಾರ್ಗದಲ್ಲೇ ಸಾಗುತ್ತವೆ. ಬೆಂಗಳೂರು–ಚೆನ್ನೈ ಕಾರಿಡಾರ್ ಆದ ಬಳಿಕ, ಹೊಸೂರು ಮೂಲಕ ಚೆನ್ನೈಗೆ ಹೋಗುವ ಬದಲು ಈ ಮಾರ್ಗದಲ್ಲಿಯೇ ಸಂಚರಿಸುವವರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ದಟ್ಟಣೆ ದಿನದಿಂದ ದಿನಕ್ಕೆ ತೀವ್ರಸ್ವರೂಪ ಪಡೆದುಕೊಳ್ಳುತ್ತಿದೆ.

ಎಲ್ಲೆಲ್ಲಿ ದಟ್ಟಣೆ?

- ಎನ್‌ಜಿಇಎಫ್ ವೃತ್ತ
- ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ಸಿಗ್ನಲ್
- ಐಟಿಐ ಗೇಟ್
- ಕೆ.ಆರ್.ಪುರ
- ಭಟ್ರಹಳ್ಳಿ ಸಿಗ್ನಲ್

ಸಂಚಾರ ಸಂಕಟ


ಐಟಿಪಿಎಲ್, ಹೂಡಿ, ಮಹದೇವ ಪುರ ಭಾಗದಲ್ಲಿ ಐ.ಟಿ ಕಂಪನಿಗಳು ಹೆಚ್ಚಾಗಿವೆ. ಕಂಪನಿ ವಾಹನಗಳು, ಉದ್ಯೋಗಿಗಳು ತೆರಳುವ ಕ್ಯಾಬ್‌ಗಳು, ಸ್ವಾಮಿ ವಿವೇಕಾನಂದ, ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಗಳಿಗೆ ಬರುವವರು ಈ ಮಾರ್ಗದಲ್ಲೇ ಸಂಚರಿಸುವುದರಿಂದ ನಿತ್ಯ ಸಂಚಾರ ದಟ್ಟಣೆಯ ಸಮಸ್ಯೆಯಲ್ಲಿ ಸಿಲುಕಿ ಪ್ರಯಾಣಿಕರು ಒದ್ದಾಡು ವಂತಾಗಿದೆ.

ಸುಗಮ ಸಂಚಾರಕ್ಕೆ ಅನುಕೂಲ ವಾಗಲಿ ಎಂಬ ಉದ್ದೇಶದಿಂದ ಸುಮಾರು 23 ವರ್ಷಗಳ ಹಿಂದೆ ಕೆ.ಆರ್.ಪುರ ರೈಲು ನಿಲ್ದಾಣದ ಬಳಿ ತೂಗು ಸೇತುವೆ ನಿರ್ಮಿಸಲಾಗಿತ್ತು. ಆದರೆ, ಇದಾದ ನಂತರವೂ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಟಿನ್ ಫ್ಯಾಕ್ಟರಿಯಿಂದ ಐಟಿಐವರೆಗೆ ತೂಗು ಸೇತುವೆ ಇದ್ದು, ಇದರ ಮೇಲೆಯೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

ಎನ್‌ಜಿಇಎಫ್ ವೃತ್ತದ ಬಳಿ ಹರಸಾಹಸ: ಈ ವೃತ್ತದಲ್ಲಿ ಸಿಗ್ನಲ್ ದಾಟಿ ಮುಂದಕ್ಕೆ ಹೋಗಲು ದಟ್ಟಣೆ ಅವಧಿಯಲ್ಲಿ ಕೆಲವೊಮ್ಮೆ 10ರಿಂದ 15 ನಿಮಿಷ ಕಾಯಬೇಕಾಗುತ್ತದೆ. ಸಿಗ್ನಲ್‌ನಿಂದಾಗಿ ಹಳೆ ವಿಮಾನ ನಿಲ್ದಾಣದಿಂದ ಬರುವ ವಾಹನಗಳು ಕಿ.ಮೀ. ವರೆಗೂ ನಿಂತಿರುತ್ತವೆ. ಅಷ್ಟೇ ಅಲ್ಲದೆ ಮುಖ್ಯ ರಸ್ತೆಯಲ್ಲಿ(ಹಳೆ ಮದ್ರಾಸ್ ರಸ್ತೆ) ಬೈಯಪ್ಪನಹಳ್ಳಿ ಪೊಲೀಸ್ ಠಾಣೆವರೆಗೂ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ.

ಕೃಷ್ಣಯ್ಯನಪಾಳ್ಯ, ಸದಾನಂದ ನಗರ ಮೊದಲಾದ ಪ್ರದೇಶಗಳಿಂದ ಬರುವ ವಾಹನಗಳಿಗೆ ಎನ್‌ಜಿಇಎಫ್ ಬಳಿ ಹಳೆ ಮದ್ರಾಸ್ ರಸ್ತೆ ಪ್ರವೇಶಿಸಲು ಅವಕಾಶ ಇಲ್ಲ. ಈ ಕಡೆಯಿಂದ ಬರುವವರು ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ಹತ್ತಿರದ ಸಿಗ್ನಲ್‌ಗೆ ತಲುಪಿ, ಅಲ್ಲಿ ಯು–ಟರ್ನ್ ಪಡೆಯಬೇಕು. ಹೀಗಾಗಿ, ವಾಹನಗಳು ಬೇಗ ಮುಂದಕ್ಕೆ ಹೋಗುವುದಿಲ್ಲ. ದಟ್ಟಣೆಗೆ ಇದೂ ಒಂದು ಕಾರಣ ಎನ್ನುತ್ತಾರೆ ಪೊಲೀಸರು.

ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ದಾಟಿದ ನಂತರ ಎಡಕ್ಕೆ ಆರ್‌ಎಂಝಡ್ ಮೊದಲಾದ ಕಂಪನಿಗಳಿವೆ. ಬಲಕ್ಕೆ ಗೋಪಾಲನ್ ಮಾಲ್ ಇದೆ. ಇನ್ನು ನಾಗವಾರ ಪಾಳ್ಯದಿಂದ ಬರುವ ವಾಹನಗಳಿಗೆ ನೇರವಾಗಿ ಹಳೆ ಮದ್ರಾಸ್ ರಸ್ತೆ ಪ್ರವೇಶಿಸಲು ಅವಕಾಶ ಇಲ್ಲ.



ಹಳೆ ಮದ್ರಾಸ್ ರಸ್ತೆಯ ಟಿನ್ ಫ್ಯಾಕ್ಟರಿ ಬಳಿ ಉಂಟಾಗಿದ್ದ ವಾಹನ ದಟ್ಟಣೆ –ಚಿತ್ರಗಳು: ರಂಜು ಪಿ

ಅವರು ಎಡಕ್ಕೆ ತಿರುಗಿ ಪೊಲೀಸ್ ಠಾಣೆವರೆಗೂ ಬಂದು, ಅಲ್ಲಿ ಯು–ಟರ್ನ್ ಪಡೆಯಬೇಕು. ಹೀಗಾಗಿ, ಎರಡೂ ಕಡೆ ವಾಹನಗಳ ದಟ್ಟಣೆ ಕಂಡುಬರುತ್ತಿದೆ.

ಟಿನ್ ಫ್ಯಾಕ್ಟರಿ ಬಳಿ ಮೊದಲಿಗೆ ಹೋಲಿಸಿದರೆ ಸ್ವಲ್ಪಮಟ್ಟಿಗೆ ಸಮಸ್ಯೆ ಬಗೆಹರಿದಿದೆ. ನಗರದಿಂದ ಹೊರಗೆ ಹೋಗುವ ವಾಹನಗಳು ಹೆಚ್ಚು ಹೊತ್ತು ಅಲ್ಲಿ ನಿಲ್ಲುವುದಿಲ್ಲ. ಆದರೆ, ನಗರಕ್ಕೆ ಪ್ರವೇಶಿಸುವಾಗ ತುಂಬಾ ಹೊತ್ತು ತೂಗು ಸೇತುವೆ ಮೇಲೆಯೇ ವಾಹನಗಳು ನಿಂತಿರುತ್ತವೆ. ಹೊರ ವರ್ತುಲ ರಸ್ತೆ ಕಡೆಯಿಂದ ಬರುವ ವಾಹನಗಳು ಹಾಗೂ ತೂಗು ಸೇತುವೆ ಮೇಲಿಂದ ಬರುವ ವಾಹನಗಳು ಒಮ್ಮೆಲೇ ಹಳೆ ಮದ್ರಾಸ್ ರಸ್ತೆ ಪ್ರವೇಶಿಸುವುದನ್ನು ತಪ್ಪಿಸಲು ಅಲ್ಲಿ ಸಿಗ್ನಲ್ ಅಳವಡಿಸಲಾಗಿದೆ. ತೂಗು ಸೇತುವೆ ಮೇಲೆ ವಾಹನಗಳು ಹೆಚ್ಚು ಹೊತ್ತು ನಿಲ್ಲುವುದಕ್ಕೆ ಈ ಅಂಶವೂ ಕಾರಣವಾಗಿದೆ.

ಭಟ್ರಹಳ್ಳಿಯಿಂದ ಸಮಸ್ಯೆ ಶುರು: ಹೊಸಕೋಟೆ ಕಡೆಯಿಂದ ಬರುವ ವಾಹನಗಳು ಭಟ್ರಹಳ್ಳಿವರೆಗೂ ಸುಗಮವಾಗಿ ಸಾಗುತ್ತವೆ. ಅಲ್ಲಿ ಸಿಗ್ನಲ್ ಇದ್ದು ಅಲ್ಲಿಂದಲೇ ಸಂಚಾರ ದಟ್ಟಣೆ ಶುರುವಾಗುತ್ತದೆ. ಅಯ್ಯಪ್ಪನಗರ ಕಡೆಯಿಂದ ಬರುವ ವಾಹನಗಳು ಈ ಸಿಗ್ನಲ್ ಬಳಿ ಮುಖ್ಯರಸ್ತೆಗೆ ತಿರುವು ಪಡೆಯುತ್ತವೆ. ಇಲ್ಲಿ ರಸ್ತೆ ಕಿರಿದಾಗಿರುವುದರಿಂದ ದಟ್ಟಣೆಯಲ್ಲಿ ಸಿಲುಕಿ, ವಾಹನಗಳು ನಿಧಾನವಾಗಿ ಚಲಿಸುತ್ತವೆ.



ಎನ್‌ಜಿಇಎಫ್‌ನಿಂದ ಕೃಷ್ಣರಾಜಪುರ ರೈಲು ನಿಲ್ದಾಣದ ವರೆಗೆ ಸಮಸ್ಯೆ ಇದೆ. 4ಕಿ.ಮೀ. ಚಲಿಸಲು ಕೆಲವೊಮ್ಮೆ ಒಂದು ಗಂಟೆಗೂ ಹೆಚ್ಚು ಸಮಯ ಬೇಕಾಗುತ್ತದೆ. ಸಿಗ್ನಲ್‌ಗಳನ್ನು ದಾಟಿ ಹೋಗಲು ನಿತ್ಯ ಹರಸಾಹಸ ಮಾಡಬೇಕು

ಮಲ್ಲೇಶಪ್ಪ, ಬೈಕ್ ಸವಾರ



ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ಸ್ವಲ್ಪ ಮುಂದೆ ಸಾಗಿ, ಯು–ಟರ್ನ್ ಪಡೆದು ಎನ್‌ಜಿಇಎಫ್ ವೃತ್ತಕ್ಕೆ ಬರಲು ಅರ್ಧ ಗಂಟೆ ಬೇಕಾಗುತ್ತದೆ. ಎನ್‌ಜಿಇಎಫ್ ಬಳಿ ಮೇಲ್ಸೇತುವೆ ಇಲ್ಲವೇ ಅಂಡರ್‌ಪಾಸ್ ನಿರ್ಮಾಣ ಮಾಡಬೇಕು

ಪಾಂಡು, ಆಟೊ ಚಾಲಕ

ರಸ್ತೆ ಬದಿ ವ್ಯಾಪಾರ: ಸಂಚಾರಕ್ಕೆ ಅಡ್ಡಿ

ಕೃಷ್ಣರಾಜಪುರ ಬಸ್ ನಿಲ್ದಾಣ ದಾಟಿ ಮುಂದಕ್ಕೆ ಹೋಗುತ್ತಿದ್ದಂತೆಯೇ ರಸ್ತೆಯ ಎಡ ಭಾಗದಲ್ಲಿ ಟೆಂಪೊಗಳನ್ನು ನಿಲ್ಲಿಸಿಕೊಂಡು ಕಲ್ಲಂಗಡಿ ಹಣ್ಣು, ಪಪ್ಪಾಯ, ಅನಾನಸ್ ಸೇರಿದಂತೆ ಹಣ್ಣು–ತರಕಾರಿಗಳನ್ನು ಮಾರಾಟ ಮಾಡುವುದು ಕಂಡು ಬರುತ್ತದೆ.

ವಾಹನಗಳಲ್ಲಿ ಹೋಗುವವರು ರಸ್ತೆಯಲ್ಲೇ ಕಾರುಗಳನ್ನು ನಿಲ್ಲಿಸಿ ಹಣ್ಣುಗಳ ಖರೀದಿಗೆ ಮುಂದಾಗುತ್ತಾರೆ. ಇದರಿಂದ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ವಾಹನಗಳು ನಿಧಾನಗತಿಯಲ್ಲಿ ಸಾಗಲು ರಸ್ತೆಬದಿ ವ್ಯಾಪಾರವೂ ಕಾರಣವಾಗಿದೆ. ವ್ಯಾಪಾರಿಗಳಿಗೆ ಬೇರೆ ಕಡೆ ಅವಕಾಶ ಮಾಡಿಕೊಡುವ ಮೂಲಕ, ರಸ್ತೆಯಲ್ಲಿ ವಾಹನಗಳು ಸುಲಲಿತವಾಗಿ ಸಾಗಲು ಅವಕಾಶ ಮಾಡಿಕೊಡಬೇಕು ಎಂಬುದು ಈ ಭಾಗದ ಜನರ ಬೇಡಿಕೆ.

ರಸ್ತೆಬದಿಯಲ್ಲಿ ಮಾರಾಟ ಮಾಡುತ್ತಿದ್ದ 200 ಮಂದಿಯ ವಿರುದ್ಧ ಈಗಾಗಲೇ ಪ್ರಕರಣ ದಾಖಲಿಸಲಾಗಿದೆ. ಇದು ನಿರಂತರ ಪ್ರಕ್ರಿಯೆ. ನಮ್ಮ ಕಡೆಯಿಂದ ತೆರವಿಗೆ ಪ್ರಯತ್ನಗಳು ನಡೆದಿವೆ ಎಂದು ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಿ.ಜೆ.ಚೈತನ್ಯ ತಿಳಿಸಿದರು.



ಹಳೆ ಮದ್ರಾಸ್ ರಸ್ತೆಯಲ್ಲಿನ ವಾಹನ ದಟ್ಟಣೆ

‘ಮೇಲ್ಸೇತುವೆ ನಿರ್ಮಾಣವಾಗಬೇಕು’

ಈ ಮಾರ್ಗದಲ್ಲಿ ದಿನದಿಂದ ದಿನಕ್ಕೆ ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ದಟ್ಟಣೆ ತಡೆಯುವುದು ಅಸಾಧ್ಯ. ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಭಟ್ರಹಳ್ಳಿಯಿಂದ ಇಂದಿರಾ ನಗರದ ವರೆಗೆ ಮೇಲ್ಸೇತುವೆ ನಿರ್ಮಾಣವಾಗಬೇಕು ಎಂಬುದು ಸ್ಥಳೀಯರ ಬೇಡಿಕೆ.

ರಸ್ತೆಗಳು ಇದ್ದಷ್ಟೇ ಇವೆ. ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಅಧಿಕಾರಿಗಳು, ರಾಜಕಾರಣಿಗಳ ಆದಾಯವೂ ಹೆಚ್ಚಾಗಿದೆ. ಆದರೆ, ಸಂಚಾರ ದಟ್ಟಣೆ ತಡೆಯಲು ಏನು ಮಾಡಬೇಕು ಎಂದು ಯೋಚಿಸಲು ಜನಪ್ರತಿನಿಧಿಗಳಿಗೆ ಸಮಯವಿಲ್ಲ ಎಂದು ಖಾಸಗಿ ಸಂಸ್ಥೆಯ ಉದ್ಯೋಗಿ ನಾಗರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಎನ್‌ಜಿಇಎಫ್ ಬಳಿ ಮೇಲ್ಸೇತುವೆ ನಿರ್ಮಾಣ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದರು. ಆದರೆ, ಇದರ ಅನುಷ್ಠಾನಕ್ಕೆ ಇದುವರೆಗೆ ಯಾವುದೇ ಪ್ರಯತ್ನಗಳು ಆಗಿಲ್ಲ. ಘೋಷಣೆಯಾಗಿಯೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಮೊದಲ ಬಜೆಟ್‌ಗೆ ಕೇಂದ್ರ ನಗರ ಪಾಲಿಕೆ ಸಿದ್ಧತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳು ಮೊದಲ ಬಜೆಟ್ ಮಂಡಿಸಲು ಸಿದ್ಧತೆ ಆರಂಭಿಸಿವೆ.

ಐದು ನಗರ ಪಾಲಿಕೆಗಳಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ಬಜೆಟ್ ತಯಾರಿಸಲು ಮೊದಲ ಹೆಜ್ಜೆ ಇರಿಸಿದ್ದು, ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

2026–27ನೇ ಸಾಲಿನ ಬಜೆಟ್‌ಗೆ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ನಾಗರಿಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಸಂಘ ಸಂಸ್ಥೆಗಳು ಜನವರಿ 27ರೊಳಗೆ ಸಲಹೆಗಳನ್ನು ನೀಡಬಹುದು. ಮೂಲಸೌಕರ್ಯ, ಸಾರ್ವಜನಿಕ ಆರೋಗ್ಯ, ಸುರಕ್ಷತೆ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಆದ್ಯತೆ ನೀಡಿ, ಸಮಗ್ರ ಹಾಗೂ ಸುಸ್ಥಿರ ನಗರ ಅಭಿವೃದ್ಧಿಗೆ ಪೂರಕವಾದ ಬಜೆಟ್ ಸಿದ್ಧಪಡಿಸಲು ಅನುವಾಗುವಂತೆ ಸಲಹೆಗಳನ್ನು ನೀಡಬಹುದು ಎಂದು ಕೇಂದ್ರ ನಗರ ಪಾಲಿಕೆ ಅಭಿವೃದ್ಧಿ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಉಪ ನಿಯಂತ್ರಕರು (ಹಣಕಾಸು), 16ನೇ ಮಹಡಿ, ಪಿಯುಬಿ ಕಟ್ಟಡ, ಎಂ.ಜಿ. ರಸ್ತೆ, ಈ ಕಚೇರಿಯ ಮುಖ್ಯದ್ವಾರದ ಬಳಿ ಇರಿಸಿರುವ ಸಲಹೆ ಪೆಟ್ಟಿಗೆಗೆ ಬಜೆಟ್‌ನ ಸಲಹೆಗಳನ್ನು ಹಾಕಬಹುದು. dcfbccc@gmail.com ಗೆ ಇ-ಮೇಲ್ ಕೂಡ ಕಳುಹಿಸಬಹುದು ಎಂದರು.

ಕಾಮಗಾರಿ ಚುರುಕುಗೊಳಿಸಿ ನಿರ್ಮಲಾನಂದನಾಥ ಸ್ವಾಮಿ



ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಕೆಂಪೇಗೌಡ ಅಧ್ಯಯನ ಕೇಂದ್ರ ಕಟ್ಟಡದ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸುವಂತೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸೂಚಿಸಿದರು. ಕಾಮಗಾರಿಯ ಪ್ರಗತಿ ಪರಿಶೀಲಿಸಿದ ಬಳಿಕ ಅವರು ಮಾತನಾಡಿ, ‘2017ರಲ್ಲಿ ಈ ಕಟ್ಟಡದ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ್ದೆ. ರಾಜ್ಯ ಸರ್ಕಾರ ಮತ್ತು ಜಿಬಿಎ ಅನುದಾನದ ₹50 ಕೋಟಿ ವೆಚ್ಚದೊಂದಿಗೆ, 3 ಎಕರೆ ಪ್ರದೇಶದಲ್ಲಿ ಈ ಕಟ್ಟಡ ನಿರ್ಮಾಣಗೊಳ್ಳುತ್ತಿದ್ದು, ಈಗಾಗಲೇ ಶೇ 50ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಉಳಿದ ಕಾಮಗಾರಿಗಳನ್ನು ಶೀಘ್ರ ಮುಗಿಸಬೇಕಿದೆ’ ಎಂದು ತಿಳಿಸಿದರು.

‘ನೂತನ ಕಟ್ಟಡವು ಕೆಂಪೇಗೌಡರ ಪರಂಪರೆ ಬಿಂಬಿಸುವ ಭವನ, ಸಭಾಂಗಣ, ಆಡಳಿತ ಕಚೇರಿ, ವಸ್ತು ಸಂಗ್ರಹಾಲಯವನ್ನು ಒಳಗೊಂಡಿದೆ. ಅವರ ಜೀವನ ಚರಿತ್ರೆ, ಆಡಳಿತ ಶೈಲಿ, ನಗರ ನಿರ್ಮಾಣ ಕಾರ್ಯ, ಗುಡಿ ಗೋಪುರ, ಕೆರೆಕಟ್ಟೆಗಳ ನಿರ್ಮಾಣ ಕಾರ್ಯಗಳ ಕುರಿತು ಸಮಗ್ರ ಮಾಹಿತಿ ಒದಗಿಸುವ ಉದ್ದೇಶದಿಂದ ನಿರ್ಮಾಣಗೊಳ್ಳುತ್ತಿದೆ’ ಎಂದರು. ಕೆಂಪೇಗೌಡರ 25 ಅಡಿ ಅಶ್ವಾರೋಹಿ ಪ್ರತಿಮೆ ಸ್ಥಾಪಿಸಲಾಗುವುದು ಎಂದು ಮಾಹಿತಿ ನೀಡಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ., ಕುಲಸಚಿವೆ ಕೆ.ಟಿ. ಶಾಂತಲಾ, ಪರೀಕ್ಷಾಂಗ ಕುಲಸಚಿವ ಸಿ.ಎಸ್. ಕರಿಗಾರ್, ಕೆಂಪೇಗೌಡ ಅಧ್ಯಯನ ಕೇಂದ್ರದ ನಿರ್ದೇಶಕ ಎಸ್.ಪುಟ್ಟಸ್ವಾಮಯ್ಯ ಉಪಸ್ಥಿತರಿದ್ದರು.

₹244 ಕೋಟಿ ಅನುದಾನಕ್ಕೆ ಕತ್ತರಿ

ಬಿಎಸ್‌ಡಬ್ಲ್ಯುಎಂಎಲ್: ಪಾಲಿಕೆ ಆಸ್ತಿ ಸಂಗ್ರಹದಲ್ಲಿ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ತೆರಿಗೆ ಸಂಗ್ರಹ ಹಾಗೂ ಸಂಪನ್ಮೂಲ ಕೊರತೆಯಿಂದ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಅನುದಾನದಲ್ಲಿ ₹244.65 ಕೋಟಿಗೆ ಕತ್ತರಿ ಬಿದ್ದಿದೆ.

ಬಿಬಿಎಂಪಿ ಅಸ್ತಿತ್ವದಲ್ಲಿದ್ದಾಗ ಮಂಡಿಸಲಾದ 2025–26ನೇ ಸಾಲಿನ ಬಜೆಟ್‌ನಲ್ಲಿ, ಘನತ್ಯಾಜ್ಯ ಸಂಗ್ರಹ, ಸಾಗಣೆಗೆ ಮೀಸಲಿಟ್ಟಿದ್ದ ಅನುದಾನದಲ್ಲಿ ಶೇ 16ರಷ್ಟು ಮೊತ್ತ ಕಡಿತವಾಗಿದೆ. ಬಿಬಿಎಂಪಿ ಇದ್ದಾಗ ಅನುದಾನ ಸರಿಯಾಗಿ ಪಾವತಿಯಾಗಿತ್ತು. ನಗರ ಪಾಲಿಕೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಬಿಎಸ್‌ಡಬ್ಲ್ಯುಎಂಎಲ್‌ಗೆ ಅನುದಾನ ವರ್ಗಾವಣೆ ಆಗಿಲ್ಲ.

ಐದು ನಗರ ಪಾಲಿಕೆಗಳಿಂದ ಬಿಎಸ್‌ಡಬ್ಲ್ಯುಎಂಎಲ್ ನೀಡಬೇಕಾಗಿರುವ ಹಣವನ್ನು ಈವರೆಗೆ ಪಾವತಿಸಿಲ್ಲವಾದ್ದರಿಂದ, ಜಿಬಿಎಯ ಕೆನರಾ ಬ್ಯಾಂಕ್‌ನಲ್ಲಿ ಆಸ್ತಿ ತೆರಿಗೆ ಸಂಗ್ರಹಕ್ಕೆ ತೆರೆಯಲಾಗಿರುವ ಖಾತೆಯಿಂದ ₹100 ಕೋಟಿಯನ್ನು ಐದು ನಗರ ಪಾಲಿಕೆಗಳಿಗೆ ವರ್ಗಾಯಿಸಿ, ಐದು ನಗರ ಪಾಲಿಕೆಗಳಿಂದ ಬಿಎಸ್‌ಡಬ್ಲ್ಯುಎಂಎಲ್‌ಗೆ ತಕ್ಷಣವೇ ವರ್ಗಾಯಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ಜಿಬಿಎ ಮುಖ್ಯ ಆಯುಕ್ತರು ಬಿಎಸ್‌ಡಬ್ಲ್ಯುಎಂಎಲ್‌ಗೆ ನಗರ ಪಾಲಿಕೆಗಳಿಂದ ಸಕಾಲದಲ್ಲಿ ಅಗತ್ಯ ಅನುದಾನ ಬಿಡುಗಡೆ ಮಾಡುವುದು ಅತ್ಯವಶ್ಯ. ಆದ್ದರಿಂದ, ಆಸ್ತಿ ತೆರಿಗೆಯಲ್ಲಿ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸುವ ಬಳಕೆದಾರ ಶುಲ್ಕ ಹಾಗೂ ಉಪಕರಗಳನ್ನು ವರ್ಗಾಯಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದರು. ಅದರಂತೆ, ಜ.20ರಂದು ಆದೇಶ ಹೊರಡಿಸಲಾಗಿದ್ದು, ಐದು ನಗರ ಪಾಲಿಕೆಗಳು ಕೂಡಲೇ ₹88.68 ಕೋಟಿಯನ್ನು ಬಿಎಸ್‌ಡಬ್ಲ್ಯುಎಂಎಲ್ ವರ್ಗಾಯಿಸುವಂತೆ ಸೂಚಿಸಲಾಗಿದೆ.

ಅಂಕಿ ಅಂಶಗಳು

₹1,500 ಕೋಟಿ 2025–26ನೇ ಸಾಲಿನ ಬಿಬಿಎಂಪಿ ಬಜೆಟ್‌ನಲ್ಲಿ ಬಿಎಸ್‌ಡಬ್ಲ್ಯುಎಂಎಲ್‌ಗೆ ಮೀಸಲಿರಿಸಿದ್ದ ಅನುದಾನ	**₹627.37 ಕೋಟಿ** ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಿಎಸ್‌ಡಬ್ಲ್ಯುಎಂಎಲ್‌ಗೆ ಬಾಕಿ ಇರುವ ಹಣ
₹872.63 ಕೋಟಿ ಬಿಬಿಎಂಪಿ ಅಸ್ತಿತ್ವದಲ್ಲಿದ್ದಾಗ ಬಿಎಸ್‌ಡಬ್ಲ್ಯುಎಂಎಲ್‌ಗೆ ವರ್ಗಾವಣೆಯಾದ ಹಣ	**₹382.72 ಕೋಟಿ** ಐದು ನಗರ ಪಾಲಿಕೆಗಳಿಂದ ಬಿಎಸ್‌ಡಬ್ಲ್ಯುಎಂಎಲ್‌ಗೆ ವರ್ಗಾವಣೆಯಾಗುವ ಮೊತ್ತ

ಆಗಸ್ಟ್‌ನಿಂದ ಬಿಲ್ ಪಾವತಿಸಿಲ್ಲ

ಘನತ್ಯಾಜ್ಯ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಗೆ 2025ರ ಆಗಸ್ಟ್‌ನಿಂದ ಬಿಎಸ್‌ಡಬ್ಲ್ಯುಎಂಎಲ್ ಬಿಲ್ ಪಾವತಿ ಮಾಡಿಲ್ಲ. ಘನತ್ಯಾಜ್ಯ ಸಂಗ್ರಹ, ಸಾಗಣೆ, ವಿಲೇವಾರಿಗೆ ಸಂಬಂಧಿಸಿದಂತೆ 2025ರ ಜನವರಿಯಿಂದ ಜುಲೈವರೆಗಿನ ವೆಚ್ಚವನ್ನು ಬಿಬಿಎಂಪಿ ಭರಿಸಿದೆ. ಆಗಸ್ಟ್‌ನಿಂದ ನವೆಂಬರ್ 2025ರವರೆಗೆ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಣೆ ಬಿಲ್ಲುಗಳ ಪಾವತಿಗೆ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಬಿಎಸ್‌ಡಬ್ಲ್ಯುಎಂಎಲ್, ಐದು ನಗರ ಪಾಲಿಕೆಗಳಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದರೂ, ಪಾಲಿಕೆಗಳ ವತಿಯಿಂದ ಅನುದಾನ ಬಿಡುಗಡೆ ಆಗಿಲ್ಲ ಎಂದು ನಗರಾಭಿವೃದ್ಧಿಗೆ ಇಲಾಖೆಗೆ ಜಿಬಿಎ ಮುಖ್ಯ ಆಯುಕ್ತರು ಸಲ್ಲಿಸಿರುವ ಪ್ರಸ್ತಾವದಲ್ಲೇ ನಮೂದಾಗಿದೆ.

ಅನುದಾನ ಕಡಿತವಾಗಿರುವ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ನಗರಾಭಿವೃದ್ಧಿ ಇಲಾಖೆ ಆದೇಶವನ್ನು ಪರಿಶೀಲಿಸುತ್ತೇನೆ

ಕರೀಗೌಡ, ಸಿಇಒ, ಬಿಎಸ್‌ಡಬ್ಲ್ಯುಎಂಎಲ್

ಬಿಎಸ್‌ಡಬ್ಲ್ಯುಎಂಎಲ್ ವತಿಯಿಂದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕಸದ ಸಂಗ್ರಹ ಸಾಗಣೆ, ಸಂಸ್ಕರಣೆ, ಕಸದ ಭೂಭರ್ತಿ ಘಟಕ ನಿರ್ವಹಣೆ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಹಾಗೂ ಸುಪ್ರೀಂ ಕೋರ್ಟ್, ಹೈಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಾಲಕಾಲಕ್ಕೆ ಹೊರಡಿಸಿರುವ ನಿರ್ದೇಶನಗಳನ್ನು ಪಾಲಿಸಬೇಕು. ಘನತ್ಯಾಜ್ಯ ನಿರ್ವಹಣಾ ನಿಯಮಗಳು–2016 ಅನ್ನು ಪಾಲಿಸುವುದು ಐದು ನಗರ ಪಾಲಿಕೆಗಳು, ಬಿಎಸ್‌ಡಬ್ಲ್ಯುಎಂಎಲ್ ಜವಾಬ್ದಾರಿಯಾಗಿದೆ. ಬಿಎಸ್‌ಡಬ್ಲ್ಯುಎಂಎಲ್ ಪ್ರಸ್ತುತ ಚಾಲ್ತಿಯಲ್ಲಿರುವ ಗುತ್ತಿಗೆ, ಅಭಿವೃದ್ಧಿ/ ನಿರ್ವಹಣಾ ಕಾಮಗಾರಿಗಳು ಹಾಗೂ ಮುಂಬರುವ ಆರ್ಥಿಕ ವರ್ಷದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ತೊಂದರೆಯಾಗದಂತೆ ಅಗತ್ಯ ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡಬೇಕು ಎಂದು ಜಿಬಿಎ ಆಯುಕ್ತರು ಪ್ರಸ್ತಾವದಲ್ಲಿ ತಿಳಿಸಿದ್ದರು.

ಇಷ್ಟೆಲ್ಲ ಪ್ರಸ್ತಾವ ಸಲ್ಲಿಸಿದ ನಂತರ, ಕೂಡಲೇ ಹಣ ಪಾವತಿಸಲು ಐದು ನಗರ ಪಾಲಿಕೆಗಳಿಗೆ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದ್ದರೂ, ಬಿಎಸ್‌ಡಬ್ಲ್ಯುಎಂಎಲ್‌ಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಮೀಸಲಿರಿಸಲಾಗಿದ್ದ ಅನುದಾನವನ್ನು ಕಡಿತಗೊಳಿಸಲಾಗಿದೆ. ಇದರಿಂದ ಸಂಸ್ಕರಣೆ ಘಟಕ ಸೇರಿದಂತೆ ಒಣತ್ಯಾಜ್ಯ ಸಂಗ್ರಹ ಘಟಕಗಳ ಸ್ಥಾಪನೆಗೆ ತೊಂದರೆಯಾಗಲಿದೆ ಎನ್ನಲಾಗಿದೆ.

ಶ್ರೀನಾರಾಯಣ ಗುರು ನಿಗಮಕ್ಕೆ ಮಂಜುನಾಥ ಪೂಜಾರಿ ಅಧ್ಯಕ್ಷ

ಬೆಂಗಳೂರು: ಈಡಿಗ–ಬಿಲ್ಲವ ಸೇರಿದಂತೆ 26 ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಸ್ಥಾಪಿಸಲಾಗಿರುವ ‘ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ’ದ ಅಧ್ಯಕ್ಷರನ್ನಾಗಿ ಉಡುಪಿ ಜಿಲ್ಲೆಯ ಮಂಜುನಾಥ ಪೂಜಾರಿ ಅವರನ್ನು ನೇಮಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ನಿಗಮವನ್ನು ಕಂಪನಿ ಕಾಯ್ದೆಯ ನಿಯಮಗಳಂತೆ ನೋಂದಣಿ ಮಾಡಬೇಕು. ನಿಗಮಕ್ಕೆ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡುವವರೆಗೆ ಕಾಡುಗೊಲ್ಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹೆಚ್ಚುವರಿ ಕಾರ್ಯಭಾರ ನೀಡಬೇಕು ಎಂದು ವಾರದ ಹಿಂದೆ ಇಲಾಖೆ ಆದೇಶ ಹೊರಡಿಸಿತ್ತು.

‘ಕೈ’ ಮುಖಂಡ ರಾಜೀವ್ ಗೌಡ ಅಮಾನತಿಗೆ ಶಿಫಾರಸು

ಬೆಂಗಳೂರು: ಶಿಡ್ಲಘಟ್ಟ ಪೌರಾಯುಕ್ತೆ ಅಮೃತಾ ಗೌಡ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಮತ್ತು ಬೆದರಿಕೆ ಒಡ್ಡಿದ ಆರೋಪ ಎದುರಿಸುತ್ತಿರುವ ಸ್ಥಳೀಯ ಕಾಂಗ್ರೆಸ್ ಮುಖಂಡ ಬಿ.ವಿ. ರಾಜೀವ್ ಗೌಡ ಅವರನ್ನು ಪಕ್ಷದಿಂದ ಅಮಾನತುಗೊಳಿಸಲು ಪಕ್ಷದ ಶಿಸ್ತು ಸಮಿತಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಪತ್ರ ಬರೆದಿದ್ದಾರೆ.

‘ಗಂಭೀರ ಶಿಸ್ತು ಉಲ್ಲಂಘನೆಯ ಆರೋಪದ ಕಾರಣ ಪಕ್ಷದಿಂದ ಅಮಾನತು ಗೊಳಿಸಲು ಸೂಚಿಸಿ ಪ್ರಕರಣವನ್ನು ಶಿಸ್ತು ಸಮಿತಿಗೆ ರವಾನಿಸಲು ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು ಸೂಚಿಸಿದ್ದಾರೆ’ ಎಂದು ಸಮಿತಿಯ ಅಧ್ಯಕ್ಷ ಕೆ. ರೆಹಮಾನ್ ಖಾನ್ ಅವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.


ನಗರದಲ್ಲಿ ಇಂದು

ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ಉದ್ಘಾಟನೆ, ದೇವತಾ ಪೂಜಾ ಕಾರ್ಯಕ್ರಮಗಳು: ಅತಿಥಿಗಳು: ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಮಹೇಶ್ವರ ರಾವ್ ಎಂ., ಬಿ.ಎಸ್. ಪ್ರಹ್ಲಾದ್, ಬಿ.ಎನ್.ಗಿರೀಶ್, ಎಸ್. ಭೀಮೇಶ್, ವಿ.ಆನಂದ್, ಎ.ಅಮೃತ್‌ರಾಜ್, ವಿ.ಶ್ರೀನಿವಾಸ್, ಆಯೋಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಿಬಿಎ ಕೇಂದ್ರ ಕಚೇರಿ, ಬೆಳಿಗ್ಗೆ 9

ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದ ರಜತ ಬ್ರಹ್ಮ ರಥೋತ್ಸವ: ರುದ್ರಾಭಿಷೇಕ, ನಿತ್ಯಹೋಮ, ಪ್ರಕಾರೋತ್ಸವ, ಮಹಾಮಂಗಳಾರತಿ, ಆಯೋಜನೆ: ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಬೆಳಿಗ್ಗೆ 10

‘ವೇದ ವಿಜ್ಞಾನ ಮತ್ತು ಜಾಗತಿಕ ಸಮಕಾಲೀನ ಸವಾಲುಗಳು’ ಏಳನೇ ಅಂತರರಾಷ್ಟ್ರೀಯ ಸಮ್ಮೇಳನದ ಉದ್ಘಾಟನೆ: ಸುಜಯನಿಧಿ ತೀರ್ಥ ಸ್ವಾಮೀಜಿ, ಅಭಿನವ ಶಂಕರ ಭಾರತಿ ಸ್ವಾಮೀಜಿ, ಎಂ.ಎನ್.ವೆಂಕಟಾಚಲಯ್ಯ, ಎನ್.ಎಸ್. ಭೋಸರಾಜು, ಶ್ರೀನಿವಾಸ್ ವರಖೇಡಿ, ಎಸ್.ಅಹಲ್ಯ, ಬಿ. ರಮೇಶ್, ಸುಬ್ಬನರಸಿಂಹ, ಟಿ.ಎ.ಬಾಲಕೃಷ್ಣ ಅಡಿಗ, ಆಯೋಜನೆ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಸೈನ್ಸಸ್ ಟ್ರಸ್ಟ್, ಸ್ಥಳ: ವಿಜಯ ಕಾಲೇಜು, ಜಯನಗರ ನಾಲ್ಕನೇ ಬ್ಲಾಕ್, ಬೆಳಿಗ್ಗೆ 10

ವಿಜ್ಞಾನ ಸಾಹಿತ್ಯ ಹಾಗೂ ಸಂವಹನ ಶಿಬಿರದ ಉದ್ಘಾಟನೆ: ಎನ್.ಎಸ್. ಭೋಸರಾಜು, ಉಪಸ್ಥಿತಿ: ಬಸವರಾಜ ಹೊರಟ್ಟಿ, ಅತಿಥಿಗಳು: ಡಾ.ಸಿ.ಆರ್. ಚಂದ್ರಶೇಖರ್, ಮಂಜುಳಾ ಎನ್., ಸದಾಶಿವ ಪ್ರಭು ಬಿ., ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಎ.ಎಚ್.ರಾಜಾಸಾಬ್, ‘ಕನ್ನಡದಲ್ಲಿ ವಿಜ್ಞಾನ ಸಂವಹನೆ–ಇಂದಿನ ಸವಾಲುಗಳು’ ಗೋಷ್ಠಿ: ಗುರುರಾಜ ಎಸ್. ದಾವಣಗೆರೆ, ‘ಕನ್ನಡ ಸಾಹಿತ್ಯದಲ್ಲಿ ವೈಜ್ಞಾನಿಕ ಪ್ರಜ್ಞೆ’ ಗೋಷ್ಠಿ: ಎಂ.ಎಸ್. ಆಶಾದೇವಿ, ‘ವೈಜ್ಞಾನಿಕ ಕಥನ ಕೌತುಕ’ ಗೋಷ್ಠಿ: ಕೆ.ಎನ್. ಗಣೇಶಯ್ಯ, ‘ವಿಜ್ಞಾನ ಮತ್ತು ಸಾಹಿತ್ಯ’ ಗೋಷ್ಠಿ: ನೇಮಿಚಂದ್ರ, ಆಯೋಜನೆ: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸ್ಥಳ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿದ್ಯಾರಣ್ಯಪುರ, ಬೆಳಿಗ್ಗೆ 10.30ರಿಂದ



ನಿರ್ಮಲಾನಂದ ನಾಥ ಸ್ವಾಮೀಜಿ

ಅಟಲ್ ಕಮ್ಯೂನಿಟಿ ಇನೊವೇಷನ್ ಸೆಂಟರ್‌ನ ಉದ್ಘಾಟನೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ದೀಪಕ್ ಬಗ್ಲಾ, ಎಸ್.ಎಂ. ಜಯಕರ, ಬಿ.ಸಿ. ಭಗವಾನ್, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ: ಪದ್ಮಶ್ರೀ ಕ್ಯಾಂಪಸ್, ಕೊಮ್ಮಘಟ್ಟ, ಕೆಂಗೇರಿ, ಬೆಳಿಗ್ಗೆ 11

ರಕ್ತದಾನ ಶಿಬಿರ: ಆಯೋಜನೆ ಮತ್ತು ಸ್ಥಳ: ಪ್ರಾದೇಶಿಕ ಸಾರಿಗೆ ಕಚೇರಿ, ಯಶವಂತಪುರ, ಬೆಳಿಗ್ಗೆ 11.45

ತೇಜಸ್ವಿ ನಾಟಕೋತ್ಸವ: ‘ಜುಗಾರಿ ಕ್ರಾಸ್’ ನಾಟಕ ಪ್ರದರ್ಶನ: ಪ್ರಸ್ತುತಿ: ಸಮುದಾಯ ಬೆಂಗಳೂರು, ಆಯೋಜನೆ: ತೋಟಗಾರಿಕೆ ಇಲಾಖೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಲಾಲ್‌ಬಾಗ್, ಸಂಜೆ 5

ಭರತನಾಟ್ಯ ಪ್ರದರ್ಶನ: ತಮೋಹ ಆರ್ಟ್ಸ್ ಫೌಂಡೇಷನ್ ವಿದ್ಯಾರ್ಥಿಗಳು, ನಿರ್ದೇಶನ: ಗಾಯತ್ರಿ ಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 5.15

ತ್ಯಾಗರಾಜ ಆರಾಧನಾ ಮಹೋತ್ಸವ, ‘ಶ್ರೀ ತ್ಯಾಗರಾಜ ಸಹಕಾರ ರಾಜ್ಯ ಪ್ರಶಸ್ತಿ’, ಶ್ರೀ ತ್ಯಾಗರಾಜ ಪ್ರಶಸ್ತಿ’, ‘ಮೈಸ್ಟಾಂಪ್ ಮತ್ತು ವಿಶೇಷ ಪೋಸ್ಟಲ್ ಕವರ್’ ಬಿಡುಗಡೆ ಸಮಾರಂಭ: ಉದ್ಘಾಟನೆ: ಎಚ್.ಕೆ. ಪಾಟೀಲ, ಅಧ್ಯಕ್ಷತೆ: ಎಲ್.ಎ. ರವಿಸುಬ್ರಮಣ್ಯ, ಅತಿಥಿಗಳು: ತೇಜಸ್ವಿ ಸೂರ್ಯ, ಬಿ.ಎಸ್. ಪರಮಶಿವಯ್ಯ, ಅಶ್ವತ್ಥನಾರಾಯಣ, ವಿ. ತಾರಾ, ಗಜೇಂದ್ರಕುಮಾರ್ ಮೀನಾ, ಪ್ರಾಸ್ತಾವಿಕ ನುಡಿ: ಎಂ.ಆರ್. ವೆಂಕಟೇಶ್, ಆಯೋಜನೆ: ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ: ಗುರುವಂದನಾ ಕಾರ್ಯಕ್ರಮ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

‘ಕಲಾ ಸ್ಪಂದನ’ ತಿಂಗಳ ಕಾರ್ಯಕ್ರಮ: ಉದ್ಘಾಟನೆ: ಮನು ಬಳಿಗಾರ್, ಅಧ್ಯಕ್ಷತೆ: ಆರ್.ವಿ. ರಾಘವೇಂದ್ರ, ಅತಿಥಿ: ನಂದಿನಿ ಕೆ. ಮೆಹ್ತಾ, ಭರತನಾಟ್ಯ ಪ್ರದರ್ಶನ: ಚಂದನ ರಾಜು, ವೈಭವಿ ಶುಕ್ಲಾ, ಕಥಕ್ ನೃತ್ಯ ಪ್ರದರ್ಶನ: ಶ್ರೀನಿಧಿ ಎಂ. ಭಟ್ ಅಲೇಖ್, ಶಾಂಭವಿ ರಾಜೀವ್ ಕುಕಡೆ, ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ವಿನೀತ್ ರಾಣಾಪೂರ್, ಶಿವಕುಮಾರ್ ಮಹಾಂತ್, ಪುನೀತ್ ರಾಣಾಪೂರ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಸ್ಥಳ: ಜಯರಾಮ ಸೇವಾ ಮಂಡಳಿ, ಎಂಟನೇ ಬ್ಲಾಕ್, ಜಯನಗರ, ಸಂಜೆ 6

‘ರಕ್ತ ಧ್ವಜ’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಸಿಜಿಕೆ ಅವರ ಕುರಿತು ಮಾತು: ಪಿಚ್ಚಳ್ಳಿ ಶ್ರೀನಿವಾಸ್, ಆಯೋಜನೆ: ದೃಶ್ಯ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 7

ರಾಜ್ಯಮಟ್ಟದ 24ನೇ ನಾಟಕೋತ್ಸವ: ‘ಮಹಾಯುಗ’ ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್ ಜಾನ್, ತಂಡ: ಸುಸ್ಥಿರ ಪ್ರತಿಷ್ಠಾನ, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

ಬೆಂಗಳೂರು ಹಬ್ಬ: ಬೆಳಿಗ್ಗೆ 10ಕ್ಕೆ ಕಾಲನಿಯಲ್ ಕ್ರಾಪ್ಲ್ ಹೆರಿಟೇಜ್ ವಾಕ್, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 10ರಿಂದ ಶಂಕರ್‌ನಾಗ್–ದಿ ಮೆವೆರಿಕ್ ಆಫ್ ಕನ್ನಡ ಸಿನಿಮಾ: ಆನಂದ ವರದರಾಜ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಸಂಜೆ 5ಕ್ಕೆ ಜಾನ್ಸನ್ ಮಾರ್ಕೆಟ್ ಹೆರಿಟೇಜ್ ವಾಕ್, ಸ್ಥಳ: ಹೋಟೆಲ್ ಫಾನೋಸ್, ರಿಚ್ಮಂಡ್ ಟೌನ್, ಸಂಜೆ 5ಕ್ಕೆ ಸಂಗೀತ ಕಛೇರಿ: ಬ್ಯಾಂಡ್ಸ್ ಗ್ಲೋರ್, ಕ್ಲಾಸಿಕಲ್ ರಿ–ಇಮೇಜಿನ್ಡ್: ಅನಿರುದ್ಧ ವರ್ಮಾ ಕಲೆಕ್ಟಿವ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಸಂಜೆ 7.30ಕ್ಕೆ ‘ಸಮ್‌ಥಿಂಗ್ ಲೈಕ್ ಟ್ರುಥ್’ ನಾಟಕ ಪ್ರದರ್ಶನ: ಪ್ರಸ್ತುತಿ: ಸೂಶಿಯಲ್ ಮಂಚ್ ಆ್ಯಂಡ್ ಪೀಸ್ ಪ್ರಾಜೆಕ್ಟ್ಸ್, ಸಭಾ, ಕಾಮರಾಜ ರಸ್ತೆ.

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪೂರ್ಣ ಬೆಂಬಲ ನೀಡಲು ಜೆಸಿಟಿಯು–ಎಸ್‌ಎಚ್‌ಕೆ ರಾಜ್ಯ ಸಮಾವೇಶದಲ್ಲಿ ನಿರ್ಣಯ

ಫೆ.12ಕ್ಕೆ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕು. ವಿ.ಬಿ. ಜಿರಾಮ್ ಜಿ, ವಿಮಾ ತಿದ್ದುಪಡಿ ಕಾಯ್ದೆ, ಶಾಂತಿ ಕಾಯ್ದೆಗಳನ್ನು ರದ್ದುಗೊಳಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಫೆ.12ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಮ್ಮಿಕೊಳ್ಳಲಾಗಿದೆ.

ಟ್ರೇಡ್ ಯುನಿಯನ್ ಜಂಟಿ ಸಮಿತಿ (ಜೆಸಿಟಿಯು)- ಸಂಯುಕ್ತ ಹೋರಾಟ ಕರ್ನಾಟಕ (ಎಸ್‌ಎಚ್‌ಕೆ) ವತಿಯಿಂದ ಬುಧವಾರ ಇಲ್ಲಿ ನಡೆದ ರಾಜ್ಯ ಸಮಾವೇಶದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

ಸುಲಲಿತ ವ್ಯಾಪಾರದ ಹೆಸರಲ್ಲಿ ಯೂನಿಯನ್ ಮುಕ್ತ ವಾತಾವರಣವನ್ನು ಕಲ್ಪಿಸಲು ಕೇಂದ್ರ ಸರ್ಕಾರವು ಸರ್ವಾಧಿಕಾರಿ ವರ್ತನೆ ತೋರುತ್ತಿದೆ. ನಾಲ್ಕು ಕಾರ್ಮಿಕ ಕಾಯ್ದೆಗಳ ಮೂಲಕ ಹೊಸ ಶ್ರಮಿಕ ನೀತಿ ಜಾರಿ ಮಾಡಲು ಯತ್ನಿಸುತ್ತಿದೆ. ಶ್ರಮಿಕ ನೀತಿಯು ಮನುಸ್ಮೃತಿಯಿಂದ ಸ್ಫೂರ್ತಿ ಪಡೆದು ದುಡಿಮೆಗಾರನ ಕೆಲಸ ದುಡಿಯುವುದು ಮಾತ್ರ ಎಂಬ ಪರಿಕಲ್ಪನೆಯನ್ನು ಹೊಂದಿದೆ ಎಂದು ಸಿಐಟಿಯು ಅಧ್ಯಕ್ಷೆ ಎಸ್. ವರಲಕ್ಷ್ಮೀ ಮಂಡಿಸಿದ ಕರಡು ನಿರ್ಣಯದಲ್ಲಿ ತಿಳಿಸಲಾಗಿದೆ.

ಕನಿಷ್ಠ ವೇತನಕ್ಕಿಂತ ಕಡಿಮೆ ಇರಬಾರದು ಎಂದಿದ್ದರೂ ಕಾರ್ಮಿಕ ಸಂಹಿತೆಯಲ್ಲಿ ದಿನಕ್ಕೆ ₹178 ನಿಗದಿ ಮಾಡಲಾಗಿದೆ. ಈಗಾಗಲೇ ಮಾಲೀಕರು ಗಳಿಸುವ ಲಾಭವು ಶೇ 51ರವರೆಗೆ ಹೆಚ್ಚಳವಾಗಿದೆ. ಇದೇ ಸಂದರ್ಭದಲ್ಲಿ ಕಾರ್ಮಿಕರ ವೇತನದ ಪಾಲು ಶೇ 15.97ಕ್ಕೆ ಇಳಿದಿದೆ. ಹೊಸ ಕಾರ್ಮಿಕ ನೀತಿಯು ವೇತನದ ಪಾಲನ್ನು ಇನ್ನಷ್ಟು ಕಡಿಮೆ ಮಾಡಲಿದೆ ಎಂದು ನಿರ್ಣಯದಲ್ಲಿ ಎಚ್ಚರಿಸಲಾಯಿತು.

ಅಸಂಘಟಿತ ಕಾರ್ಮಿಕರಿಗೆ ಇಎಸ್‌ಐ, ಇಪಿಎಫ್ ಇಲ್ಲ. ₹18 ಸಾವಿರಕ್ಕಿಂತ ಕಡಿಮೆ ವೇತನವಿದ್ದರೆ ಅವರಿಗೆ ಯಾವುದೇ ಸೌಲಭ್ಯ ದೊರೆಯುವುದಿಲ್ಲ. ಕಾಯಂ ನೌಕರರ ಪರಿಕಲ್ಪನೆಯನ್ನು ತೆಗೆದು ಹಾಕಲಾಗಿದೆ. ಕೈಗಾರಿಕಾ ಸಂಹಿತೆಯಲ್ಲಿ ಕಾರ್ಮಿಕರ ಪ್ರಾಥಮಿಕ ಸಂಘಗಳ ರಚನೆ, ನೋಂದಣಿಯಾದ ಸಂಘಗಳ ನಿರ್ವಹಣೆಯನ್ನು ಕಠಿಣಗೊಳಿಸಲಾಗಿದೆ ಎಂದು ಮಾಹಿತಿ ನೀಡಲಾಯಿತು.

ದಿನಕ್ಕೆ 12 ತಾಸು ಕೆಲಸ ಮಾಡಬೇಕು ಎಂದು ತಿಳಿಸಲಾಗಿದೆ. ಆದರೆ, ಹೆಚ್ಚುವರಿ ಸಮಯದ ವೇತನದ ಬಗ್ಗೆ ಪ್ರಸ್ತಾಪವಿಲ್ಲ. ನರೇಗಾ ಕಾಯ್ದೆಯನ್ನು ವಿಕಸಿತ್ ಭಾರತ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ ಕಾಯ್ದೆ ಎಂದು ಬದಲಾಯಿಸಲಾಗಿದೆ. ಹೊಸ ಕಾಯ್ದೆಯಲ್ಲಿ ಉದ್ಯೋಗದ ಹಕ್ಕನ್ನು ಕಿತ್ತುಕೊಳ್ಳಲಾಗಿದೆ.

ಭಾರತವನ್ನು ಪರಿವರ್ತಿಸಲು ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಹಾಗೂ ಪ್ರಗತಿ (ಶಾಂತಿ) ಕಾಯ್ದೆಯನ್ನು ಖಾಸಗಿ ಮತ್ತು ವಿದೇಶಿ ಬಂಡವಾಳಗಾರರ ಲಾಭಕ್ಕಾಗಿ ಮಾಡಲಾಗಿದೆ. ಇದು ಅಪಾಯಕಾರಿಯಾಗಿದೆ. ಬೀಜ ಮಸೂದೆ, ವಿದ್ಯುತ್ ಕಾಯ್ದೆ ತಿದ್ದುಪಡಿ ಮಸೂದೆಗಳು ಜನವಿರೋಧಿಯಾಗಿವೆ. ಇವುಗಳನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಮುಷ್ಕರ ನಡೆಸಲಾಗುತ್ತಿದೆ. ಈ ಮುಷ್ಕರವನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ನಿರ್ಣಯ ಕೈಗೊಳ್ಳಲಾಯಿತು.

ಜೆಸಿಟಿಯು, ಇಂಟಕ್, ಎಐಟಿಯುಸಿ, ಸಿಐಟಿಯು, ಎಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಎಚ್‌ಎಂಕೆಪಿ, ಕೆಡಬ್ಲ್ಯುಯು, ಕೆಐಇಇಎಫ್, ಎನ್‌ಸಿಎಲ್, ಬ್ಯಾಂಕ್, ವಿಮೆ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರಾದ ನಾಗನಾಥ, ಸೋಮಶೇಖರ್, ನಿರ್ಮಲಾ, ದೀಪಕ್, ಮಹಾಂತೇಶ್, ಎಂಝಡ್ ಅಲಿ, ಲೀಲಾವತಿ, ಬಡಗಲಪುರ ನಾಗೇಂದ್ರ, ಯಶವಂತ, ಮೀನಾಕ್ಷಿ ಸುಂದರಂ, ಲಕ್ಷ್ಮೀ ವೆಂಕಟೇಶ್, ಕಾಳಪ್ಪ, ಕ್ರಿಪ್ಪನ್ ರೊಸಾರಿಯೊ, ನೂರ್ ಶ್ರೀಧರ್, ಸಿದ್ದನಗೌಡ ಪಾಟೀಲ, ಕೆ.ವಿ. ಭಟ್ ಸಹಿತ ಅನೇಕರು ಭಾಗವಹಿಸಿದ್ದರು.



ಟ್ರೇಡ್ ಯುನಿಯನ್ ಜಂಟಿ ಸಮಿತಿ (ಜೆಸಿಟಿಯು) ಸಂಯುಕ್ತ ಹೋರಾಟ ಕರ್ನಾಟಕ (ಎಸ್‌ಎಚ್‌ಕೆ) ವತಿಯಿಂದ ಬೆಂಗಳೂರಿನಲ್ಲಿ ಬುಧವಾರ ನಡೆದ ರಾಜ್ಯ ಸಮಾವೇಶದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಘೋಷಣೆ ಕೂಗಿದರು –ಪ್ರಜಾವಾಣಿ ಚಿತ್ರ

‘ತೋಚಿದಂತೆಲ್ಲಾ ನಡೆದುಕೊಳ್ಳಬಹುದೇ’

ಕಾಮಿಡಿ ಕಿಲಾಡಿಗಳು: ಧಾರ್ಮಿಕ ಭಾವನೆಗೆ ಅಪಚಾರ – ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಮಿಡಿ ಕಿಲಾಡಿಗಳು’ ಟಿ.ವಿ ಷೋನಲ್ಲಿ ಮಹಾಭಾರತದ ಪಾತ್ರಗಳನ್ನು ಹಾಗೂ ಹಿಂದೂ ದೇವತೆಗಳನ್ನು ವಿಡಂಬನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ‘ವಾಕ್ ಸ್ವಾತಂತ್ರ್ಯದ ನೆಪದಲ್ಲಿ ಮನಸ್ಸಿಗೆ ತೋಚಿದಂತೆ ನಡೆದುಕೊಳ್ಳಬಹುದೇ’ ಎಂದು ಜೀ ಟಿವಿ ತಂಡವನ್ನು ಕಟುವಾಗಿ ಪ್ರಶ್ನಿಸಿದೆ.

‘ಹಿಂದೂ ದೇವತೆಗಳನ್ನು ಅವಹೇಳನ ಮಾಡಿ ಚಿತ್ರಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಜೀ ಎಂಟರ್‌ಪ್ರೈಸಸ್ ಅಧಿಕೃತ ಪ್ರತಿನಿಧಿ ದೀಪಕ್ ಶ್ರೀರಾಮುಲು ಹಾಗೂ ‘ಕಾಮಿಡಿ ಕಿಲಾಡಿಗಳು’ ನಿರ್ದೇಶಕ ಕೆ.ಅನಿಲ್ ಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಾದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ವಾಕ್ ಸ್ವಾತಂತ್ರ್ಯದ ನೆಪದಲ್ಲಿ ನಿಮಗೆ ಅನಿಸಿದ್ದೆಲ್ಲವನ್ನೂ ಮಾಡಬಹುದೇ? ದೇವರು, ಪೌರಾಣಿಕ ವ್ಯಕ್ತಿಗಳನ್ನು ನಿಮ್ಮ ಯೋಜನೆಯ [illegible] ರೀತಿಯಲ್ಲಿ ಬಿಂಬಿಸುವವರಿಗೆ ಅನುಗ್ರಹ ತೋರುವ ಅಗತ್ಯವಿಲ್ಲ’ ಎಂದು ಅರ್ಜಿದಾರರಿಗೆ ಚಾಟಿ ಬೀಸಿತು.

‘ಇಂತಹ ಮನೋಭಾವದ ಆರೋಪಿಗಳನ್ನು ಏಕೆ ಸುಮ್ಮನೆ ಬಿಡಬೇಕು’ ಎಂದು ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಚೌಟ ಅವರನ್ನು ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿಗಳು, ‘ದೂರನ್ನು ಗಮನಿಸಿದ್ದೀರಾ? ದೇವರೆಂದು ಆರಾಧಿಸುವ ಕೃಷ್ಣ ಮತ್ತು ದ್ರೌಪದಿಯನ್ನು ನಿಮ್ಮ ಕಾರ್ಯಕ್ರಮದಲ್ಲಿ ಹೇಗೆಲ್ಲಾ ಬಿಂಬಿಸಲಾಗಿದೆ? ದೂರನ್ನು ಓದುವ ರೀತಿಯಲ್ಲಿ ಇದೆಯೇ’ ಎಂದು ಖಾರವಾಗಿ ಪ್ರಶ್ನಿಸಿತು.

‘ಕಾಮಿಡಿ ಎನ್ನುವುದು ಮಿತಿಮೀರಿ ಹೊರಹೋಗಬಾರದು ಮತ್ತು ವಿಪರೀತಕ್ಕೆ ಹೋಗಬಾರದು. ನ್ಯಾಯಾಲಯಗಳ ಹೆಚ್ಚು ಔದಾರ್ಯದಿಂದಾಗಿಯೇ ಇಂತಹ ಘಟನೆಗಳು ಮರುಕಳಿಸುತ್ತಿವೆ. ಎಲ್ಲವನ್ನೂ ಒಂದೇ ರೀತಿಯಲ್ಲಿ ಕಾಣಲಾಗದು ಎಂಬುದು ನೆನಪಿರಲಿ.

ಒಂದು ವೇಳೆ ಕೋರ್ಟ್ ಬಿರುಸಾದ ಪ್ರದ [illegible] ಆದರೆ ಅದು ಬೇರೆಯದೇ ಆಗಿರುತ್ತದೆ’ ಎಂದು ಎಚ್ಚರಿಸಿತು.

ಇದೇ ವೇಳೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರಿಗೆ, ‘ಪ್ರಾಸಿಕ್ಯೂಷನ್ ಸರಿಯಾದ ರೀತಿಯಲ್ಲಿ ಕಾನೂನು ಪ್ರಕ್ರಿಯೆಗಳನ್ನು ಪಾಲಿಸದೇ ಇರುವ ಕಾರಣಕ್ಕಾಗಿಯೇ ಇಂತಹ ಪ್ರಕರಣಗಳು ವೃಥಾ ಬರ್ಖಾಸ್ತುಗೊಳ್ಳುತ್ತವೆ. ಪ್ರತಿ ಪ್ರಕರಣದಲ್ಲೂ ಈ ಸಮಸ್ಯೆ ಎದ್ದು ಕಾಣುತ್ತದೆ. ಇದು ಉದ್ದೇಶಪೂರ್ವಕ ಇರುವುದೇ’ ಎಂಬ ಶಂಕೆ ವ್ಯಕ್ತಪಡಿಸಿತು.

‘ಅರ್ಜಿದಾರರು ತನಿಖೆಯಲ್ಲಿ ಭಾಗಿಯಾಗಬೇಕು. ಮುಂದಿನ ವಿಚಾರಣೆಯ ದಿನದವರೆಗೆ ಪ್ರಾಸಿಕ್ಯೂಷನ್ ಅರ್ಜಿದಾರರ ವಿರುದ್ಧ ಆತುರದ ಕ್ರಮ ಕೈಗೊಳ್ಳಬಾರದು’ ಎಂದು ಆದೇಶಿಸಿತು. ಅಂತೆಯೇ, ದೂರುದಾರ ಪ್ರಶಾಂತ ಶಶಿಧರ ನರಗುಂದ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಮುಖ್ಯಾಂಶಗಳು
- ಅರ್ಜಿದಾರರ ವಿರುದ್ಧ ಆತುರದ ಕ್ರಮ ಬೇಡ
- ದೂರುದಾರರಿಗೆ ತುರ್ತು ನೋಟಿಸ್ ಜಾರಿ



ಈ ದೇಶದಲ್ಲಿ ಹಾಸ್ಯದ ಹೆಸರಿನಲ್ಲಿ ಏನು ಬೇಕಾದರೂ ನಡೆಯುವುದೇ? ವಾಕ್ ಸ್ವಾತಂತ್ರ್ಯವನ್ನು ಬೇಕಾಬಿಟ್ಟಿ ಬಳಸುವುದು ಎಷ್ಟು ಸರಿ? ಇಂತಹ ಪ್ರಕರಣಗಳಲ್ಲಿ ಕೋರ್ಟ್ ಅನುಕಂಪ ತೋರಬೇಕೆ?

ನ್ಯಾ.ಎಂ.ನಾಗಪ್ರಸನ್ನ



ಕೃಷ್ಣನ ಪಾತ್ರಧಾರಿಗೆ ಕಪಾಳಮೋಕ್ಷ..!

‘ಮಹಾಭಾರತದಲ್ಲಿನ ಪಾತ್ರಗಳನ್ನು ಹಿಂದೂ ಧರ್ಮದ ಭಾವನೆಗಳಿಗೆ ಧಕ್ಕೆ ತರುವಂತೆ ಬಿಂಬಿಸಲಾಗಿದೆ. ಶ್ರೀಕೃಷ್ಣ ಪಾಂಡವರು, ಧೃತರಾಷ್ಟ್ರ ಪಾತ್ರಧಾರಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ. ಶ್ರೀಕೃಷ್ಣನ ಪಾತ್ರಧಾರಿಗೆ 2-3 ಬಾರಿ ಕಪಾಳ ಮೋಕ್ಷ, ದ್ರೌಪದಿ ಪಾತ್ರಧಾರಿಯ ಮೈ ಮೇಲೆ ಸಾರಾಯಿ ಸಿಂಪಡಣೆ ಮಾಡಲಾಗಿದೆ. ಇದರಿಂದ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗಿದೆ’ ಎಂದು ಆರೋಪಿಸಿ ಹುಬ್ಬಳ್ಳಿಯ ಕೇಶ್ವಾಪುರದ ಪ್ರಶಾಂತ ಶಶಿಧರ ನರಗುಂದ 2025ರ ನವೆಂಬರ್ 15ರಂದು ದೂರು ನೀಡಿದ್ದರು.

ದೂರು ಆಧರಿಸಿ, ಕಾಮಿಡಿ ಕಿಲಾಡಿಗಳ ಕಲಾವಿದರು, ಸ್ಕ್ರಿಪ್ಟ್ ರೈಟರ್, ನಿರ್ದೇಶಕ, ಜೀ ಕನ್ನಡ ವಾಹಿನಿ, ಜೀ–5 ಒಟಿಟಿ, ಕಾಮಿಡಿ ಕಿಲಾಡಿಗಳು ಪ್ರಸಾರದ ಮತ್ತು ಇತರರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 299ರ ಅಡಿಯಲ್ಲಿ ಹುಬ್ಬಳ್ಳಿಯ ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಈ ಪ್ರಕರಣವನ್ನು ಬೆಂಗಳೂರಿನ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ.

ರಸ್ತೆ ನಿಧಿ: ₹1,724 ಕೋಟಿಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ರಸ್ತೆಗಳ ಅಭಿವೃದ್ಧಿಗೆ ಕೇಂದ್ರ ರಸ್ತೆ ಮೂಲಸೌಕರ್ಯ ನಿಧಿಯಿಂದ (ಸಿಆರ್‌ಐಎಫ್) 2025–26ನೇ ಸಾಲಿನಲ್ಲಿ ₹1,724 ಕೋಟಿ ಮಂಜೂರು ಮಾಡಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಿದರು.

ಕೇಂದ್ರ ಸಚಿವರನ್ನು ಬುಧವಾರ ಇಲ್ಲಿ ಭೇಟಿ ಮಾಡಿದ ಅವರು, ‘ರಾಜ್ಯ ಹೆದ್ದಾರಿಗಳು ಹಾಗೂ ಪ್ರಮುಖ ಜಿಲ್ಲಾ ರಸ್ತೆಗಳ ಅಭಿವೃದ್ಧಿಗೆ ಈ ಅನುದಾನ ಮಂಜೂರು ಮಾಡುವಂತೆ ಈ ಹಿಂದೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಈ ವರೆಗೆ ಅನುಮೋದನೆ ಸಿಕ್ಕಿಲ್ಲ. ಕೂಡಲೇ ಅನುಮೋದನೆ ನೀಡಬೇಕು’ ಎಂದು ಕೋರಿದರು.

ಈ ಯೋಜನೆಯಡಿ 2023–24ನೇ ಸಾಲಿನಲ್ಲಿ ₹1,385 ಕೋಟಿ ವೆಚ್ಚದಲ್ಲಿ 1,157 ಕಿ.ಮೀ. ಉದ್ದದ 297 ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿತ್ತು ಎಂದು ಅವರು ಸಚಿವರ ಗಮನಕ್ಕೆ ತಂದರು.

‘5,225 ಕಿ.ಮೀ. ಉದ್ದದ 39 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೆ ಏರಿಸುವಂತೆ ಪ್ರಸ್ತಾವನೆ ಸಲ್ಲಿಸಿ ವರ್ಷಗಳೇ ಕಳೆದಿವೆ. ಈ ಪ್ರಸ್ತಾವಕ್ಕೆ ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಅವರು 2023ರ ಆಗಸ್ಟ್‌ನಲ್ಲಿ ಮನವಿ ಸಲ್ಲಿಸಿದ್ದರು. ಸಂಚಾರ, ಸರಕು ಸಾಗಣೆ ಮತ್ತಿತರ ಅಂಶಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಸಚಿವರು ಭರವಸೆ ನೀಡಿದ್ದರು. ಆ ಬಳಿಕ ಯಾವುದೇ ಕ್ರಮ ಆಗಿಲ್ಲ. ಈ ಬಗ್ಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಗಿದೆ’ ಎಂದು ಜಾರಕಿಹೊಳಿ ತಿಳಿಸಿದರು.

‘ರಾಜ್ಯದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಸಂಪೂರ್ಣ ಸಹಕಾರ ಕೋರಲಾಗಿದೆ. ಇದಕ್ಕೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ’ ಎಂದು ಅವರು ಹೇಳಿದರು.

ಫೆ.10ರೊಳಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಫೆಬ್ರುವರಿ 10ರ ಒಳಗೆ ಸರ್ಕಾರಕ್ಕೆ ಸಲ್ಲಿಸುವ ಸಾಧ್ಯತೆ ಇದೆ’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಹೇಳಿದರು.


ಬುಧವಾರ ಇಲ್ಲಿ ನಡೆದ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ‘ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ಅವರ ನೇತೃತ್ವದಲ್ಲಿ ಈಗಾಗಲೇ ಅಂಕಿ ಅಂಶಗಳ ಕ್ರೋಡೀಕರಣ ನಡೆಯುತ್ತಿದೆ. ಜನವರಿ ಅಂತ್ಯದೊಳಗೆ ಅಂತಿಮಗೊಳಿಸಿ ಫೆಬ್ರುವರಿಯಲ್ಲಿ ವರದಿ ಸಲ್ಲಿಸಬಹುದು ಎಂದರು.

‘ನಮ್ಮ ಸಮುದಾಯದ ಜನಸಂಖ್ಯೆಯನ್ನು ಅಂದಾಜು ರೀತಿಯಲ್ಲಿ ಕೆಲವರು ಹೇಳುತ್ತಾರೆ. ಆದರೆ, ಒಮ್ಮೆ ವರದಿ ಬಿಡುಗಡೆಯಾದರೆ ಪ್ರತಿಯೊಂದು ಸಮುದಾಯದ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಯ ನಿಖರ ಮಾಹಿತಿ ಸಿಗಲಿದೆ. ಈ ವರದಿಯಿಂದ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಗುರುತಿಸಿ ಸರ್ಕಾರದ ಯೋಜನೆಗಳನ್ನು ತಲುಪಿಸಲು ಸಾಧ್ಯವಾಗಲಿದೆ’ ಎಂದು ತಂಗಡಿ ಅಭಿಪ್ರಾಯಪಟ್ಟರು.

ಹೂಡಿಕೆ ಹೆಸರಿನಲ್ಲಿ ₹5.14 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಲ್ಟಿನ್ಯಾಷನಲ್ ಕಂಪನಿಯೊಂದರಲ್ಲಿ(ಎಂಎನ್‌ಸಿ) ಕೆಲಸ ಮಾಡುತ್ತಿರುವ 58 ವರ್ಷದ ವ್ಯಕ್ತಿಯಿಂದ ಸೈಬರ್ ವಂಚಕರು ಹೂಡಿಕೆಯ ಹೆಸರಿನಲ್ಲಿ ₹5.14 ಕೋಟಿ ದೋಚಿದ್ದಾರೆ.



ಹಣ ಕಳೆದುಕೊಂಡವರು ಆರ್.ಟಿ. ನಗರದಲ್ಲಿ ನೆಲಸಿದ್ದಾರೆ. ಅವರು ನೀಡಿದ ದೂರಿನ ಮೇರೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡಿರುವ ಉತ್ತರ ವಿಭಾಗದ ಸೈಬರ್ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ವಂಚಕರು ಕಳುಹಿಸಿದ್ದ ಲಿಂಕ್ ಮೂಲಕ ವಿವಿಧ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ದೂರುದಾರರು ಸೇರ್ಪಡೆ ಆಗಿದ್ದರು. ಆ ಗ್ರೂಪ್‌ನಲ್ಲಿ ಹೂಡಿಕೆ ಮಾಡುವಂತೆ ದೀಪಾ ಹಾಗೂ ದಿನೇಶ್ ಕೆ. ವಘೇವಾ ಅವರು ದೂರುದಾರರ ಮನವೊಲಿಸಿದ್ದರು. ವಂಚಕರು ನೀಡಿದ ಸೂಚನೆಯಂತೆ ನಕಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹೂಡಿಕೆ ಮಾಡಲು ಆರಂಭಿಸಿದ್ದರು.

2025ರ ನವೆಂಬರ್ 12ರಿಂದ 2026ರ ಜನವರಿ 7ರ ವರೆಗೆ ಹಂತ ಹಂತವಾಗಿ ದೂರುದಾರರು, ₹5.14 ಕೋಟಿ ಹೂಡಿಕೆ ಮಾಡಿದ್ದರು. ಕೆಲವು ದಿನಗಳು ಕಳೆದ ಮೇಲೆ ನಕಲಿ ಆ್ಯಪ್‌ನಲ್ಲಿ ₹19 ಕೋಟಿ ಲಾಭಾಂಶ ಬಂದಿರುವಂತೆ ತೋರಿಸಲಾಗುತ್ತಿತ್ತು. ಅದನ್ನು ನಂಬಿದ್ದ ದೂರುದಾರರು, ಆ ಹಣವನ್ನು ವಾಪಸ್ ಪಡೆಯಲು ಮುಂದಾಗಿದ್ದರು. ಆಗ ವಂಚಕರು ಕರೆ ಮಾಡಿ, ₹19 ಕೋಟಿ ಹಣವನ್ನು ಡ್ರಾ ಮಾಡಿಕೊಳ್ಳಬೇಕಾದರೆ, ಹೆಚ್ಚುವರಿಯಾಗಿ ₹2 ಕೋಟಿ ಪಾವತಿಸುವಂತೆ ಸೂಚಿಸಿದ್ದರು. ಆಗ ವಂಚನೆ ನಡೆದಿರುವುದು ಅರಿವಿಗೆ ಬಂದು ದೂರು ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ಹೇಳಿವೆ.

‘₹3 ಕೋಟಿ ಮೇಲ್ಪಟ್ಟ ವಂಚನೆ ಪ್ರಕರಣಗಳ ತನಿಖೆಯನ್ನು ಸಿಐಡಿ ನಡೆಸಲಿದೆ. ಸಿಐಡಿ ಪೊಲೀಸರು ಈ ಪ್ರಕರಣದ ತನಿಖೆ ಕೈಗೆತ್ತಿಕೊಳ್ಳುವವರೆಗೆ ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆಯ ಪೊಲೀಸರೇ ತನಿಖೆ ನಡೆಸಲಿದ್ದಾರೆ’ ಎಂದು ಮೂಲಗಳು ಹೇಳಿವೆ.


ನಿಮ್ಮ ಜೀವನವನ್ನು ಸರಿಯಾದ ಹಾದಿಯಲ್ಲಿಡಲು, ಭಾವನೆಗಳಂತೆಯೇ ಹಣದ ಬಳಕೆಯನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕು
ನತಾಶಾ ಮುನ್ಸನ್, ಲೇಖಕಿ

ದುಡ್ಡಿನಂಥಾ ಮಾತು

ಎಂ.ಎಫ್‌ನಲ್ಲಿ ಹೂಡಿಕೆ

ಯಾವುದು ಒಳ್ಳೆಯ ಫಂಡ್?

ಹೂಡಿಕೆ ಮಾಡಲು ಮನಸ್ಸು ಮಾಡಿದರೆ ಸಾಕಾಗುವುದಿಲ್ಲ; ಹೂಡಿಕೆ ಮಾಡಲು ಸೂಕ್ತವಾದ ಫಂಡ್ ಆಯ್ಕೆ ಗೊತ್ತಿರಬೇಕು, ಹೂಡಿಕೆ ಮೊತ್ತವನ್ನು ಯಾವಾಗ ಹಿಂದಕ್ಕೆ ಪಡೆಯಬೇಕು ಎಂಬುದು ಕೂಡ ಗೊತ್ತಿರಬೇಕು. ಈ ಎರಡು ಮಹತ್ವದ ವಿಷಯಗಳ ಮೇಲೆ ಈ ಬರಹ ಗಮನ ಹರಿಸಿದೆ.



• ಶ್ರೀಕಾಂತ್ ಚೌಹಾಣ್

ಹೂಡಿಕೆದಾರರ ಪಾಲಿಗೆ ಮ್ಯೂಚುವಲ್ ಫಂಡ್‌ಗಳು ಅತ್ಯಂತ ಜನಪ್ರಿಯ ಆಯ್ಕೆಗಳಲ್ಲಿ ಒಂದಾಗಿವೆ. ಅವು ಹೂಡಿಕೆದಾರರಿಗೆ ದೇಶದ ಬಂಡವಾಳ ಮಾರುಕಟ್ಟೆಗಳ ಬೆಳವಣಿಗೆಯಲ್ಲಿ ಭಾಗಿಯಾಗಲು ಬಹಳ ಸುಲಭದ ಮಾರ್ಗವೊಂದನ್ನು ಒದಗಿಸುತ್ತವೆ. ಬೇರೆ ಬೇರೆ ಕಡೆಗಳಲ್ಲಿ ಹಣ ತೊಡಗಿಸುವ ಹಲವು ಮ್ಯೂಚುವಲ್ ಫಂಡ್ ಯೋಜನೆಗಳು ಲಭ್ಯವಿವೆ, ಅವು ಭಿನ್ನ ಬಗೆಯ ಹಣಕಾಸಿನ ಗುರಿಗಳನ್ನು ಹೊಂದಿರುವ ಹೂಡಿಕೆದಾರರ ಅಗತ್ಯಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತವೆ. ಆದರೆ ಸರಿಯಾದ ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಳ್ಳುವುದು ಹಾಗೂ ಮ್ಯೂಚುವಲ್ ಫಂಡ್‌ನಿಂದ ಹೂಡಿಕೆಯನ್ನು ಹಿಂದಕ್ಕೆ ಪಡೆಯಲು ಸರಿಯಾದ ಸಮಯ ಯಾವುದು ಎಂಬುದನ್ನು ತಿಳಿದಿರುವುದು ಕೂಡ ಬಹಳ ಮುಖ್ಯ. ಫಂಡ್ ಆಯ್ಕೆ ಹಾಗೂ ಹೂಡಿಕೆ ಹಿಂತೆಗೆತದ ಸಂದರ್ಭದಲ್ಲಿ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಅಂಶಗಳ ಬಗ್ಗೆ ಗಮನ ಹರಿಸೋಣ.

ಸರಿಯಾದ ಮ್ಯೂಚುವಲ್ ಫಂಡ್ ಆಯ್ಕೆ ಹೇಗೆ?

1) ಹಣಕಾಸಿನ ಗುರಿಗಳನ್ನು ಸ್ಪಷ್ಟಪಡಿಸಿಕೊಳ್ಳಿ: ಮೊದಲ ಹೆಜ್ಜೆಯಾಗಿ ನಿಮ್ಮ ಹೂಡಿಕೆಯ ಉದ್ದೇಶ ಏನು ಎಂಬುದನ್ನು ಗುರುತಿಸಿಕೊಳ್ಳಿ. ಅಲ್ಪಾವಧಿಯಲ್ಲಿ ರಜೆಯ ಖರ್ಚುಗಳಿಗಾಗಿ ಅಥವಾ ತುರ್ತು ನಿಧಿಯನ್ನು ಹೊಂದಲು ಹೂಡಿಕೆ ಆರಂಭಿಸುತ್ತಿದ್ದೀರಾ? ಅಥವಾ ನಿವೃತ್ತಿ ನಂತರದ ಜೀವನ, ಮಕ್ಕಳ ಶಿಕ್ಷಣ, ಸಂಪತ್ತು ಸೃಷ್ಟಿಯಂತಹ ದೀರ್ಘಾವಧಿಯ ಗುರಿಗಳನ್ನು ಇಟ್ಟುಕೊಂಡಿದ್ದೀರಾ? ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಸಾಮಾನ್ಯವಾಗಿ ದೀರ್ಘಾವಧಿ ಹೂಡಿಕೆಗಳಿಗೆ ಹೆಚ್ಚು ಸೂಕ್ತವಾಗುತ್ತವೆ. ಅಲ್ಪಾವಧಿ ಅಥವಾ ಮಧ್ಯಮ ಅವಧಿಯಲ್ಲಿ ಸ್ಥಿರತೆಯ ದೃಷ್ಟಿಯಿಂದ ಸಾಲಪತ್ರ ಆಧಾರಿತ ಫಂಡ್‌ಗಳು, ಹೈಬ್ರಿಡ್ ಫಂಡ್‌ಗಳು ಸೂಕ್ತವಾಗುತ್ತವೆ. ಗುರಿಗಳನ್ನು ಸ್ಪಷ್ಟಪಡಿಸಿಕೊಂಡರೆ ಎಷ್ಟು ಅವಧಿಗೆ ಹೂಡಿಕೆ ಮಾಡಬೇಕು, ಎಷ್ಟು ಗಳಿಕೆಯನ್ನು ನಿರೀಕ್ಷಿಸಬಹುದು ಎಂಬುದು ಕೂಡ ಸ್ಪಷ್ಟವಾಗುತ್ತವೆ. ಆಗ ಫಂಡ್ ಆಯ್ಕೆಯು ಸುಗಮವಾಗುತ್ತದೆ.

ಹೂಡಿಕೆ ಹಿಂಪಡೆಯುವ ಮೊದಲು ನೆನಪಿನಲ್ಲಿಡಿ

- ಮಾರುಕಟ್ಟೆಯಲ್ಲಿನ ಅಲ್ಪಾವಧಿ ಅಸ್ಥಿರತೆ ಕಂಡು ವಿಚಲಿತರಾಗದಿರಿ. ತಾತ್ಕಾಲಿಕ ಕುಸಿತಗಳ ಸಂದರ್ಭದಲ್ಲಿ ಭೀತಿಗೆ ಒಳಗಾಗಿ ಹೂಡಿಕೆ ಹಿಂಪಡೆದಲ್ಲಿ, ನಷ್ಟ ಅನುಭವಿಸಬೇಕಾಗಬಹುದು
- ತೆರಿಗೆ ಪರಿಣಾಮಗಳ ಬಗ್ಗೆ ತಿಳಿದಿರಲಿ
- ಅನಗತ್ಯ ವೆಚ್ಚಗಳ ಹೊರೆಯಿಂದ ತಪ್ಪಿಸಿಕೊಳ್ಳಲು ಫಂಡ್‌ನ ಎಕ್ಸಿಟ್ ಲೋಡ್ ಬಗ್ಗೆ ಮಾಹಿತಿ ಪಡೆದುಕೊಳ್ಳಿ. ಹೂಡಿಕೆ ಹಿಂತೆಗೆದುಕೊಳ್ಳುವುದರ ಬಗ್ಗೆ ಮೊದಲೇ ಯೋಜಿಸಿಕೊಂಡರೆ ತೆರಿಗೆ ಹೊರೆಯನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಸಾಧ್ಯ

2) ಎಷ್ಟು ರಿಸ್ಕ್ ತೆಗೆದುಕೊಳ್ಳಬಲ್ಲಿರಿ: ಪ್ರತಿ ಹೂಡಿಕೆದಾರ ತೆಗೆದುಕೊಳ್ಳಬಹುದಾದ ರಿಸ್ಕ್‌ನ ಮಟ್ಟ ಬೇರೆ ಬೇರೆ. ವ್ಯಕ್ತಿಯ ವಯಸ್ಸು, ಆದಾಯದಲ್ಲಿನ ಸ್ಥಿರತೆ, ಹಣಕಾಸಿನ ಹೊಣೆಗಾರಿಕೆಗಳನ್ನು ಇದು ಆಧರಿಸಿರುತ್ತದೆ. ಮಾರುಕಟ್ಟೆಯ ಅಸ್ಥಿರತೆಯನ್ನು, ಮೌಲ್ಯದಲ್ಲಿ ತಾತ್ಕಾಲಿಕವಾಗಿ ಆಗುವ ಇಳಿಕೆಯನ್ನು ನಿಭಾಯಿಸಬಲ್ಲ ವ್ಯಕ್ತಿಗೆ ಈಕ್ವಿಟಿ ಆಧಾರಿತ ಫಂಡ್‌ಗಳು ಹೆಚ್ಚು ಸೂಕ್ತವಾಗಬಹುದು. ಸ್ಥಿರವಾದ ಗಳಿಕೆ, ಕಡಿಮೆ ಪ್ರಮಾಣದ ಏರಿಳಿತ ಬಯಸುವವರು ಸಾಲಪತ್ರ ಆಧಾರಿತ ಫಂಡ್ ಅಥವಾ ಹೈಬ್ರಿಡ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವಾಗಬಹುದು. ಹೂಡಿಕೆದಾರರು ತಾವು ಎಷ್ಟರಮಟ್ಟಿಗೆ ರಿಸ್ಕ್ ತೆಗೆದುಕೊಳ್ಳಬಲ್ಲೆವು ಎಂಬುದನ್ನು ಅರ್ಥ ಮಾಡಿಕೊಂಡಾಗ, ಮಾರುಕಟ್ಟೆ ಕುಸಿತದ ಸಂದರ್ಭಗಳಲ್ಲಿ ಭಾವನಾತ್ಮಕ ನೆಲೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದನ್ನು ತಡೆಯಬಹುದು.

3) ಫಂಡ್‌ನ ಇತಿಹಾಸ ಗಮನಿಸಿ: ಯಾವುದೇ ಫಂಡ್ ಈ ಹಿಂದೆ ಎಷ್ಟರಮಟ್ಟಿಗೆ ಲಾಭ ಗಳಿಸಿದೆ ಎಂಬುದು, ಅದು ಮುಂದೆ ಎಷ್ಟು ಲಾಭ ತಂದುಕೊಡಬಹುದು ಎಂಬುದನ್ನು ಖಚಿತವಾಗಿ ಹೇಳುವುದಿಲ್ಲ. ಆದರೆ ಹಿಂದಿನ ದಾಖಲೆಗಳು ಮಾರುಕಟ್ಟೆಯ ಏಳುಬೀಳುಗಳ ಸಂದರ್ಭಗಳಲ್ಲಿಯೂ ಫಂಡ್ ಎಷ್ಟರಮಟ್ಟಿಗೆ ಲಾಭ ತಂದುಕೊಟ್ಟಿದೆ ಎಂಬುದನ್ನು ತಿಳಿಸುತ್ತವೆ. ಭಾರಿ ಪ್ರಮಾಣದ ಲಾಭ ಯಾವ ಫಂಡ್‌ನಲ್ಲಿ ಬಂದಿದೆ ಎಂಬುದನ್ನು ನೋಡುವುದಕ್ಕಿಂತ, ಯಾವ ಫಂಡ್ ಸ್ಥಿರವಾದ ಪ್ರಮಾಣದಲ್ಲಿ ಲಾಭ ನೀಡಿದೆ ಎನ್ನುವುದನ್ನು ಗಮನಿಸಬೇಕು. ಮಾರುಕಟ್ಟೆಯಲ್ಲಿ ಗೂಳಿಯ ಓಟ ಇದ್ದಾಗಲೂ ಕರಡಿ ಕುಣಿತ ಇದ್ದಾಗಲೂ ಸ್ಥಿರವಾದ ಗಳಿಕೆಯನ್ನು ತಂದುಕೊಟ್ಟ ಫಂಡ್, ಅಲ್ಪಾವಧಿಯಲ್ಲಿ ಹೆಚ್ಚಿನ ಲಾಭ ನೀಡಿದ ಫಂಡ್‌ಗಿಂತ ಹೆಚ್ಚು ವಿಶ್ವಾಸಾರ್ಹವಾಗುತ್ತದೆ.

ಫಂಡ್ ನೀಡಿರುವ ಲಾಭವನ್ನು ಸಂಬಂಧಪಟ್ಟ ಸೂಚ್ಯಂಕದ ಜೊತೆ ಅಥವಾ ಸಮಾನ ನೆಲೆಯ ಇತರ ಫಂಡ್‌ಗಳ ಜೊತೆ ಹೋಲಿಕೆ ಮಾಡಿ ನೋಡುವುದು ಉತ್ತಮ ಕ್ರಮವಾಗುತ್ತದೆ.

4) ಫಂಡ್ ಯಾವ ವರ್ಗಕ್ಕೆ ಸೇರಿದ್ದು?: ಈಕ್ವಿಟಿ, ಸಾಲಪತ್ರ, ಹೈಬ್ರಿಡ್ ಮತ್ತು ವಿಷಯವಾರು ಫಂಡ್‌ಗಳು ಭಿನ್ನ ಉದ್ದೇಶಗಳನ್ನು ಹೊಂದಿರುತ್ತವೆ. ವಿಷಯವಾರು (thematic) ಫಂಡ್‌ಗಳು ಬಹಳ ಬೇಗನೆ ಮೌಲ್ಯವರ್ಧಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬಹುದಾದರೂ ಅವುಗಳಲ್ಲಿ ರಿಸ್ಕ್ ಕೂಡ ಹೆಚ್ಚಿರುತ್ತದೆ. ಏಕೆಂದರೆ ಇಲ್ಲಿ ಹೂಡಿಕೆಯ ಮೊತ್ತವು ಕೆಲವೇ ಕಂಪನಿಗಳಲ್ಲಿ ವಿನಿಯೋಗ ಆಗಿರುತ್ತದೆ. ಆದರೆ ಹೆಚ್ಚಿನ ಸಂಖ್ಯೆಯ ಕಂಪನಿಗಳಲ್ಲಿ ಹಣ ತೊಡಗಿಸುವ ಈಕ್ವಿಟಿ ಫಂಡ್‌ಗಳು, ಸೂಚ್ಯಂಕ ಆಧಾರಿತ ಫಂಡ್‌ಗಳು ಅಥವಾ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ಗಳು ರಿಸ್ಕ್‌ನ ನಿರ್ವಹಣೆ ಹಾಗೂ ಲಾಭದ ನಡುವೆ ಸಮತೋಲನವೊಂದನ್ನು ತರಬಲ್ಲವು. ಹೂಡಿಕೆದಾರರು ಒಂದೇ ವರ್ಗದ ಹಲವು ಫಂಡ್‌ಗಳಲ್ಲಿ ಹಣ ತೊಡಗಿಸುವುದನ್ನು ಕಡಿಮೆ ಮಾಡಬೇಕು.

5) ವೆಚ್ಚದ ಪರಿಶೀಲನೆ: ಎಕ್ಸ್‌ಪೆನ್ಸ್ ರೇಷ್ಯೊ, ಹೂಡಿಕೆ ಮಾಡುವ ಹಾಗೂ ಹಿಂಪಡೆಯುವುದರ ಮೇಲಿನ ವೆಚ್ಚಗಳು ಒಟ್ಟು ಲಾಭದ ಮೇಲೆ ಪರಿಣಾಮ ಬೀರಬಲ್ಲವು. ವೆಚ್ಚವು ಕಡಿಮೆ ಇದ್ದರೆ ಹೂಡಿಕೆದಾರರಿಗೆ ಒಳಿತು. ಎಕ್ಸ್‌ಪೆನ್ಸ್ ರೇಷ್ಯೊದಲ್ಲಿನ ಸಣ್ಣ ವ್ಯತ್ಯಾಸ ಕೂಡ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿಯ ಮೇಲೆ ದೊಡ್ಡ ಪರಿಣಾಮ ಉಂಟುಮಾಡಬಲ್ಲದು.

6) ಫಂಡ್ ನಿರ್ವಾಹಕರ ಪರಿಣತಿ: ಹೆಚ್ಚಿನ ಕೌಶಲ ಹಾಗೂ ಅನುಭವ ಹೊಂದಿರುವ ಫಂಡ್ ನಿರ್ವಾಹಕ ಮಾರುಕಟ್ಟೆಯ ಏರಿಳಿತಗಳನ್ನು ನಿಭಾಯಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲ. ಫಂಡ್ ನಿರ್ವಹಣಾ ತಂಡದಲ್ಲಿ ಸ್ಥಿರತೆ ಹಾಗೂ ಸ್ಪಷ್ಟವಾದ ಹೂಡಿಕೆ ತತ್ತ್ವವು ದೀರ್ಘಾವಧಿ ಹೂಡಿಕೆದಾರರಿಗೆ ಪೂರಕವಾದ ಅಂಶಗಳು.

ಲೇಖಕ ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನಾ ವಿಭಾಗದ ಮುಖ್ಯಸ್ಥ

ಮ್ಯೂಚುವಲ್ ಫಂಡ್‌ನಿಂದ ಹಣ ಹಿಂಪಡೆಯುವುದು ಯಾವಾಗ?

ಮ್ಯೂಚುವಲ್ ಫಂಡ್ ಹೂಡಿಕೆಗಳು ದೀರ್ಘಾವಧಿಗೆ ಬಹಳ ಸೂಕ್ತವಾದವು. ಆದರೆ ಕೆಲವು ಸಂದರ್ಭಗಳಲ್ಲಿ ಅವುಗಳಿಂದ ಒಂದಿಷ್ಟು ಅಥವಾ ಪೂರ್ತಿಯಾಗಿ ಹಣವನ್ನು ಹಿಂಪಡೆಯುವುದು ಸರಿಯಾದ ನಿರ್ಧಾರವಾಗಬಹುದು.

1) ಗುರಿ ತಲುಪಿದಾಗ: ಹೂಡಿಕೆಯು ತನ್ನ ಗುರಿಯನ್ನು ತಲುಪಿದಾಗ, ಹೂಡಿಕೆಯ ಉದ್ದೇಶ ಈಡೇರಿದಾಗ ಮಾರುಕಟ್ಟೆಯ ಅಪಾಯಕ್ಕೆ ಮೈಯೊಡ್ಡಿ ಕುಳಿತಿರುವ ಬದಲು ಒಟ್ಟು ಮೊತ್ತವನ್ನು ಹಿಂಪಡೆಯುವುದು ಸರಿಯಾದ ನಡೆಯಾಗಬಹುದು. ಒಂದೇ ಬಾರಿಗೆ ಹಣ ಹಿಂಪಡೆಯುವ ಬದಲು ವ್ಯವಸ್ಥಿತವಾಗಿ ಹಿಂದಕ್ಕೆ ಪಡೆಯುವ (ಎಸ್‌ಡಬ್ಲ್ಯುಪಿ) ಮಾರ್ಗದ ಮೊರೆ ಹೋಗಬಹುದು.

2) ನಿರಂತರವಾಗಿ ಕಳಪೆ ಗಳಿಕೆ: ಫಂಡ್ ಒಂದು ತನ್ನದೇ ವರ್ಗದ ಇತರ ಫಂಡ್‌ಗಳಿಗಿಂತ ನಿರಂತರವಾಗಿ ಕಡಿಮೆ ಪ್ರಮಾಣದಲ್ಲಿ ಲಾಭ ತಂದುಕೊಡುತ್ತಿದ್ದರೆ, ಆ ಫಂಡ್‌ನ ಕಾರ್ಯತಂತ್ರದಲ್ಲಿ ಅಥವಾ ಹೂಡಿಕೆಯ ವಿಚಾರದಲ್ಲಿ ಸಮಸ್ಯೆಗಳು ಇರುವುದನ್ನು ಅದು ಸೂಚಿಸುತ್ತಿರಬಹುದು. ಇಂತಹ ಸಂದರ್ಭಗಳಲ್ಲಿ ಆ ಫಂಡ್‌ನಲ್ಲಿನ ಹೂಡಿಕೆಯನ್ನು ಮರುಪರಿಶೀಲಿಸುವುದು ಹಾಗೂ ಹೆಚ್ಚು ಉತ್ತಮವಾಗಿರುವ ಇನ್ನೊಂದು ಫಂಡ್‌ಗೆ ಹಣವನ್ನು ವರ್ಗಾವಣೆ ಮಾಡುವುದು ಹೆಚ್ಚು ಲಾಭದಾಯಕ ಆಗಬಹುದು.

3) ಹೂಡಿಕೆಯ ಉದ್ದೇಶದಲ್ಲಿ ಬದಲಾವಣೆ: ಕೆಲವು ಸಂದರ್ಭಗಳಲ್ಲಿ ಫಂಡ್‌ಗಳು ತಮ್ಮ ಹೂಡಿಕೆಯ ಬಗೆಯನ್ನು, ಹಣದ ಹಂಚಿಕೆಯನ್ನು ಬದಲಾಯಿಸುತ್ತವೆ. ಇಂತಹ ಬದಲಾವಣೆಯು ಹೂಡಿಕೆದಾರನ ಹಣಕಾಸಿನ ಗುರಿಗಳಿಗೆ ಅಥವಾ ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾಗಿ ಇಲ್ಲ ಎಂದಾದರೆ ಆ ಫಂಡ್‌ನಿಂದ ಹೊರಬರುವುದು ವಿವೇಕದ ನಿರ್ಧಾರವಾಗಬಹುದು.

4) ಮರುಹೊಂದಾಣಿಕೆಯ ಅಗತ್ಯ: ಸಮಯ ಕಳೆದಂತೆಲ್ಲ ಹೂಡಿಕೆಯ ಮೊತ್ತವು ಒಂದೇ ಬಗೆಯ ಹೂಡಿಕೆ ವರ್ಗದಲ್ಲಿ ಹೆಚ್ಚು ವಿನಿಯೋಗ ಆಗಬಹುದು. ಹೀಗೆ ಆದಾಗ ಕಡಿಮೆ ಪ್ರಾಧಾನ್ಯ ದೊರೆತಿರುವ ಹೂಡಿಕೆ ವರ್ಗಕ್ಕೆ ತುಸು ಹೆಚ್ಚು ಹಣವನ್ನು ವಿನಿಯೋಗಿಸುವುದು ಸಮತೋಲನ ಕಾಯ್ದುಕೊಳ್ಳಲು ಹಾಗೂ ಮಾರುಕಟ್ಟೆಯ ರಿಸ್ಕ್‌ಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡಬಹುದು.


5) ತುರ್ತು ಅಗತ್ಯಗಳು: ಹಣದ ತುರ್ತು ಅಗತ್ಯಗಳು ಎದುರಾದಾಗ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ನಗದೀಕರಿಸಿಕೊಳ್ಳಬಹುದು. ಆದರೆ ಇಂತಹ ಸಂದರ್ಭಗಳಲ್ಲಿ ಹೂಡಿಕೆದಾರರಿಗೆ ತೆರಿಗೆ ಬಗ್ಗೆ ಹಾಗೂ ಫಂಡ್‌ನ ಎಕ್ಸಿಟ್ ಲೋಡ್ ಬಗ್ಗೆ ಮಾಹಿತಿ ಇರಬೇಕು.

ಕೊನೆ ಮಾತು: ಮ್ಯೂಚುವಲ್ ಫಂಡ್ ಆಯ್ಕೆ ಮಾಡುವಾಗ ಪರಿಶೀಲನೆ, ಅಧ್ಯಯನ ಅಗತ್ಯ. ಅಷ್ಟೇ ಮುಖ್ಯವಾದುದು ಫಂಡ್‌ಗಳಲ್ಲಿನ ಹೂಡಿಕೆಯ ಬಗ್ಗೆ ಆಗಾಗ ಪರಿಶೀಲನೆ ನಡೆಸಿ, ಯಾವಾಗ ಹೂಡಿಕೆಯನ್ನು ಹಿಂಪಡೆಯಬೇಕು ಎಂಬುದನ್ನು ತೀರ್ಮಾನಿಸುವುದು. ಹೂಡಿಕೆ ಮಾಡುವುದು ಯಾವಾಗ, ಹೂಡಿಕೆಯನ್ನು ಹಿಂಪಡೆಯುವುದು ಯಾವಾಗ ಎಂಬುದರ ಬಗ್ಗೆ ಸರಿಯಾಗಿ ಗಮನ ನೀಡುವ ಮೂಲಕ ಹೂಡಿಕೆದಾರರು ಲಾಭದ ಪ್ರಮಾಣ ಉತ್ತಮವಾಗಿ ಇರುವಂತೆ ನೋಡಿಕೊಳ್ಳಬಹುದು.

ಫ್ಲೆಕ್ಸಿಕ್ಯಾಪ್ ಫಂಡ್: ಒಂದು ಅವಲೋಕನ

ಹೂಡಿಕೆದಾರರ ಹಣವನ್ನು ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಕಂಪನಿಗಳಲ್ಲಿ ಯಾವ ಪ್ರಮಾಣದಲ್ಲಿ ತೊಡಗಿಸಬೇಕು ಎಂಬ ವಿಚಾರದಲ್ಲಿ ಸಂಪೂರ್ಣವಾಗಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಫ್ಲೆಕ್ಸಿಕ್ಯಾಪ್ ಫಂಡ್‌ಗಳು ನಿಧಿ ನಿರ್ವಾಹಕರಿಗೆ ನೀಡುತ್ತವೆ.


ಮಾರುಕಟ್ಟೆಯಲ್ಲಿ ಹಲವು ಮ್ಯೂಚುವಲ್ ಫಂಡ್ ಕಂಪನಿಗಳು ಫ್ಲೆಕ್ಸಿಕ್ಯಾಪ್ ಫಂಡ್‌ನಲ್ಲಿ ಹೂಡಿಕೆ ಮಾಡುವ ಅವಕಾಶವನ್ನು ನೀಡುತ್ತಿವೆ. ಫ್ಲೆಕ್ಸಿಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆಯು ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತಿದೆ.




1.35 ಕೋಟಿ
2023ರ ಡಿಸೆಂಬರ್ 31ಕ್ಕೆ ಇದ್ದ ಫ್ಲೆಕ್ಸಿಕ್ಯಾಪ್ ಫಂಡ್ ಖಾತೆಗಳ ಸಂಖ್ಯೆ

1.69 ಕೋಟಿ
2024ರ ಡಿಸೆಂಬರ್ 31ಕ್ಕೆ ಇದ್ದ ಫ್ಲೆಕ್ಸಿಕ್ಯಾಪ್ ಫಂಡ್ ಖಾತೆಗಳ ಸಂಖ್ಯೆ

2.20 ಕೋಟಿ
2025ರ ಡಿಸೆಂಬರ್ 31ಕ್ಕೆ ಇದ್ದ ಫ್ಲೆಕ್ಸಿಕ್ಯಾಪ್ ಫಂಡ್ ಖಾತೆಗಳ ಸಂಖ್ಯೆ





(ಆಧಾರ: ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ)

ಐಟಿಸಿ ಹೋಟೆಲ್ಸ್ ಲಿಮಿಟೆಡ್

ಬ್ರೋಕರೇಜ್ ಮಾತು

ಐಟಿಸಿ ಹೋಟೆಲ್ಸ್ ಲಿಮಿಟೆಡ್‌ನ ಷೇರಿನ ಬೆಲೆ ₹235ಕ್ಕೆ ತಲುಪಲಿದೆ ಎಂದು ಬ್ರೋಕರೇಜ್ ಸಂಸ್ಥೆ ಜೆ.ಎಂ.ಫೈನಾನ್ಶಿಯಲ್ ಹೇಳಿದೆ.

2024–25ರಿಂದ 2027–28ರವರೆಗೆ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 11ರಷ್ಟು ಮತ್ತು ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ಶೇ 14ರಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ.

ಸರಾಸರಿ ಕೊಠಡಿ ಬಾಡಿಗೆ ದರದಲ್ಲಿ (ಎಆರ್‌ಆರ್) ಶೇ 9ರಷ್ಟು ಹೆಚ್ಚಳವಾಗಿದೆ ಮತ್ತು ಹೋಟೆಲ್‌ನ ಕೊಠಡಿ ಬಳಕೆ ಪ್ರಮಾಣ ಶೇ 2.90ರಷ್ಟು ಏರಿಕೆಯಾಗಿದೆ. ಲಭ್ಯವಿರುವ ಪ್ರತಿ ಕೊಠಡಿಯಿಂದ ಬರುವ ವರಮಾನದಲ್ಲಿ ಶೇ 13ರಷ್ಟು ಹೆಚ್ಚಳವಾಗಿದೆ.

ಐಟಿಸಿ ರತ್ನದೀಪ (ಶ್ರೀಲಂಕಾ) ಹೋಟೆಲ್ ಲಭ್ಯವಿರುವ ತನ್ನ ಪ್ರತಿ ಕೊಠಡಿಯಿಂದ ಬರುವ ವರಮಾನದ ವಿಷಯದಲ್ಲಿ ಮಾರುಕಟ್ಟೆ ನಾಯಕನ ಸ್ಥಾನವನ್ನು ಕಾಯ್ದುಕೊಂಡಿದೆ. ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನದಲ್ಲಿ ಶೇ 21ರಷ್ಟು ಹೆಚ್ಚಳವಾಗಿದ್ದು, ₹1,231 ಕೋಟಿ ಗಳಿಸಿದೆ.

ನವದೆಹಲಿಯ ದ್ವಾರಕಾ ಪ್ರದೇಶದ ಯಶೋಭೂಮಿಯಲ್ಲಿ ಪಂಚತಾರಾ ಹೋಟೆಲ್ ನಿರ್ಮಿಸಲು 0.9 ಎಕರೆ ಜಾಗವನ್ನು 91 ವರ್ಷದ ಅವಧಿಗೆ ಐಟಿಸಿ ಹೋಟೆಲ್ ಗುತ್ತಿಗೆ ಪಡೆದುಕೊಂಡಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಐಟಿಸಿ ಹೋಟೆಲ್‌ನ ಷೇರಿನ ಬೆಲೆ ₹187.55 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

IV. Answer the following questions in 2-3 sentences each:

18. Why were the people of Mumbai afraid according to Baleshwar?

Ans:- According to Baleshwar, the people of Mumbai were afraid of getting caught or involved in the legal system or with the police. This fear, according to Baleshwar, stemmed from the general distrust and anxiety they felt towards these institutions. He highlights that the people were apprehensive about being drawn into legal battles or facing police actions

19. How did Swami become a hero overnight though he was not courageous?

Ans:- Whenever Swami's father, cook and a servant caught the burglar, the next day congratulations were showered on Swami. though he was not so courageous, the timely spirit made him as hero. Swami bite the burglar with all his strength to escape from him. His timely action made him as hero.

20. Why did Nehru choose Dr. Ambedkar as the law minister of independent India?

Ans:- Jawaharlal Nehru chose Dr. Ambedkar to be the first Law Minister of Independent India in recognition of Dr. Amedkar's skills in the field of law and legislation and also a tribute to his vision of social justice, and as a tribute to the success of Dr. Ambedkar's own campaigns against social injustice.

OR

Why is Dr. B.R. Ambedkar considered as a champion of the depressed classes in India?

Ans:- Dr. B.R. Ambedkar was influenced by the work of Mahatma Phule. He decided to devote all his time and talents to improve the conditions of under privileged or depressed classes in our country. For this he started newspapers like Mooknayak, Bahishkrit Bharath and Samatha.

Hitakarini Sabha was set up by him. So all his works made him to think as a champion of the depressed classes in India.

21. Which are the activities carried out on the earth according to the poet in the poem "I am the Land" ?

Ans:- According to the poet, in the poem I am the Land, various activities that carry out on the Earth are farmers tilling the land or farming, planting trees, growing fruits and grass, children dancing and singing, nurturing nature, and human activities that impact the environment etc.

OR

How does the poet Marina de Bellagenta express the feelings of the land?

Ans:- The Poetess herself being the earth and says what are the things she had to tolerate and challenged the man that he cannot put a fence around the planet earth (her). Earth as a whole planet is very big and the man cannot put a fence and it is impossible for him. She can wait because she is the mother (land).

22. "Sathish became a great artist." What makes you to appreciate him?

Ans:- Satish was a great artist. His unique artistic style, blending traditional Indian themes with modern techniques, his dedication to his craft, and the emotional resonance his work evokes, make him a highly appreciated artist. His paintings have captured the attention of art enthusiasts worldwide. He was honored Padma Vibhushan and he published many books on various arts.

OR

Satish saw a bird through the window. How did the bird appear to him?

Ans : Satish saw a bird through the window, it was a rare bird and he had never seen that type of bird before. That bird had a longish tail and black crest. It had restless energy. Its eyes always kept moving here and there and bird was ready for flight at any moment. So he was attracted by it.

23. "Nobody is satisfied with his wealth, everybody is satisfied with his wisdom."

(Apl :2025)

Ans:- Keilis Borok says "Nobody is satisfied with his wealth, everybody is satisfied with his wisdom. It suggests that while wealth can bring temporary satisfaction, true fulfillment comes from wisdom and knowledge. This perspective can be justified by understanding the limitations of wealth and the lasting benefits of wisdom. Though people long for money which can never satisfy humans whereas wisdom or intellectuality and the basic science is very much required for the survival of humankind

24. In the darkness swamy felt something was moving down. What did he do then?

Ans: Swamy saw something was moving down, he thought that his end had come, why should he wait? As it came nearer, he hugged it and bite it with all his strength like a mortal weapons to escape from it.

25. Smitha, on seeing the newspaper, almost shouted with excitement why she did react so?

Ans : Smitha read the news that Pandit Ravi Shankar will give a concert, at shanmukha kannada Auditorium next day. She and her brother was fan Ravishnkar, so she shouted with excitement because it was the life time importunately for them.

(Contd……….)

Biology

REVISION : MODEL QUESTIONS

6) What is an allergy?

Ans:- The hypersensitive reaction of the immune system to certain antigens present in the environment is called allergy

7). List any four complications a person suffers from untreated sexually transmitted infections?

Ans:- Complications a person suffers from untreated sexually transmitted infections

1) Pelvic pain.
2) Pregnancy complications.
3) Eye inflammation.
4) Arthritis.
5) Pelvic inflammatory disease.
6) Infertility.
7) Heart disease.
8) Certain cancers, such as HPV -associated cervical and rectal cancers.

8) Write about Medical termination of pregnancy act 2017.

Ans:- The Medical Termination of Pregnancy (Amendment) Act, 2017 was enacted by the government of India with the intension of reducing the incidence of illegal abortion and consequent maternal mortality and morbidity. According to this Act, a pregnancy may be terminated on certain considered grounds within the first 12 weeks of pregnancy on the opinion of one registered medical practitioner. If the pregnancy has lasted more than 12 weeks, but fewer than 24 weeks, two registered medical practitioners must be of the opinion, formed in good faith, that the required ground exist.

The grounds for such termination of pregnancies are: (i) The continuation of the pregnancy would involve a risk to the life of the pregnant woman or of grave injury physical or mental health; or (ii) There is a substantial risk to the child if it were born, it would suffer from such physical or mental abnormalities as to be seriously handicapped

9). What's the difference between convergent and divergent evolution?

Ans:- Differences Between Convergent and Divergent Evolution

Convergent evolution shows how species have evolved separately but have similar (analogous) structures. Divergent evolution demonstrates how species can have common (homologous) anatomical structures which have evolved for different purposes.

10). What are primary lymphoid organs?

Ans:- These organs include the bone marrow and the thymus. They create special immune system cells called lymphocytes

11) Differences between Active Immunity & Passive Immunity.

Ans:-


Active Immunity	Passive Immunity
It is produced due to contact with pathogen or its antigen.	It is produced due to obtaining antibodies from outside.
Immunity is not immediate. A time lapse occurs for its development.	Immunity develops immediately.
It lasts for sufficiently long period, may be lifelong.	It lasts for a few days.
Antibodies are produced by the body in response to pathogen or antigen.	Antibodies are obtained from outside.
Side effects are very few.	At times the body reacts to the introduction of antisera. It is called serum sickness.

12) Mention the two medical grounds on which the pregnancies are subjected to termination.

Ans:- The two primary medical grounds for pregnancy termination are: risk to the mother's life and severe fetal abnormalities; meaning a pregnancy can be terminated if continuing it poses a serious threat to the mother's health or if prenatal testing reveals significant abnormalities in the fetus that are incompatible with life or would result in severe suffering after birth

13) Draw a neat and labelled diagram of the human sperm.

Ans:- Human sperm



(Contd…..)

ನ.1: ಎಲ್ಲ ಕಾಯ್ದೆಗಳು ಕನ್ನಡಕ್ಕೆ

ಅಧಿಕಾರಿಗಳಿಗೆ ಸೂಚನೆ ನೀಡಿದ ಕಾನೂನು ಸಚಿವ ಎಚ್‌.ಕೆ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದ ಎಲ್ಲ ಕಾನೂನುಗಳನ್ನು ನ. 1ರ ಒಳಗೆ ಕನ್ನಡಕ್ಕೆ ಸಂಪೂರ್ಣವಾಗಿ ಭಾಷಾಂತರಿಸಬೇಕು' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಇಲಾಖೆ ಹಾಗೂ ಕರ್ನಾಟಕ ರಾಜಭಾಷಾ ಆಯೋಗ, ಭಾಷಾಂತರ ನಿರ್ದೇಶನಾಲಯ ಸಹಯೋಗದಲ್ಲಿ ವಿಕಾಸಸೌಧದಲ್ಲಿ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ದ್ವಿಭಾಷಾ ಆವೃತ್ತಿಗಳನ್ನು ಬುಧವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಕೇಂದ್ರದ ಕಾನೂನುಗಳ ಪೈಕಿ ಶೇ 50ರಷ್ಟು ಮಾತ್ರ ಈವರೆಗೆ ಕನ್ನಡಕ್ಕೆ ಭಾಷಾಂತರ ಆಗಿದೆ. ಇದು ಆರೋಗ್ಯಕರ ಬೆಳವಣಿಗೆಯಲ್ಲ. ಕಾನೂನು ರೂಪಿಸಿದ ನಂತರ ಅದನ್ನು ಜನಸಾಮಾನ್ಯರಿಗೆ ತಲುಪಿಸುವ ಬದಲು, ಅವರಿಗೆ ಗೊತ್ತು ಎಂದು ತಿಳಿದುಕೊಂಡು ಆಡಳಿತ ನಡೆಸುವ ಪರಿಸ್ಥಿತಿ ಬಂದಿದೆ' ಎಂದರು.

'ಭಾಷಾಂತರ ವಿಭಾಗದಲ್ಲಿ ಮಾನವ ಸಂಪನ್ಮೂಲ ಅಥವಾ ಹಣಕಾಸಿನ ಕೊರತೆಯನ್ನು ನೀಗಿಸಲು ಸರ್ಕಾರ ಬದ್ಧವಾಗಿದೆ. ಹೊರಗುತ್ತಿಗೆ ಆಧಾರದಲ್ಲಿ ಭಾಷಾಂತರ ಪಂಡಿತರನ್ನು ಬಳಸಿಕೊಂಡು ಕೇಂದ್ರದ ಎಲ್ಲ ಕಾನೂನುಗಳನ್ನು ಕನ್ನಡಕ್ಕೆ ಅನುವಾದಿಸಬೇಕು' ಎಂದು ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

'ಭಾರತೀಯ ದಂಡ ಸಂಹಿತೆಯಿಂದ ಬಿಎನ್‌ಎಸ್, ಬಿಎನ್‌ಎಸ್‌ಎಸ್‌ಗೆ ಬದಲಾವಣೆ ಮಾಡಿದಾಗ ರಾಜ್ಯದಿಂದ 21 ತಿದ್ದುಪಡಿಗಳನ್ನು ಕೇಂದ್ರಕ್ಕೆ ಶಿಫಾರಸು ಮಾಡಲಾಗಿತ್ತು. ಆದರೆ, ಆ ತಿದ್ದುಪಡಿಗಳಿಗೆ ಕೇಂದ್ರ ಸರ್ಕಾರ ಒಪ್ಪಿಲ್ಲ. ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ರಾಷ್ಟ್ರ ಪಿತಾಮಹನನ್ನು ಅಪಮಾನ ಮಾಡುವುದನ್ನು ತಡೆಗಟ್ಟುವ ಅಂಶಗಳೂ ಆ ತಿದ್ದುಪಡಿಗಳಲ್ಲಿ ಇದ್ದವು' ಎಂದು ಅವರು ತಿಳಿಸಿದರು.

ಕುಪ್ಪಂ ದ್ರಾವಿಡ ವಿಶ್ವವಿದ್ಯಾಲಯದ ಕುಲಪತಿ ದೊರೆಸ್ವಾಮಿ, ಕೇಂದ್ರ ಕಾನೂನು ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಕೆ.ವಿ. ಕುಮಾರ್, ಜಂಟಿ ಕಾರ್ಯದರ್ಶಿ ಬ್ರಜೇಶ್ ಕುಮಾರ್ ಸಿಂಗ್, ರಾಜ್ಯ ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಜಿ. ಶ್ರೀಧರ್ ಇದ್ದರು.


ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪುರುಷೋತ್ತಮ ಬಿಳಿಮಲೆ, ಎಚ್‌.ಕೆ. ಪಾಟೀಲ, ದೊರೆಸ್ವಾಮಿ ಪ್ರಜಾವಾಣಿ ಚಿತ್ರ

'ಆಡಳಿತ ಭಾಷೆ ಜನರ ಭಾಷೆ ಆಗಬೇಕು'

'ಆಡಳಿತ ಭಾಷೆ ಜನಸಾಮಾನ್ಯರ ಭಾಷೆಯಾದರೆ ಮಾತ್ರ ಕಾನೂನು ಮತ್ತು ಯೋಜನೆಗಳ ಅನುಷ್ಠಾನ ಸಾಧ್ಯವಾಗಲಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

'ಆಡಳಿತ ಭಾಷೆ ಜನರ ಭಾಷೆ ಆಗದಿದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಬಿಕ್ಕಟ್ಟು ಮುಂದುವರಿಯಲಿದೆ. ಇದೇ ಕಾರಣಕ್ಕೆ ಕೇಂದ್ರದ ಜತೆಗೆ ದಕ್ಷಿಣದ ರಾಜ್ಯಗಳು ಭಿನ್ನಾಭಿಪ್ರಾಯ ಹೊಂದಿದ್ದು, ಅದನ್ನು ಬಗೆಹರಿಸುವಲ್ಲಿ ಭಾಷಾಂತರ ವಿಭಾಗ ಪ್ರಮುಖ ಪಾತ್ರ ವಹಿಸಬೇಕು' ಎಂದು ಸಲಹೆ ನೀಡಿದರು.

'ಜಾಗತೀಕರಣದ ಬಳಿಕ ಇಂಗ್ಲಿಷ್ ಸಂವಹನ, ಆಡಳಿತ ಭಾಷೆ ಆಯಿತು. ಸಮೀಕ್ಷೆಯೊಂದರ ಪ್ರಕಾರ 1957ರ ನಂತರ 254 ಭಾಷೆಗಳು ನಾಶ ಆಗಿವೆ. ಕೆಲವೇ ವರ್ಷಗಳಲ್ಲಿ ಶೇ 92 ಜನರ ಭಾಷೆ, ಮಾತನಾಡಲು ಮಾತ್ರ ಸೀಮಿತವಾಗಲಿದ್ದು, ಶೇ 8ರಷ್ಟು ಜನರ ಭಾಷೆ ಪ್ರಾಬಲ್ಯ ಸಾಧಿಸಲಿದೆ' ಎಂದರು.

ಸ್ಥಳೀಯ ಸಂಸ್ಥೆಗೂ ಮೈತ್ರಿ: ಚರ್ಚೆ

ಪ್ರಜಾವಾಣಿ ವಾರ್ತೆ

ಹಾಸನ: 'ಕೆಟ್ಟ ಆಡಳಿತದ ರಾಜ್ಯ ಸರ್ಕಾರವನ್ನು ಕಿತ್ತೆಸೆಯಬೇಕು ಎಂಬುದು ಜನರ ಬಯಕೆ. ಅದಕ್ಕೆ ಅನುಗುಣವಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿ ಕುರಿತು ಉಭಯ ಪಕ್ಷಗಳ ನಾಯಕರು ನಿರ್ಧಾರ ಕೈಗೊಳ್ಳಲಿದ್ದೇವೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಬುಧವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಗೊಂದಲ ಆಗಬಾರದು ಎಂದು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೈತ್ರಿ ಬಗ್ಗೆ ಎಚ್‌.ಡಿ.ದೇವೇಗೌಡರು ಮಾತನಾಡಿದ್ದಾರೆ' ಎಂದರು.

'ರಾಜ್ಯದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸಾಧ್ಯವಾದ ಮಟ್ಟಿಗೆ ಮೈತ್ರಿ ಮಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಉಭಯ ಪಕ್ಷಗಳ ನಾಯಕರು ಕುಳಿತು ಚರ್ಚಿಸುತ್ತೇವೆ' ಎಂದರು.


ಕುಮಾರಸ್ವಾಮಿ

'ಪೌರಾಯುಕ್ತೆಗೆ ಅವಾಚ್ಯವಾಗಿ ನಿಂದನೆ, ಅಬಕಾರಿ ಅಧಿಕಾರಿಗಳ ಬಳಿ ನಗದು ವಶ, ಮಹಿಳೆ ಜೊತೆ ಐಪಿಎಸ್ ಅಧಿಕಾರಿಯ ಅಸಭ್ಯ ವರ್ತನೆ ಸೇರಿದಂತೆ ಅಧಿಕಾರಿಗಳ ನಡವಳಿಕೆ, ಭ್ರಷ್ಟಾಚಾರದ ಕುರಿತು ಚರ್ಚಿಸಲು ಆಗದಂತಹ ಅಸಹ್ಯಕರ ವಾತಾವರಣವನ್ನು ರಾಜ್ಯದಲ್ಲಿ ನಿರ್ಮಿಸಿದ್ದಾರೆ. ಯಾವುದೇ ಹಿಟ್ ಅಂಡ್ ರನ್ ಇಲ್ಲ. ನಿಮ್ಮ ಕರ್ಮಕಾಂಡ ಹೇಳಲು ನನ್ನ ಬಳಿ ಸಾಕಷ್ಟು ದಾಖಲೆಗಳಿವೆ' ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

'ಜಿಲ್ಲೆಯಲ್ಲಿ ಎರಡು ಸಮಾವೇಶ ನಡೆಸುವ ಮೂಲಕ ಜೆಡಿಎಸ್ ನಿರ್ನಾಮಕ್ಕೆ ಕಾಂಗ್ರೆಸ್ಸಿಗರು ಹೊರಟಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸಮಾವೇಶ ಆಯೋಜಿಸುವ ಮೂಲಕ ಜನರು ಹಾಗೂ ಪಕ್ಷದ ಕಾರ್ಯಕರ್ತರಿಗೆ ಸಂದೇಶ ನೀಡಲಾಗುವುದು' ಎಂದು ಹೇಳಿದರು.

ಫೈನಾನ್ಸ್ ಕಿರುಕುಳ: ಆತ್ಮಹತ್ಯೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಆನಿಗೋಳದಲ್ಲಿ ಗೌರವ್ವ ನೀಲಪ್ಪ ಕೆಂಗಾನೂರ (42) ಅವರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಮೈಕ್ರೊ ಫೈನಾನ್ಸ್ ಕಿರುಕುಳ ಕಾರಣ ಎಂದು ಹೇಳಲಾಗಿದೆ.

ಮಂಗಳವಾರ ರಾತ್ರಿ ಕೆರೆಗೆ ಹಾರಿದ್ದು, ಬುಧವಾರ ಶವ ಪತ್ತೆಯಾಗಿದೆ. ಆತ್ಮಹತ್ಯೆಗೆ ಮುನ್ನ ಮನೆಯ ಗೋಡೆ ಮೇಲೆ 'ಡೆತ್‌ನೋಟ್' ಬರೆದಿದ್ದಾರೆ.

'ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಬೈಲಹೊಂಗಲದ ಉಜ್ಜೀವನ ಸ್ಮಾಲ್ ಫೈನಾನ್ಸ್, ಭಾರತ ಸ್ವಮುಕ್ತಿ ಸಂಘ ಎಂಬ ಸಂಸ್ಥೆಗಳಿಂದ ₹5 ಲಕ್ಷ ಸಾಲ ಮಾಡಿದ್ದರು. ತೀರಿಸಲು ಕಿರುಕುಳ ನೀಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪತಿ ನೀಲಪ್ಪ ದೂರು ನೀಡಿದ್ದಾರೆ.


ಗೌರವ್ವ

'ಸಾವಿಗೆ ಸಾಲ ಕಾರಣ. ಆರೂಢ ತಂಗಿಯನ್ನು ಚೆನ್ನಾಗಿ ನೋಡಿಕೊ. ಸುಮಿತ್ರ, ಮಂಜವ್ವ, ಕಸ್ತೂರಿ ಮಕ್ಕಳು ನಿಮ್ಮ ಜವಾಬ್ದಾರಿ. ಆರೂಢನನ್ನು 10ನೇ ತರಗತಿ ಪಾಸ್ ಮಾಡಿಸು. ಇದು ನನ್ನ ಕೊನೆ ಆಸೆ' ಎಂದು ವಿಭೂತಿ ತುಣುಕಿನಿಂದ ಗೌರವ್ವ ಬರೆದಿದ್ದಾರೆ.

ಭಗವಾಧ್ವಜ: ಜಟಾಪಟಿ

ಉಡುಪಿ: 'ಭಗವಾಧ್ವಜ ಹಾರಿಸಿ ಶೋಭಾಯಾತ್ರೆಗೆ ಚಾಲನೆ ನೀಡಿರುವ ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ. ವಿರುದ್ಧ ಸರ್ಕಾರ ಕ್ರಮಕ್ಕೆ ಮುಂದಾದರೆ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕುತ್ತೇವೆ ಎಂದು ಬಿಜೆಪಿ ಜಿಲ್ಲಾ ಘಟಕ ಅಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಎಚ್ಚರಿಸಿದ್ದಾರೆ.

'ಈ ಬೆಳವಣಿಗೆಗಳಿಗೆ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಜಿಲ್ಲೆಯ ಬಗ್ಗೆ ತೋರಿದ ನಿರ್ಲಕ್ಷ್ಯ ಧೋರಣೆಯೇ ಕಾರಣ. ಜಿಲ್ಲಾ ಉಸ್ತುವಾರಿ ಸಚಿವರು ಅಥವಾ ರಾಜ್ಯ ಸರ್ಕಾರದ ಪ್ರತಿನಿಧಿಗಳು ಉಡುಪಿಯ ಪರ್ಯಾಯ ಶೋಭಾಯಾತ್ರೆಗೆ ಚಾಲನೆ ನೀಡುವುದು ಸಂಪ್ರದಾಯ. ಸಚಿವೆ ಈ ಬಾರಿಯ ಪರ್ಯಾಯ ಮಹೋತ್ಸವದ ಬಗ್ಗೆ ಒಂದೇ ಒಂದು ಪೂರ್ವ ಸಿದ್ಧತಾ ಸಭೆಯನ್ನೂ ನಡೆಸಲಿಲ್ಲ' ಎಂದು ಅವರು ಹೇಳಿದ್ದಾರೆ.

ನಿರ್ಲಿಪ್ತವಾಗಿರಬೇಕಿತ್ತು: 'ಪರ್ಯಾಯ ಮೆರಣಿಗೆಗೆ ಚಾಲನೆ ನೀಡುವಾಗ ಜಿಲ್ಲಾಧಿಕಾರಿ ಅವರು ನಿರ್ಲಿಪ್ತವಾಗಿರಬೇಕಿತ್ತು. ಜಿಲ್ಲಾಧಿಕಾರಿಯಿಂದ ಯಾವ ಕೆಲಸ ಮಾಡಿಸಬೇಕು ಎಂಬುದು ಶಾಸಕ ಯಶ್‌ಪಾಲ್ ಸುವರ್ಣ ಅವರಿಗೂ ತಿಳಿದಿರಬೇಕಿತ್ತು' ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು ಪ್ರತಿಕ್ರಿಯಿಸಿದ್ದಾರೆ.

'ಹಿಂದೆ ಸಿಡಿಮದ್ದು ಸಿಡಿಸಿ ಪರ್ಯಾಯ ಮೆರವಣಿಗೆಗೆ ಚಾಲನೆ ನೀಡಲಾಗುತ್ತಿತ್ತು. ಈ ಸಲ ಜಿಲ್ಲಾಧಿಕಾರಿ ಅವರು ಭಗವಾಧ್ವಜ ಹಾರಿಸಿ ಚಾಲನೆ ನೀಡಿದ್ದಾರೆ. ಈ ಬಾರಿ ಮುಸ್ಲಿಮರು ಪರ್ಯಾಯಕ್ಕೆ ಹೊರೆಕಾಣಿಕೆ ಕೊಡುತ್ತೇವೆ ಅಂದಾಗ ಶಾಸಕರು ನಿರಾಕರಿಸಿದ್ದರು. ಸರ್ಕಾರ ಪರ್ಯಾಯಕ್ಕಾಗಿ ₹6 ಕೋಟಿ ಬಿಡುಗಡೆ ಮಾಡಿದೆ' ಎಂದು ಅವರು ಹೇಳಿದ್ದಾರೆ.

ಲಕ್ಕುಂಡಿ: ನಾಗರ ಕಲ್ಲು, ಮೂಳೆ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನ ಸಮೀಪ ನಡೆದಿರುವ ಉತ್ಖನನದಲ್ಲಿ ಬುಧವಾರ ನಾಗರ ಕಲ್ಲು, ಮೂಳೆಯ ತುಂಡುಗಳು, ಮಡಿಕೆಯ ಚೂರುಗಳು, ಕೆಂಪು ಮಣಿ ಮತ್ತು ಟೆರ್ರಾಕೋಟಾದ ವೃತ್ತಾಕಾರದ ಬಿಲ್ಲೆ ಸಿಕ್ಕಿದೆ.

'ಐದು ದಿನಗಳಿಂದ ಮೂಳೆಗಳು ಸಿಕ್ಕಿರಲಿಲ್ಲ. ಬುಧವಾರ ಎರಡು ಬ್ಲಾಕ್‌ನಲ್ಲಿ ಸಿಕ್ಕಿವೆ. ತಜ್ಞರ ಪರಿಶೀಲನೆ ಬಳಿಕ ಮೂಳೆಗಳು ಯಾವ ಕಾಲಕ್ಕೆ ಸೇರಿದವು ಎಂಬುದು ಗೊತ್ತಾಗಲಿದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಅರಿವಳಿಕೆ ಮದ್ದು ನೀಡಿ ದಂಪತಿ ಕೊಲೆ

ಒಂದನೇ ಪುಟದಿಂದ...

ಸಾಲ ಕೊಡದ್ದಕ್ಕೆ ಕೊಲೆ: ಚಂದ್ರಪ್ಪ ಅವರಿಗೆ ಮೂವರು ಪುತ್ರರಿದ್ದು ಶಿವಮೊಗ್ಗ, ಭದ್ರಾವತಿಯಲ್ಲಿ ಪ್ರತ್ಯೇಕವಾಗಿ ವಾಸವಿದ್ದಾರೆ. ಆರೋಪಿ ಮಲ್ಲೇಶ ಆಗಾಗ ಚಂದ್ರಪ್ಪ ಅವರ ಮನೆಗೆ ಬಂದು ಹೋಗುತ್ತಿದ್ದ. ಶಿವಮೊಗ್ಗದ ಆಸ್ಪತ್ರೆ ಒಂದರಲ್ಲಿ ಕೆಲಸ ಮಾಡುತ್ತಿದ್ದ. ದುರ್ನಡತೆ ಕಾರಣಕ್ಕೆ ಈಚೆಗೆ ಆಸ್ಪತ್ರೆಯವರು ಕೆಲಸದಿಂದ ತೆಗೆದು ಹಾಕಿದ್ದರು.

'ವಿಪರೀತ ಸಾಲವಿದ್ದ ಮಲ್ಲೇಶ, ಚಂದ್ರಪ್ಪ ಅವರ ಬಳಿ ₹ 15 ಲಕ್ಷ ಸಾಲ ಕೇಳಿದ್ದ. ಅವರು ಹಣ ಕೊಟ್ಟಿರಲಿಲ್ಲ. ಇದರಿಂದ ಆಕ್ರೋಶಗೊಂಡಿದ್ದ ಆರೋಪಿ ಕೊಲೆ ಮಾಡಿ ಹಣ ದೋಚುವ ಸಂಚು ರೂಪಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

> ಆರೋಪಿ ದೋಚಿದ್ದ ಚಿನ್ನಾಭರಣ ಎಷ್ಟು? ಆಯುರ್ವೇದ ವೈದ್ಯನಾದ ಆತನಿಗೆ ಅರಿವಳಿಕೆ ಮದ್ದು ಕೊಟ್ಟವರು ಯಾರು ಎಂಬ ಬಗ್ಗೆ ತನಿಖೆ ನಡೆದಿದೆ
> **ಬಿ.ನಿಖಿಲ್**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಿವಮೊಗ್ಗ

ದಂಪತಿ ಮಂಡಿ ನೋವಿನಿಂದ ಬಳಲುತ್ತಿದ್ದರು. ನೋವು ನಿವಾರಣೆಗೆ ಚಿಕಿತ್ಸೆ ಕೊಡುತ್ತಿದ್ದ ಮಲ್ಲೇಶ ಸೋಮವಾರ ಮಧ್ಯಾಹ್ನ ಚುಚ್ಚುಮದ್ದು ಕೊಡಲು ಮನೆಗೆ ಬಂದಿದ್ದ. ಇಬ್ಬರಿಗೂ ಅರಿವಳಿಕೆ ಮದ್ದನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಿದ್ದ. ರಕ್ತದೊತ್ತಡ ಕುಸಿದು ದಂಪತಿ ಮೃತಪಟ್ಟಿದ್ದರು. ಮನೆಯ ಕಪಾಟಿನಲ್ಲಿದ್ದ ಚಿನ್ನಾಭರಣ, ನಗದು ದೋಚಿ ಆರೋಪಿ ಪರಾರಿಯಾಗಿದ್ದ. ಚಿನ್ನಾಭರಣ ಅಡವಿಟ್ಟು, ಬಂದ ಹಣದಲ್ಲಿ ಸಾಲ ತೀರಿಸಿದ್ದ ಆರೋಪಿ, ಉಳಿದ ಮೊತ್ತವನ್ನು ಬ್ಯಾಂಕ್‌ನ ತನ್ನ ಖಾತೆಗೆ ಜಮೆಮಾಡಿದ್ದ ಎಂದು ತಿಳಿದುಬಂದಿದೆ.

'ಮನೆಗೆ ಯಾರೂ ಪ್ರವೇಶಿಸಿರಲಿಲ್ಲ. ದಂಪತಿಯ ವೈದ್ಯಕೀಯ ವರದಿ ಕಡತ ಟೇಬಲ್ ಮೇಲಿತ್ತು. ಅದೂ ಸೇರಿ ಸಾಕ್ಷ್ಯಗಳನ್ನು ಆಧರಿಸಿ ತನಿಖೆ ನಡೆಸಿದ್ದು, ಮರಣೋತ್ತರ ಪರೀಕ್ಷೆ ವರದಿ ಬರುವ ಮುನ್ನವೇ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ನಿಖಿಲ್ ಅವರು ತಿಳಿಸಿದ್ದಾರೆ.

'ಸಂವಿಧಾನದಿಂದ ಕ್ರಾಂತಿಕಾರಿ ಪ್ರಗತಿ'

ಸಂವಿಧಾನವೇ ಬೆಳಕು

Curated by
DH DECCAN HERALD | ಪ್ರಜಾವಾಣಿ


ಸಂವಾದದಲ್ಲಿ ಶರಣಪ್ಪ ಎಸ್‌.ಡಿ., ಶ್ರೀನಿವಾಸ ನವಲೆ, 'ಪ್ರಜಾವಾಣಿ' ಉಪಸಂಪಾದಕ ಪ್ರಭು ಬ.ಅಡವಿಹಾಳ, ನರೇಂದ್ರ ಬಡಶೇಷಿ, ಅಪ್ಪಗೆರೆ ಸೋಮಶೇಖರ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

● ಬಷೀರಅಹ್ಮದ್ ನಗಾರಿ

ಕಲಬುರಗಿ: 'ಭಾರತದ ಸಂವಿಧಾನ ಬರೀ ಕಾನೂನು ಗ್ರಂಥವಲ್ಲ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಕಾರ್ಯವ್ಯಾಪ್ತಿಗಳನ್ನಷ್ಟೇ ಹೇಳಲ್ಲ. ನಿತ್ಯದ ಕ್ರಮಕ್ಕಾಗಿ ಶ್ರೀಸಾಮಾನ್ಯರಿಗಾಗಿ ಮಾಡಿದ ಸರ್ವೋಚ್ಚ ಕಾನೂನು. ಸಂವಿಧಾನ ದೇಶದ ಆಡಳಿತದ ಬೆನ್ನೆಲುಬು. ಶರೀರಕ್ಕೆ ತಟ್ಟಿದ ರೋಗ ವೈದ್ಯ ಗುಣಪಡಿಸುವಂತೆ ಸಮಾಜಕ್ಕೆ ಅಂಟಿದ ರೋಗಗಳಿಗೆ ಪರಿಹಾರ ಹುಡುಕುವುದು ಸಂವಿಧಾನದ ಆಶಯ...'

'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ 'ಸಂವಿಧಾನವೇ ಬೆಳಕು' ಸಂವಾದದಲ್ಲಿ 'ಸಂವಿಧಾನ'ದ ಕುರಿತು ಗಣ್ಯರು ಬಿಚ್ಚಿಟ್ಟ ಹೊಳಹುಗಳಿವು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ ನವಲೆ, ಪೊಲೀಸ್ ಕಮಿಷನರ್ ಶರಣಪ್ಪ ಎಸ್‌.ಡಿ, ನಿವೃತ್ತ ಪ್ರಾಚಾರ್ಯ ನರೇಂದ್ರ ಬಡಶೇಷಿ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ ಅವರು ಸಂವಿಧಾನದಡಿ ದೇಶದ ಜನರಿಗೆ ಸಂದಿರುವ 'ಮೀಸಲಾತಿ', 'ಸಾಮಾಜಿಕ ನ್ಯಾಯ' ಹಾಗೂ 'ಶೋಷಿತರ ಹಕ್ಕು'ಗಳ ಬಗೆಗೆ ಅರ್ಥಪೂರ್ಣ ಅಭಿಪ್ರಾಯಗಳನ್ನು ಮಂಡಿಸಿದರು.

ಸಾಮಾಜಿಕ ನ್ಯಾಯ: '1950ರ ಜನವರಿ 26ರಂದು ಸಂವಿಧಾನ ಜಾರಿಗೆ ಬಂತು. ಅಂದಿನಿಂದ ಇಂದಿನವರೆಗೆ ಭಾರತವು ಅಗಣಿತ ಪ್ರಗತಿ ಕಂಡಿದೆ. ಕ್ರಾಂತಿಕಾರಿ ಬದಲಾವಣೆಗಳು, ಸುಧಾರಣೆಗಳಿಗೆ ಸಾಕ್ಷಿಯಾಗಿದೆ. ಇದೆಲ್ಲಕ್ಕೂ ಸಂವಿಧಾನವೇ ಮೂಲ ಕಾರಣ' ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

'ಭೂಸುಧಾರಣೆ ಕಾಯ್ದೆ, ಕಾರ್ಮಿಕರಿಗೆ ಬೋನಸ್, ಮಹಿಳೆಯರಿಗೆ ಮಾತೃತ್ವ ರಜೆಯಂಥ ಕಾನೂನುಗಳು ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಫಲಗಳು. ಇನ್ನೂ ಹಲವು ಕ್ಷೇತ್ರಗಳಲ್ಲಿ ಈ ಪರಿಕಲ್ಪನೆ ಅನುಷ್ಠಾನ ಆಗಬೇಕಿದೆ' ಎಂದರು.

ಪ್ರಜಾವಾಣಿ ನೋಡಿಯೊ
ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

ಶರಣಪ್ಪ ಎಸ್‌.ಡಿ. ಮಾತನಾಡಿ, 'ಸಂವಿಧಾನದ ಪೀಠಿಕೆಯೇ ಹೇಳುವಂತೆ ಕಾನೂನಿನಡಿ ಎಲ್ಲರೂ ಸಮಾನರು. ಸಮಾನತೆಯ ಕಾಯ್ದೆಗಳು ಸಂವಿಧಾನದಡಿ ಜನರಿಗೆ ಸಿಕ್ಕ ಅಸ್ತ್ರಗಳು' ಎಂದು ಬಣ್ಣಿಸಿದರು.

'ಸಾಮಾಜಿಕ ನ್ಯಾಯವು ಬಡತನ ನಿರ್ಮೂಲನೆ ಕಾನೂನಲ್ಲ. ಅದು ಪ್ರಾತಿನಿಧ್ಯ ಹೇಳುವಂಥದ್ದು. ಸಂವಿಧಾನ ಜಾರಿಗೂ ಮುನ್ನ ಬಹುಸಂಖ್ಯಾತರಿಗೆ ಆಸ್ತಿ ಹಕ್ಕು, ಅಕ್ಷರ ಕಲಿಕೆ, ಅಧಿಕಾರದ ಅವಕಾಶಗಳೇ ಇರಲಿಲ್ಲ. ಶಿಕ್ಷಣ ಒಂದು ಸಮುದಾಯಕ್ಕೆ ಸೀಮಿತವಾಗಿತ್ತು. ಈ ಅರಿವಿದ್ದ ಡಾ.ಅಂಬೇಡ್ಕರ್ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ ಅಡಕಗೊಳಿಸಿದರು' ಎಂದು ಅಪ್ಪಗೆರೆ ಸೋಮಶೇಖರ ಪ್ರತಿಪಾದಿಸಿದರು.

ಶೋಷಿತರ ಹಕ್ಕು: 'ಶೋಷಣೆ ಬಹುರೂಪಿ. ಅದರಲ್ಲಿ ಮಾನಸಿಕ, ದೈಹಿಕ, ಸಾಮಾಜಿಕ, ಸಾಂಸ್ಕೃತಿಕ ಎಂದೆಲ್ಲ ಹಲವು ಬಗೆ. ಮಹಿಳೆಯರು, ಮಕ್ಕಳು, ಅನಕ್ಷರಸ್ಥರೇ ಹೆಚ್ಚಾಗಿ ಶೋಷಣೆಗೆ ತುತ್ತಾಗುತ್ತಾರೆ. ಹಿಂದೆಲ್ಲ ಶೋಷಿತರು ತಮ್ಮ ಹಕ್ಕಿಗಾಗಿ ತಾವೇ ಮುಂದೆ ಬರಬೇಕಿತ್ತು. ಆದರೆ, ಇಂದು ಸರ್ಕಾರಿ ಸಂಸ್ಥೆಗಳೇ ಶೋಷಿತರ ಬಳಿಗೆ ಹೋಗುತ್ತಿವೆ. ಅವರು ನೋವು ಹೇಳಿಕೊಂಡರೆ ಅವರಿಗೆ ರಕ್ಷಣೆ, ಹಕ್ಕು ಕೊಡಿಸಲು ಸಾಧ್ಯವಾಗುತ್ತದೆ' ಎಂದರು ಶ್ರೀನಿವಾಸ ನವಲೆ.

ನರೇಂದ್ರ ಬಡಶೇಷಿ ಅವರು, 'ಶೋಷಿತರ ಹಕ್ಕುಗಳು ಸಂವಿಧಾನ ಶೋಷಿತರಿಗೆ ನೀಡಿದ ಧ್ವನಿ. ಪ್ರಶ್ನಿಸಲು ದೊರೆತ ಹಕ್ಕು. ನಮ್ಮ ವಿಚಾರ, ಧ್ವನಿಗೆ ಮಾನ್ಯತೆ ಸಿಗುತ್ತಿದೆ. ಅದು ಸಂವಿಧಾನದ ಶ್ರೇಷ್ಠ ಕೊಡುಗೆ' ಎಂದು ಬಣ್ಣಿಸಿದರು.

'ಸಾಮಾಜಿಕ ಶೋಷಣೆ, ಜಾತಿ ವ್ಯವಸ್ಥೆ ವಿಕಾರ ಸ್ವರೂಪ ಪಡೆದಿವೆ. ಶೋಷಿತರ ಹಕ್ಕುಗಳು ಸಂಪೂರ್ಣ ಕಾರ್ಯಗತಗೊಂಡಿಲ್ಲ. ಎಸ್‌ಸಿಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸ್ಥಿತಿ ಏನಿದೆ? ನೊಂದವರಿಗೆಲ್ಲ ನ್ಯಾಯ ಸಿಕ್ಕಿದೆಯೇ? ಸಂವಿಧಾನ ಅನುಷ್ಠಾನದಲ್ಲಿ ಎಲ್ಲಿ ಎಡವುತ್ತಿದ್ದೇವೆ ಎಂಬುದರ ಆತ್ಮಾವಲೋಕನ ಅಗತ್ಯ' ಎಂದು ಅಪ್ಪಗೆರೆ ಸೋಮಶೇಖರ ಅಭಿಪ್ರಾಯಪಟ್ಟರು.

'ಶೋಷಿತರಿಗೆ ಸಂವಿಧಾನ ಹಲವು ಬಗೆಯಲ್ಲಿ ದಾರಿದೀಪ. ಒಂದೆಡೆ ಶೋಷಿತರಿಗೆ ಸಂವಿಧಾನವು ಅವರ ಹಕ್ಕುಗಳನ್ನು ಅರ್ಥೈಸುತ್ತದೆ; ಮತ್ತೊಂದೆಡೆ ಜೈಲಿನ ಕೈದಿಗಳಿಗೂ ಅದು ಕೆಲ ಹಕ್ಕುಗಳ ರಕ್ಷಣೆ ನೀಡುತ್ತದೆ' ಎಂದರು ಕಮಿಷನರ್ ಶರಣಪ್ಪ ಎಸ್‌.ಡಿ.

'ಸಮಾನ ಅವಕಾಶ ಸೃಷ್ಟಿಗೆ ಮೀಸಲಾತಿ ಅಗತ್ಯ'

'ದೇಶದಲ್ಲಿ ಮೀಸಲಾತಿ ಪ್ರಖರವಾಗಿ ಪ್ರತಿಪಾದಿಸಿದ್ದು ಶಾಹು ಮಹಾರಾಜ. ಸಾಮಾಜಿಕ ಹಿಂದುಳಿವಿಕೆ, ಆರ್ಥಿಕ ಹಿಂದುಳಿವಿಕೆ ಆಧಾರದಲ್ಲಿ ಮೀಸಲಾತಿ (ಇಡಬ್ಲ್ಯುಎಸ್) ಕಲ್ಪಿಸಲಾಗಿದೆ. ಸಮಾನ ಅವಕಾಶಗಳ ಸೃಷ್ಟಿಗೆ ಅದು ಅಗತ್ಯ' ಎಂದು ಶ್ರೀನಿವಾಸ ನವಲೆ ಪ್ರತಿಪಾದಿಸಿದರು.

'ಯುವ ತಲೆಮಾರು ಮೀಸಲಾತಿ ಜಾರಿಯಾದ ಹಿನ್ನೆಲೆಯನ್ನು ಗ್ರಹಿಸುತ್ತಿಲ್ಲ. ಹೀಗಾಗಿ ಮೀಸಲಾತಿ ವ್ಯವಸ್ಥೆ ಟೀಕಿಸುತ್ತಿದೆ. ಅವರಿಗೆ ಸಮಾಜದಲ್ಲಿದ್ದ ಜಾತಿ ವ್ಯವಸ್ಥೆಯ ಕ್ರೂರತೆಯನ್ನು ಮನಮುಟ್ಟುವಂತೆ ಹೇಳಬೇಕಿದೆ' ಎಂದರು. 'ಸಮಾನತೆ ಸಾಧಿಸಲು ಮೀಸಲಾತಿಯೇ ಮೆಟ್ಟಿಲು. ದೇಶದಲ್ಲಿ ಪುರುಷ ಪ್ರಧಾನ ಸಮಾಜವಿದೆ. ಜನಸಂಖ್ಯೆಯ ಶೇ49ರಷ್ಟಿರುವ ಸ್ತ್ರೀಯರಿಗೆ ಮೀಸಲಾತಿ ಅತ್ಯಗತ್ಯ' ಎನ್ನುತ್ತಾರೆ ಶರಣಪ್ಪ ಎಸ್‌.ಡಿ.

'ಮೀಸಲಾತಿ ದಲಿತರಿಗಷ್ಟೇ ಎಂಬ ಮೌಢ್ಯ ಇಂದಿಗೂ ದೇಶದಲ್ಲಿದೆ. ಹಿಂದೆಲ್ಲ ಭಾರತ ಅನಕ್ಷರತೆಯಿಂದ ಬಳಲಿತ್ತು. ಈಗ ಸಂವಿಧಾನದ ಜ್ಞಾನವಿಲ್ಲದೇ ಬಳಲುತ್ತಿದೆ. ಎಲ್ಲರಿಗೂ ಸಂವಿಧಾನವನ್ನು ಕಲಿಸಬೇಕಿದೆ' ಎಂದು ಅಪ್ಪಗೆರೆ ಸೋಮಶೇಖರ ಪ್ರತಿಪಾದಿಸಿದರು.

ಕ್ಷಮೆ ಕೋರಿದ ಶ್ರೀರಾಮುಲು

ಬಳ್ಳಾರಿ: 'ನಗರದಲ್ಲಿ ನಡೆಯುತ್ತಿರುವ ಡ್ರಗ್ಸ್ ದಂಧೆಯ ಪರಿಣಾಮಗಳನ್ನು ತಿಳಿಯಪಡಿಸುವ ಭರದಲ್ಲಿ ಪೋಕ್ಸೊ ಸಂತ್ರಸ್ತೆಯ ಹೆಸರು ಬಹಿರಂಗಪಡಿಸಬೇಕಾಯಿತು. ಇದಕ್ಕಾಗಿ ನಾನು ಕ್ಷಮೆ ಕೋರುವೆ' ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದರು.

'ಬಳ್ಳಾರಿಯಲ್ಲಿ ಅಕ್ರಮಗಳು, ದಂಧೆಗಳು, ಗಾಂಜಾ, ಡ್ರಗ್ಸ್ ಮಾರಾಟ ಎಗ್ಗಿಲ್ಲದೇ ನಡೆದಿವೆ. ಇದನ್ನೇ ಜನವರಿ 17ರ ಸಮಾವೇಶದಲ್ಲಿ ಹೇಳಿದ್ದೆ. ಆಗ ಅನಿವಾರ್ಯವಾಗಿ ಅತ್ಯಾಚಾರ ಸಂತ್ರಸ್ತೆ ಕುರಿತು ಮಾತನಾಡಬೇಕಾಯಿತು. ಇದರಿಂದ ಬಾಲಕಿಗೆ, ಆಕೆಯ ತಂದೆ ತಾಯಿಗೆ ನೋವಾಗಿದ್ದರೆ ಕ್ಷಮೆ ಕೋರುವೆ. ನ್ಯಾಯ ಒದಗಿಸಿಕೊಡುವಲ್ಲಿ ನಾನು ಆ ಕುಟುಂಬದ ಜೊತೆ ನಿಲ್ಲುವೆ. ಸಂತ್ರಸ್ತೆಯೂ ನನ್ನ ಮಗಳಂತೆ. ಈ ವಿಷಯದಲ್ಲಿ ಕಾನೂನು ಕ್ರಮಗಳನ್ನು ಎದುರಿಸುತ್ತೇನೆ' ಎಂದು ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜನವರಿ 1ರಂದು ನಡೆದ ಘರ್ಷಣೆಗೆ ಸಂಬಂಧಿಸಿದಂತೆ ಸಾಕ್ಷಿಗಳನ್ನು ಬಹಿರಂಗಪಡಿಸಿದ್ದೇವೆ. ಹೋರಾಟ ಮುಂದುವರಿಸುತ್ತೇವೆ. ದಾಳಿ ಖಂಡಿಸಿ ಪಾದಯಾತ್ರೆ ನಡೆಸಲು ಆರಂಭದಲ್ಲಿ ಒಪ್ಪಿಗೆ ಸಿಕ್ಕಿತ್ತು. ಆದರೆ, ಮುಂದೂಡುವಂತೆ ಬಳಿಕ ಸೂಚನೆ ಬಂತು. ಮುಂದಿನ ದಿನಗಳಲ್ಲಿ ಈ ಕುರಿತು ಪಕ್ಷ ತೀರ್ಮಾನ ಮಾಡಲಿದೆ' ಎಂದು ಶ್ರೀರಾಮುಲು ತಿಳಿಸಿದರು.

ಎಸ್‌ಐಆರ್ ರದ್ದತಿಗೆ ಆಗ್ರಹ

ಎಸ್‌ಡಿಪಿಐ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ತಕ್ಷಣ ರದ್ದುಪಡಿಸಬೇಕು, ಕಾನೂನುಬಾಹಿರ ಚಟುವಟಿಕೆ (ಪ್ರತಿಬಂಧ) ಕಾಯ್ದೆಯನ್ನು ಆಮೂಲಾಗ್ರ ಬದಲಿಸಬೇಕು ಅಥವಾ ರದ್ದುಪಡಿಸಬೇಕು, ಅಲ್ಪಸಂಖ್ಯಾತರಿಗೆ ಉದ್ಯೋಗ ಅವಕಾಶ ಸೃಷ್ಟಿಸಬೇಕು ಎಂದು ಎಸ್‌ಡಿಪಿಐ ರಾಷ್ಟ್ರೀಯ ಪ್ರತಿನಿಧಿ ಮಂಡಳಿ ಸಭೆ ಆಗ್ರಹಿಸಿದೆ.

ಇಲ್ಲಿ ಎರಡು ದಿನ ನಡೆದ ಸಮಾವೇಶದ ನಿರ್ಣಯಗಳ ಬಗ್ಗೆ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ರಾಷ್ಟ್ರೀಯ ಉಪಾಧ್ಯಕ್ಷ ಮೊಹಮ್ಮದ್ ಶಫಿ, ಯುಎಪಿಎ ಜಾರಿ ಮೂಲಕ ಪ್ರಜಾಪ್ರಭುತ್ವವನ್ನು ಸಂಕಷ್ಟಕ್ಕೆ ಸಿಲುಕಿಸಲಾಗಿದೆ. ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷ ಎಂ.ಕೆ ಫೈಜಿ ಅವರ ಮೇಲೆ ವೃಥಾ ಆರೋಪ ಹೊರಿಸಿ ಇ.ಡಿ ಮೂಲಕ ಬಂಧಿಸಲಾಗಿದೆ. ಅವರನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಸಮಗ್ರ ಜಾತಿ ಸಮೀಕ್ಷೆ ನಡೆಸಬೇಕು. ಅದರ ಅಧಾರದಲ್ಲೇ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿ ಜಾರಿ ಮಾಡಬೇಕು, ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು, ಪ್ರಾರ್ಥನಾ ಸ್ಥಳಗಳ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಲಾಗಿದೆ ಎಂದು ತಿಳಿಸಿದರು.

ಪ್ಯಾಲೆಸ್ಟೀನ್–ಇಸ್ರೇಲ್ ಸಂಘರ್ಷಕ್ಕೆ ಸಂಬಂಧಿಸಿ ಆ ಭಾಗದಲ್ಲಿ ಶಾಂತಿ ನೆಲೆಸಲು ಭಾರತ ತನ್ನಿಂದಾದ ಪ್ರಯತ್ನ ಮಾಡಬೇಕು, ಅಲಿಪ್ತ ವಿದೇಶಾಂಗ ನೀತಿಯನ್ನು ಅನುಸರಿಸಬೇಕು ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.


ಮಂಗಳೂರಿನಲ್ಲಿ ಬುಧವಾರ ಸಂಜೆ ಎಸ್‌ಡಿಪಿಐ ಮೆರವಣಿಗೆ ನಡೆಯಿತು ಪ್ರಜಾವಾಣಿ ಚಿತ್ರ

ಮೊಯ್ದೀನ್ ಕುಟ್ಟಿ ಅಧ್ಯಕ್ಷ

3 ವರ್ಷದ ಅವಧಿಗೆ ಎಸ್‌ಡಿಪಿಐ ರಾಷ್ಟ್ರೀಯ ಅಧ್ಯಕ್ಷರಾಗಿ ಮೊಯ್ದೀನ್ ಕುಟ್ಟಿ ಆಯ್ಕೆಯಾಗಿದ್ದಾರೆ. ಉಳಿದಂತೆ ಉಪಾಧ್ಯಕ್ಷರಾಗಿ ಮೊಹಮ್ಮದ್ ಶಫೀ, ಸಿತಾರಾಮ್ ಖತಿಕ್ ಮತ್ತು ಶೇಖ್ ಮಹಮ್ಮದ್. ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಅಸ್ರಫ್, ಮಹಮ್ಮದ್ ರಿಯಾಜ್ ಫರಂಗಿಪೇಟೆ, ಕೋಶಾಧಿಕಾರಿಯಾಗಿ ಅಬ್ದುಲ್ ಸತ್ತಾರ್, 7 ಮಂದಿ ಕಾರ್ಯದರ್ಶಿಗಳು, 28 ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ಅಭಿನಂದನಾ ಸಮಾರಂಭದಲ್ಲಿ ರಾಜ್ಯ ಸರ್ಕಾರಕ್ಕೆ ಅಧ್ಯಕ್ಷೆ ಸುನಂದಮ್ಮ ಪ್ರಶ್ನೆ

'ಕಸಾಪಕ್ಕೆ ಆದ್ಯತೆ, ಲೇಖಕಿಯರ ಸಂಘಕ್ಕೆ ಏಕಿಲ್ಲ?'

ಪ್ರಜಾವಾಣಿ ವಾರ್ತೆ

ಮೈಸೂರು: 'ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡುವಷ್ಟು ಆದ್ಯತೆಯನ್ನು ರಾಜ್ಯ ಸರ್ಕಾರ ಕರ್ನಾಟಕ ಲೇಖಕಿಯರ ಸಂಘಕ್ಕೆ ಕೊಡುತ್ತಿಲ್ಲವೇಕೆ' ಎಂದು ಸಂಘದ ಅಧ್ಯಕ್ಷೆ ಆರ್‌.ಸುನಂದಮ್ಮ ಇಲ್ಲಿ ಪ್ರಶ್ನಿಸಿದರು.

ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಕನ್ನಡ ಲೇಖಕಿಯರ ಟ್ರಸ್ಟ್, ಕನ್ನಡ ಲೇಖಕಿಯರ ಸಂಘ ಹಾಗೂ ಕಸಾಪ ಜಿಲ್ಲಾ ಘಟಕಗಳ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಲೇಖಕಿಯರ ಸಂಘವೀಗ ಚಿಕ್ಕ ಜಾಗದಲ್ಲಿ ಕೆಲಸ ಮಾಡುತ್ತಿದೆ. ಕಸಾಪ ಜಿಲ್ಲಾ ಘಟಕಕ್ಕೆ ಇರುವಷ್ಟೂ ಸ್ಥಳ ಇಲ್ಲ. ಜಾಗ, ಅನುದಾನ ಕೋರಿ ಸರ್ಕಾರಕ್ಕೆ ಹಿಂದಿನಿಂದಲೂ ಪ್ರಸ್ತಾವ ಸಲ್ಲಿಸಲಾಗಿದೆ. ಸ್ಪಂದನೆ ದೊರೆತಿಲ್ಲ. ಮುಂದಿನ ದಿನಗಳಲ್ಲಿ ಗಟ್ಟಿ ಧ್ವನಿಯಲ್ಲಿ ಹಕ್ಕೊತ್ತಾಯಗಳನ್ನು ಮಂಡಿಸುತ್ತೇವೆ. ಲೇಖಕಿಯರು ದನಿಗೂಡಿಸಬೇಕು' ಎಂದರು.


ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಕನ್ನಡ ಲೇಖಕಿಯರ ಟ್ರಸ್ಟ್ ವತಿಯಿಂದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್‌. ಸುನಂದಮ್ಮ–ಗಣೇಶ್ ದಂಪತಿಯನ್ನು ಅಭಿನಂದಿಸಲಾಯಿತು ಪ್ರಜಾವಾಣಿ ಚಿತ್ರ

ಸಮಾನ ಅವಕಾಶ ಕೊಡಿ: 'ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಗೋಷ್ಠಿಯಷ್ಟೇ ಏಕೆ? ಎಲ್ಲ ಗೋಷ್ಠಿಗಳಲ್ಲೂ ಲೇಖಕಿಯರಿಗೆ ಸಮಾನ ಅವಕಾಶ ಸಿಗಬೇಕು ಲೇಖಕಿಯರಿಂದ ಸಾಕಷ್ಟು ಕೃತಿಗಳು ಬಂದಿವೆ. ನಮಗೇಕೆ 'ಪಂಪ' ಪ್ರಶಸ್ತಿ ಕೊಟ್ಟಿಲ್ಲ' ಎಂದು ಪ್ರಶ್ನಿಸಿದರು.

6 ತಿಂಗಳೊಳಗೆ ಬೈಲಾ: 'ಆರು ತಿಂಗಳಲ್ಲಿ ಕಾರ್ಯಕ್ರಮಗಳ ಜೊತೆಗೆ ಬೈಲಾ (ಉಪವಿಧಿ) ಸಿದ್ಧಪಡಿಸಲಾಗುವುದು. ಮಹಿಳಾ ಪರ ಹೋರಾಟವನ್ನು ಬೆಂಬಲಿಸಲಾಗುವುದು' ಎಂದರು.

'ಮಹಿಳಾ ಸಾಹಿತ್ಯವನ್ನು ಅಡುಗೆ ಮನೆ ಸಾಹಿತ್ಯವೆಂದು ಬಿಂಬಿಸಲಾಗಿತ್ತು. ಪುರುಷರಿಗೆ ಅದನ್ನು ಓದುವ ಮನಸ್ಸು ಇರಲಿಲ್ಲ. ಓದಲಾಗದಂತೆ ರಾಜಕಾರಣ ನಿರ್ಮಿಸಲಾಗಿತ್ತು. 1990ರ ದಶಕದ ನಂತರ ಹೆಣ್ಣುಮಕ್ಕಳೇ ವಿಮರ್ಶೆ ಮಾಡುತ್ತಿದ್ದಾರೆ. ಈಗ ಯಾರೂ ಮಹಿಳಾ ಸಾಹಿತ್ಯದ ಬಗ್ಗೆ ಹಗುರವಾಗಿ ಮಾತನಾಡಲಾಗದು. ನಾವು ಬಿಡುವುದೂ ಇಲ್ಲ' ಎಂದರು.

ಜಿಲ್ಲಾ ಹಂತಕ್ಕೆ ತರಬೇಕು: ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಕನ್ನಡ ಲೇಖಕಿಯರ ಟ್ರಸ್ಟ್ ಉಪಾಧ್ಯಕ್ಷೆ ಮಂಜುಳಾ ಮಾನಸ, 'ಸಂಘದ ರಥವನ್ನು ಬೆಂಗಳೂರಿನಿಂದ ಜಿಲ್ಲಾಮಟ್ಟಕ್ಕೆ ಎಳೆದು ತರಬೇಕು. ಹೊಸ ತಲೆಮಾರಿನ ಲೇಖಕಿಯರನ್ನು ಪ್ರೋತ್ಸಾಹಿಸಬೇಕು' ಎಂದು ಹೇಳಿದರು.

ಲೇಖಕಿ ಎಂ.ಎಸ್. ವೇದಾ ಅಭಿನಂದನಾ ಭಾಷಣ ಮಾಡಿದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆ ಉಷಾ ನರಸಿಂಹನ್, ಕನ್ನಡ ಲೇಖಕಿಯರ ಟ್ರಸ್ಟ್ ಕಾರ್ಯದರ್ಶಿಗಳಾದ ಮೀನಾ ಮೈಸೂರು ಹಾಗೂ ಹೇಮಾ ನಂದೀಶ್ ಪಾಲ್ಗೊಂಡಿದ್ದರು.

ಚಿರತೆ ದಾಳಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ತಾಲ್ಲೂಕಿನ ಮಲೆ ಮಹದೇಶ್ವರ ದೇವಸ್ಥಾನಕ್ಕೆ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ಭಕ್ತರೊಬ್ಬರು ಚಿರತೆ ದಾಳಿಯಿಂದ ಮೃತಪಟ್ಟಿದ್ದಾರೆ. ಮಂಡ್ಯ ಜಿಲ್ಲೆಯ ಚೀರನಹಳ್ಳಿಯ ಪ್ರವೀಣ್ (33) ಮೃತರು.

ಬುಧವಾರ ಬೆಳಗಿನ ಜಾವ ಗ್ರಾಮದ ಆರು ಮಂದಿ ತಾಳುಬೆಟ್ಟದಿಂದ ಸುಮಾರು 7 ಕಿ.ಮೀ. ದೂರವಿರುವ ಮಲೆ ಮಹದೇಶ್ವರ ಸನ್ನಿಧಿಗೆ ಪಾದಯಾತ್ರೆಯಲ್ಲಿ ಹೋಗುವಾಗ 'ರಂಗಸ್ವಾಮಿ ಒಡ್ಡು' ಸಮೀಪದಲ್ಲಿ ಚಿರತೆ ದಾಳಿ ನಡೆಸಿದೆ. ಕುತ್ತಿಗೆ ಹಾಗೂ ಮರ್ಮಾಂಗವನ್ನು ಕಚ್ಚಿದ್ದು, ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟರು. ಜೊತೆಗಿದ್ದವರು ಓಡಿ ಪಾರಾಗಿದ್ದಾರೆ.

ಮಲೆ ಮಹದೇಶ್ವರ ವನ್ಯಧಾಮದ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಚಿರತೆಯನ್ನು ಕಾಡಿಗಟ್ಟಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು.


ಪ್ರವೀಣ್

ಜಾತ್ರಾ ಮಹೋತ್ಸವ ಹಾಗೂ ಅಮಾವಾಸ್ಯೆ ದಿನಗಳಲ್ಲಿ ಸಾವಿರಾರು ಭಕ್ತರು ಪಾದಯಾತ್ರೆಯಲ್ಲಿ ಬಂದು ಹರಕೆ ಸಲ್ಲಿಸುವುದು ರೂಢಿಯಲ್ಲಿದೆ. ಈಗ, ಚಿರತೆ ದಾಳಿಯಿಂದ ಭಕ್ತರು ಆತಂಕಗೊಂಡಿದ್ದು, ಸೂಕ್ತ ಭದ್ರತೆ ಒದಗಿಸುವಂತೆ ಆಗ್ರಹಿಸಿದ್ದಾರೆ.

ಪಾದಯಾತ್ರೆಗೆ ನಿರ್ಬಂಧ: ಘಟನೆ ಹಿನ್ನಲೆಯಲ್ಲಿ ತಾಳುಬೆಟ್ಟದಿಂದ ದೇಗುಲದವರೆಗೆ ಪಾದಯಾತ್ರೆ, ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ಜ.24ರವರೆಗೆ ನಿರ್ಬಂಧಿಸಿ ಜಿಲ್ಲಾಡಳಿತ ಆದೇಶಿಸಿದೆ.

'ಸುರಕ್ಷತೆಯ ದೃಷ್ಟಿಯಿಂದ ಭಕ್ತರು ಬಸ್ ಹಾಗೂ ನಾಲ್ಕುಚಕ್ರದ ವಾಹನಗಳಲ್ಲಿ ಬೆಟ್ಟಕ್ಕೆ ತೆರಳಬೇಕು' ಎಂದು ಜಿಲ್ಲಾಧಿಕಾರಿ ಶ್ರೀರೂಪಾ ಅವರು ಸಲಹೆ ನೀಡಿದ್ದಾರೆ.

ನಿಧನ ವಾರ್ತೆ

ಡಿ.ವೈ.ಉಪ್ಪಾರ

ವಿಜಯಪುರ: ಉದ್ಯಮಿ, ಗುತ್ತಿಗೆದಾರ ಡಿ.ವೈ.ಉಪ್ಪಾರ (81) ಬುಧವಾರ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಇಬ್ಬರು ಪತ್ನಿಯರು, ನಾಲ್ವರು ಪುತ್ರಿಯರು, ಮೂವರು ಪುತ್ರರಿದ್ದಾರೆ. ಸಿಂದಗಿ ತಾಲ್ಲೂಕಿನ ಯಂಕಂಚಿಯಲ್ಲಿ ಗುರುವಾರ (ಜ.22) ಸಂಜೆ ಅಂತ್ಯಕ್ರಿಯೆ ನಡೆಯಲಿದೆ.


ಡಿ.ವೈ.ಉಪ್ಪಾರ

ಬಸವನಬಾಗೇವಾಡಿ ತಾಲ್ಲೂಕು ಯಾಳವಾರ ಗ್ರಾಮದ ಅವರು, ಗುತ್ತಿಗೆ ಕಾಮಗಾರಿಗಳ ಕ್ಷೇತ್ರದಲ್ಲಿ ತೊಡಗಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆ ಸೇರಿ ವಿವಿಧ ಕಾಮಗಾರಿ ಮಾಡಿದ್ದರು.

'ಡಿ.ವೈ.ಉಪ್ಪಾರ ಎಜುಕೇಷನಲ್ ಅಂಡ್ ಸೋಶಿಯಲ್ ಫೌಂಡೇಷನ್' ಮೂಲಕ ಶೈಕ್ಷಣಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿದ್ದರು.

ಸಿಂದಗಿ ತಾಲ್ಲೂಕಿನ ಯಂಕಂಚಿಯ ದಾವಲ್ ಮಲಿಕ್ ದೇವಸ್ಥಾನದ ಜೀರ್ಣೋದ್ಧಾರಕ್ಕೆ ನೆರವಾಗಿದ್ದರು. ಹತ್ತಾರು ಎಕರೆ ಜಮೀನು ಖರೀದಿಸಿ ದೇವಸ್ಥಾನಕ್ಕೆ ದಾನ ನೀಡಿದ್ದರು.

‘ಬಾಹ್ಯಾಕಾಶ ಯಾನದಿಂದ ಜೀವನ ದೃಷ್ಟಿಕೋನ ಬದಲು’



ನಮ್ಮ ಭೂಮಿ ಕೇವಲ ಕಲ್ಲುಬಂಡೆಗಳಿಂದ ಕೂಡಿದೆ ಎಂಬುದು ಕೆಲವರ ಭಾವನೆ. ಆದರೆ, ಅದು ಚಲನಶೀಲ. ಇಲ್ಲಿನ ಋತುಗಳಲ್ಲಿ, ಸಾಗರದಲ್ಲಿ ಕಂಡುಬರುವ ಬದಲಾವಣೆಗಳನ್ನು ನಾನು ಅಂತರಿಕ್ಷದಿಂದ ನೋಡಿರುವೆ. ಉತ್ತರ ಅಥವಾ ದಕ್ಷಿಣ ಧ್ರುವದಲ್ಲಿ ಹಿಮಗಡ್ಡೆಗಳು ರೂಪುಗೊಳ್ಳುವುದನ್ನೂ ನೋಡಿರುವೆ

ಸುನಿತಾ ವಿಲಿಯಮ್ಸ್

ನವದೆಹಲಿ (ಪಿಟಿಐ): ‘ನನ್ನ ಬಾಹ್ಯಾಕಾಶ ಯಾನಗಳು ಬದುಕಿನ ಕುರಿತ ದೃಷ್ಟಿಕೋನವನ್ನೇ ಬದಲಾಯಿಸಿವೆ’ ಎಂದು ಗಗನಯಾತ್ರಿ ಸುನಿತಾ ವಿಲಿಯಮ್ಸ್ ಹೇಳಿದ್ದಾರೆ.

‘ಭೂಮಿಯನ್ನು ಒಂದು ಗ್ರಹವಾಗಿ ನಾವು ಬಾಹ್ಯಾಕಾಶದಿಂದ ನೋಡಿದಾಗ, ವಿವಿಧ ವಿಚಾರಗಳ ಕುರಿತು ಮನುಷ್ಯರು ವಾದ ಮಾಡುವುದು ಅಥವಾ ಭಿನ್ನಾಭಿಪ್ರಾಯಗಳನ್ನು ಹೊಂದಿರುವುದು ಕ್ಷುಲ್ಲಕ ಎನಿಸುತ್ತದೆ’ ಎಂದು ಹೇಳಿದ್ದಾರೆ.

ಪ್ರಸ್ತುತ ಭಾರತ ಪ್ರವಾಸದಲ್ಲಿರುವ ಅವರು, ಇಲ್ಲಿನ ಅಮೆರಿಕನ್ ಸೆಂಟರ್ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದರು. ‘ಪತಿ ಮತ್ತು ನನ್ನ ನಡುವೆ ವಾಗ್ವಾದ ನಡೆಯುತ್ತಿರುತ್ತವೆ. ಆದರೆ, ಬಾಹ್ಯಾಕಾಶಕ್ಕೆ ಹೋಗಿ ಭೂಮಿಯತ್ತ ಒಮ್ಮೆ ದೃಷ್ಟಿಹಾಯಿಸಿ ಯೋಚಿಸಿದಾಗ ಈ ವಾಗ್ವಾದ ನಡೆಸುವುದೆಲ್ಲಾ ಕ್ಷುಲ್ಲಕ ಎನಿಸುತ್ತದೆ’ ಎಂದು ಸುನಿತಾ ವಿಲಿಯಮ್ಸ್ ಹೇಳಿದ್ದಾರೆ.

‘ಬಾಹ್ಯಾಕಾಶ ತಲುಪಿದ ಕೆಲ ಹೊತ್ತಿನ ನಂತರ ನಮ್ಮ ದೃಷ್ಟಿಕೋನ ವಿಶಾಲವಾಗುತ್ತಾ ಹೋಗುತ್ತದೆ. ಒಂದು ನಿರ್ದಿಷ್ಟ ಮನೆ ಬದಲಾಗಿ ಇಡೀ ಭೂಮಿಯೇ ನಮ್ಮ ಮನೆ ಎಂಬ ಅರಿವು ಮೂಡತೊಡಗುತ್ತದೆ’ ಎನ್ನುವ ಮೂಲಕ ತಮ್ಮ ಬಾಹ್ಯಾಕಾಶ ಪಯಣದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಇತ್ತೀಚೆಗೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಕೈಗೊಂಡಿದ್ದ ಯಾತ್ರೆ ಕುರಿತು ಕೂಡ ಅವರು ಮಾತನಾಡಿದ್ದಾರೆ.

ಎಂಟು ದಿನಗಳ ಮಟ್ಟಿಗೆ ಐಎಸ್‌ಎಸ್‌ಗೆ ತೆರಳಿದ್ದ ಸುನಿತಾ ಅವರನ್ನು ಒಳಗೊಂಡ ತಂಡವು, ಗಗನನೌಕೆಯಲ್ಲಿನ ತಾಂತ್ರಿಕ ದೋಷದಿಂದಾಗಿ ಒಂಬತ್ತು ತಿಂಗಳು ಅಲ್ಲಿಯೇ ಇರಬೇಕಾಯಿತು.

ಸಾಧನೆಗಳು

ಸುನಿತಾ ವಿಲಿಯಮ್ಸ್ ತಮ್ಮ ವೃತ್ತಿಜೀವನದಲ್ಲಿ 9 ಬಾರಿ ಬಾಹ್ಯಾಕಾಶ ನಡಿಗೆ ಕೈಗೊಂಡಿದ್ದಾರೆ. ಒಟ್ಟು 62 ಗಂಟೆ 6 ನಿಮಿಷಗಳ ಅಂತರಿಕ್ಷ ಪಯಣ ನಡೆಸಿ, ಇಂತಹ ಸಾಧನೆ ಮಾಡಿದ ಮಹಿಳೆ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

ಭೌತವಿಜ್ಞಾನದಲ್ಲಿ ಪದವಿ, ಎಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಬಳಿಕ ಅವರು ಅಮೆರಿಕ ನೌಕಾಪಡೆಗೆ ಸೇರಿದರು. 40 ಬಗೆಯ ಯುದ್ಧವಿಮಾನಗಳನ್ನು 4 ಸಾವಿರಕ್ಕೂ ಅಧಿಕ ಗಂಟೆಗಳಷ್ಟು ಹಾರಾಟ ನಡೆಸಿದ ಅನುಭವವನ್ನೂ ಹೊಂದಿದ್ದಾರೆ.

ನಾಸಾದಿಂದ ನಿವೃತ್ತಿ

ನಾಸಾದಿಂದ ಗಗನಯಾನಿ ಸುನಿತಾ ವಿಲಿಯಮ್ಸ್ ನಿವೃತ್ತಿಯಾಗಿದ್ದಾರೆ.

27 ವರ್ಷಗಳ ತಮ್ಮ ವೃತ್ತಿ ಬದುಕಿನಲ್ಲಿ, ಅವರು ಮೂರು ಬಾರಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ(ಐಎಸ್‌ಎಸ್) ಪಯಣಿಸಿದ್ದಾರೆ. ಜೊತೆಗೆ ಹಲವು ಬಾಹ್ಯಾಕಾಶ ಯಾನಗಳನ್ನು ಕೂಡ ಯಶಸ್ವಿಯಾಗಿ ಪೂರೈಸಿ ಗಮನ ಸೆಳೆದಿದ್ದಾರೆ.

ಅವರ ತಂದೆ ದೀಪಕ್ ಪಾಂಡ್ಯ ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಝುಲಾಸನ್‌ದವರು. ತಾಯಿ ಸ್ಲೋವೆನಿಯಾದವರಾದ ಉರ್ಸುಲಿನ್ ಬಾನಿ.

‘ಸುನಿತಾ ವಿಲಿಯಮ್ಸ್ ಮಾನವಸಹಿತ ಗಗನಯಾನದ ಪ್ರವರ್ತಕರೊಬ್ಬರಲ್ಲಾಗಿದ್ದಾರೆ. ಐಎಸ್‌ಎಸ್‌ಗೆ ಕೈಗೊಂಡ ಯಾನ ಹಾಗೂ ನಾಯಕತ್ವದ ಮೂಲಕ ಬಾಹ್ಯಾಕಾಶ ಅನ್ವೇಷಣೆ ಕ್ಷೇತ್ರದ ಭವಿಷ್ಯ ರೂಪಿಸಿದ್ದಾರೆ’ ಎಂದು ನಾಸಾ ಆಡಳಿತಾಧಿಕಾರಿ ಜೇರ್ಡ್ ಐಸಾಕ್‌ಮನ್ ಪ್ರಕಟಣೆಯಲ್ಲಿ ಶ್ಲಾಘಿಸಿದ್ದಾರೆ.

ತ್ರಿವಿಧ ದಾಸೋಹಿಗೆ ನಾಡಿನ ನಮನ

ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ ಸಂಸ್ಮರಣೋತ್ಸವ

ಪ್ರಜಾವಾಣಿ ವಾರ್ತೆ

ತುಮಕೂರು: ನಾಡಿನ ವಿವಿಧೆಡೆಗಳಿಂದ ಬಂದಿದ್ದ ಭಕ್ತ ಸಮೂಹ ಶಿವಕುಮಾರ ಸ್ವಾಮೀಜಿ ಸಂಸ್ಮರಣೋತ್ಸವಕ್ಕೆ ಸಾಕ್ಷಿಯಾಯಿತು. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ನುಡಿನಮನದ ಮೂಲಕ ತ್ರಿವಿಧ ದಾಸೋಹಿಯ ಸೇವೆಯನ್ನು ಸ್ಮರಿಸಿದರು.

ಸಿದ್ಧಗಂಗಾ ಮಠದಲ್ಲಿ ಬುಧವಾರ ಶಿವಕುಮಾರ ಸ್ವಾಮೀಜಿ 7ನೇ ಸಂಸ್ಮರಣೋತ್ಸವವು ಭಕ್ತಿ, ಭಾವಗಳೊಂದಿಗೆ ನೆರವೇರಿತು. ಸ್ವಾಮೀಜಿ ಗದ್ದುಗೆಗೆ ನಮಿಸಿದ ಭಕ್ತರು ಅನ್ನ, ಅಕ್ಷರ, ಆಶ್ರಯ ನೀಡಿದ ಗುರುವನ್ನು ಸ್ಮರಿಸಿದರು. ಜೀವನಕ್ಕೆ ದಾರಿ ತೋರಿದ ಸಂತನಿಗೆ ಭಕ್ತಿ ಸಮರ್ಪಿಸಿದರು.

ಮುಂಜಾನೆಯಿಂದಲೇ ಮಠದತ್ತ ಹೆಜ್ಜೆ ಹಾಕಿದ ಸಾವಿರಾರು ಭಕ್ತರು ಗದ್ದುಗೆಯ ದರ್ಶನ ಪಡೆದರು. ವಿವಿಧ ಮಠಾಧೀಶರು, ರಾಜಕೀಯ ಮುಖಂಡರು, ಅಧಿಕಾರಿಗಳು, ಸಾರ್ವಜನಿಕರು ಗದ್ದುಗೆಗೆ ಪೂಜೆ ಸಲ್ಲಿಸಿದರು. ಸ್ವಾಮೀಜಿಯವರ ಸೇವೆಯನ್ನು ಮೆಲುಕು ಹಾಕಿದರು.

‘ಅವರು ಸದಾ ಪ್ರಜ್ವಲಿಸುವ ದೀಪ’

ಕಾರ್ಯಕ್ರಮದಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ‘ಶಿವಕುಮಾರ ಸ್ವಾಮೀಜಿ ಸದಾ ಪ್ರಜ್ವಲಿಸುವ ದೀಪದಂತಿದ್ದರು’ ಎಂದರು.

‘ಅವರು ನಾಡಿನ ಮಹಾನ್ ಸಂತ, ತ್ಯಾಗಮಯಿ. ತಮ್ಮ ಇಡೀ ಜೀವನವನ್ನು ಸಮಾಜಕ್ಕಾಗಿ ಮುಡುಪಾಗಿಟ್ಟಿದ್ದರು. ದಾಸೋಹದ ಮೂಲಕ ನಾಡಿಗೆ ದೊಡ್ಡ ಕೊಡುಗೆ, ಸಂದೇಶ ನೀಡಿದ್ದಾರೆ’ ಎಂದು ಸ್ಮರಿಸಿದರು.

ಶಿವಕುಮಾರ ಸ್ವಾಮೀಜಿ ಲಿಂಗೈಕ್ಯರಾಗಿರುವ ಶಿವಯೋಗಿ ಮಂದಿರದಲ್ಲಿ ಮುಂಜಾನೆ ಸಿದ್ಧಲಿಂಗ ಸ್ವಾಮೀಜಿ ಇಷ್ಟಲಿಂಗ ಪೂಜೆ, ಗದ್ದುಗೆ ಪೂಜೆ ಸಲ್ಲಿಸಿ ಧಾರ್ಮಿಕ ವಿಧಿವಿಧಾನಗಳಿಗೆ ಚಾಲನೆ ನೀಡಿದರು. ಮಹಾರುದ್ರಾಭಿಷೇಕ, ರಾಜೋಪಚಾರ, ಬಿಲ್ವಾರ್ಚನೆ ನೆರವೇರಿದವು. ಇಡೀ ದಿನ ಸ್ವಾಮೀಜಿಯವರ ನೆನಪಿನಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ನಡೆದವು.

ಶಿವಕುಮಾರ ಸ್ವಾಮೀಜಿ ಭಾವಚಿತ್ರವನ್ನು ರುದ್ರಾಕ್ಷಿ ಮಂಟಪದಲ್ಲಿಟ್ಟು ಮಠದ ಆವರಣದಲ್ಲಿ ಮೆರವಣಿಗೆ ಮಾಡಲಾಯಿತು. ಸುಮಂಗಲಿಯರು ಮೆರವಣಿಗೆಯಲ್ಲಿ ಕಳಸ ಹೊತ್ತು ಸಾಗಿದರು. ವಿವಿಧ ಜಾನಪದ ಕಲಾ ತಂಡಗಳು, ವಾದ್ಯ ಮೇಳಗಳು ಮೆರವಣಿಗೆಗೆ ಮೆರುಗು ತಂದವು.

ಪ್ರಸಾದ: ಸಹಸ್ರಾರು ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗೆಯಿಂದ ರಾತ್ರಿವರೆಗೂ ನಿರಂತರ ದಾಸೋಹ ನೆರವೇರಿತು. ಭಕ್ತರು ತಮ್ಮ ಗುರುವಿಗೆ ನಮಿಸಿ, ಪ್ರಸಾದ ಸೇವಿಸಿದರು.



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಬುಧವಾರ ಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ನಮಿಸಿದರು. ಶಿವಸಿದ್ಧೇಶ್ವರ ಸ್ವಾಮೀಜಿ, ಟಿ.ಬಿ.ಜಯಚಂದ್ರ, ಡಾ.ಸಿ.ಎನ್.ಮಂಜುನಾಥ್, ಮಧುಸೂದನ ಸಾಯಿ, ವಿ.ಸೋಮಣ್ಣ, ಥಾವರಚಂದ್ ಗೆಹಲೋತ್, ಸಿದ್ಧಲಿಂಗ ಸ್ವಾಮೀಜಿ ಪಾಲ್ಗೊಂಡಿದ್ದರು – ಪ್ರಜಾವಾಣಿ ವಾರ್ತೆ

ಸಂಕ್ಷಿಪ್ತ ಸುದ್ದಿ

ಪಕ್ಷ ಸಂಘಟನೆ ಚುರುಕುಗೊಳಿಸಿ: ನಬಿನ್

ನವದೆಹಲಿ: ‘ಕರ್ನಾಟಕದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಚುನಾವಣೆಗಳಿಗೆ ಪಕ್ಷವನ್ನು ಈಗಿನಿಂದಲೇ ಸಜ್ಜುಗೊಳಿಸಬೇಕು. ರಾಜ್ಯ ನಾಯಕರು ತಮ್ಮಲ್ಲಿನ ಅಭಿಪ್ರಾಯ ಭೇದಗಳನ್ನು ಮರೆತು ಸಂಘಟನೆಯನ್ನು ಇನ್ನಷ್ಟು ಚುರುಕುಗೊಳಿಸಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಸೂಚಿಸಿದರು.

ಬಿಜೆಪಿ ರಾಜ್ಯ ಘಟಕಗಳ ಅಧ್ಯಕ್ಷರ ಜತೆಗೆ ನಬಿನ್, ಮಾಜಿ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಬಿ.ಎಲ್.ಸಂತೋಷ್ ಬುಧವಾರ ಸಭೆ ನಡೆಸಿ ರಾಜ್ಯವಾರು ಪಕ್ಷ ಸಂಘಟನೆ ಹಾಗೂ ಚುನಾವಣಾ ತಯಾರಿಗಳ ಬಗ್ಗೆ ಮಾಹಿತಿ ಪಡೆದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಭಾಗಿಯಾಗಿ ಪಕ್ಷದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಹಾಲು ಕರೆಯುವ ಸ್ಪರ್ಧೆ 24ರಿಂದ



ಮೈಸೂರು: ನಗರ ಗೋಪಾಲಕರ ಸಂಘದ 20ನೇ ವಾರ್ಷಿಕೋತ್ಸವ ಪ್ರಯುಕ್ತ ಜ.24 ಮತ್ತು 25ರಂದು ಇಲ್ಲಿನ ಜೆ.ಕೆ.ಮೈದಾನದಲ್ಲಿ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ ನಡೆಯಲಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಸಂಘದ ಅಧ್ಯಕ್ಷ ಡಿ.ನಾಗಭೂಷಣ್, ‘ಎರಡೂ ದಿನ ಬೆಳಿಗ್ಗೆ 6.30 ಹಾಗೂ ಸಂಜೆ 5.30ಕ್ಕೆ ಸ್ಪರ್ಧೆ ನಡೆಯಲಿದೆ’ ಎಂದರು.

‘1ನೇ ಬಹುಮಾನವಾಗಿ ₹1.50 ಲಕ್ಷ, 2ನೇ ಬಹುಮಾನವಾಗಿ ₹1 ಲಕ್ಷ, 3ನೇ ಬಹುಮಾನವಾಗಿ ₹75 ಸಾವಿರ, 4ನೇ ಬಹುಮಾನವಾಗಿ ₹50 ಸಾವಿರ ಹಾಗೂ 5ನೇ ಬಹುಮಾನವಾಗಿ ₹25 ಸಾವಿರ ಮತ್ತು ಟ್ರೋಫಿಗಳನ್ನು ನೀಡಲಾಗುವುದು. ಜ.23ರ ಸಂಜೆ 4ರವರೆಗೆ ಗೋಪಾಲಕರ ಹೆಸರು ನೋಂದಣಿಗೆ ಅವಕಾಶವಿದೆ. ಅಂದು ಎಲ್ಲ ಹಸುಗಳನ್ನು ಮೈದಾನಕ್ಕೆ ಕರೆತರಬೇಕು. ಮಾಹಿತಿ ಹಾಗೂ ನೋಂದಣಿಗೆ ಮೊ.ಸಂ. 99864 16956 ಸಂಪರ್ಕಿಸಿ’ ಎಂದರು.

‘23ರಂದು ಮಧ್ಯಾಹ್ನ 12ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಜೆ.ಕೆ.ಮೈದಾನದವರೆಗೆ ಕೃಷ್ಣನ ಮೂರ್ತಿಯ ಮೆರವಣಿಗೆ ನಡೆಯಲಿದೆ. 25ರಂದು ಸಂಜೆ ಸಂಜೆ 6.30ಕ್ಕೆ ನಡೆಯುವ ಸಮಾರಂಭದಲ್ಲಿ ವಿಜೇತ ಹಸುಗಳ ಮಾಲೀಕರಿಗೆ ಬಹುಮಾನ ವಿತರಿಸಲಾಗುವುದು’ ಎಂದು ತಿಳಿಸಿದರು.

ಕುಕ್ಕೆ ಸುಬ್ರಹ್ಮಣ್ಯ: ಎರಡು ತಿಂಗಳಲ್ಲಿ ₹ 15 ಕೋಟಿ ಆದಾಯ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ದಕ್ಷಿಣ ಭಾರತದ ನಾಗಾರಾಧನೆಯ ಹೆಸರಾಂತ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ 2025ರ ನವಂಬರ್, ಡಿಸೆಂಬರ್ ತಿಂಗಳಲ್ಲಿ ಒಟ್ಟು ₹14.77ಕೋಟಿ ಆದಾಯ ಬಂದಿದೆ.

ನವೆಂಬರ್‌ನಲ್ಲಿ ವಿವಿಧ ಸೇವೆಗಳಿಂದ ₹4.56 ಕೋಟಿ, ಹುಂಡಿಯಿಂದ ₹1.09 ಕೋಟಿ ಹಾಗೂ ಅನ್ನದಾನ ನಿಧಿಯಿಂದ ₹83.57 ಲಕ್ಷ ಆದಾಯ ಬಂದಿದೆ. ಡಿಸೆಂಬರ್ ತಿಂಗಳಲ್ಲಿ ವಿವಿಧ ಸೇವೆಗಳಿಂದ ₹5.30ಕೋಟಿ, ಹುಂಡಿಯಿಂದ ₹1.90 ಕೋಟಿ, ಅನ್ನದಾನ ನಿಧಿಯಿಂದ ₹1.07 ಕೋಟಿ ಆದಾಯ ಬಂದಿದೆ. ‘ಉಳಿದಂತೆ, ವಸತಿಗೃಹ ಹಾಗೂ ಇತರ ಮೂಲಗಳಿಂದ ಬಂದ ಆದಾಯವೂ ಇದರಲ್ಲಿ ಸೇರಿದೆ’ ಎಂದು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

₹2.32 ಲಕ್ಷಕ್ಕೆ ಹೋರಿ ಹರಾಜು

ಕಡೂರು (ಚಿಕ್ಕಮಗಳೂರು): ಅಮೃತ ಮಹಲ್ ತಳಿಯ ‘ಬಿ.18-39 ಮಸಣಿ’ ಎಂಬ ಬೀಜದ ಹೋರಿ ₹2.32 ಲಕ್ಷಕ್ಕೆ ಬುಧವಾರ ಇಲ್ಲಿ ಹರಾಜಾಯಿತು.

ಹೋರಿ ಕರುಗಳ ಹರಾಜು ಪ್ರಕ್ರಿಯೆ ಬೀರೂರಿನ ಅಮೃತ ಮಹಲ್ ತಳಿ ಸಂವರ್ಧನಾ ಕೇಂದ್ರದಲ್ಲಿ ನಡೆಯಿತು. ಬೀಜದ ಹೋರಿ ಬರುತ್ತಿದ್ದಂತೆ ರೈತರು ಕೇಕೆ ಹಾಕಿ ಸಂಭ್ರಮಿಸಿದರು.



₹2.32 ಲಕ್ಷಕ್ಕೆ ಹರಾಜಾದ ಅಮೃತ ಮಹಲ್ ಬೀಜದ ಹೋರಿ

ಹೋರಿಗೆ ರೈತರೊಬ್ಬರು ಮೊದಲು ₹1.50 ಲಕ್ಷಕ್ಕೆ ಕೂಗಿದರು. ನಂತರ ಏರಿಕೆಯಲ್ಲೇ ಸಾಗಿ ₹2.32 ಲಕ್ಷಕ್ಕೆ ಶಿವಮೊಗ್ಗ ಜಿಲ್ಲೆಯ ರವಿಕುಮಾರ್ ಬಿಡ್ ಕೂಗಿ ಪಡೆದುಕೊಂಡರು.

ಜೋಡಿ ಕರುಗಳ ಪೈಕಿ ಗಂಗೆ ಮತ್ತು ಗಾಳಿಕೆರೆ ಎಂಬ ಜೋಡಿಗಳು ₹2,07,500ಕ್ಕೆ ಹರಾಜಾದವು. ಶಿಕಾರಿಪುರ ತಾಲ್ಲೂಕು ಹೊಸೂರಿನ ವೀರೇಂದ್ರ ಪಾಟೀಲ ಖರೀದಿಸಿದರು. ಬಣ್ಣದ ಸರ ಮತ್ತು ಗಾಳಿಕೆರೆ ಎಂಬ ಜೋಡಿ ₹2,03,500ಕ್ಕೆ ಶಿಕಾರಿಪುರದ ಈಸೂರಿನ ಬಸವರಾಜು ಪಾಲಾದವು.

170 ಹೋರಿ ಕರುಗಳು, 8 ಬೀಜದ ಹೋರಿಗಳ ಹರಾಜು ನಡೆಯಿತು. ಹರಾಜಿನಲ್ಲಿ ಒಟ್ಟು ₹1.02 ಕೋಟಿ ಸಂಗ್ರಹವಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ರಾಜ್ಯಪಾಲ–ಸರ್ಕಾರ ಸಂಘರ್ಷ

ಒಂದನೇ ಪುಟದಿಂದ...

ಒಂದು ವೇಳೆ ರಾಜ್ಯಪಾಲರು ಬೆಳಿಗ್ಗೆ 11.15ರ ಒಳಗೆ ಕಲಾಪಕ್ಕೆ ಆಗಮಿಸದೇ ಇದ್ದರೆ, ಸುಪ್ರೀಂಕೋರ್ಟ್ ಮೊರೆ ಹೋಗಲು ಸರ್ಕಾರ ತಯಾರಿ ನಡೆಸಿದೆ. ‘ರಾಜ್ಯಪಾಲರು ತಮ್ಮ ಸಾಂವಿಧಾನಿಕ ಕರ್ತವ್ಯ ನಿರ್ವಹಿಸಬೇಕು, ಸರ್ಕಾರದ ಸಿದ್ಧಪಡಿಸಿದ ಭಾಷಣ ಓದಬೇಕು’ ಎಂಬ ವಿಷಯವನ್ನು ಕೋರ್ಟ್‌ನಲ್ಲಿ ಪ್ರತಿಪಾದಿಸುವ ಬಗ್ಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ವರ್ಷದ ಆರಂಭದಲ್ಲಿ ನಡೆಯುವ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಓದುವ ಮೂಲಕ ಇಡೀ ವರ್ಷದ ಕಲಾಪಕ್ಕೆ ಚಾಲನೆ ನೀಡುವುದು ಸಾಂವಿಧಾನಿಕ ಕಟ್ಟಳೆ. ಬೆಳಿಗ್ಗೆ 11ಕ್ಕೆ ಅಧಿವೇಶನ ನಡೆಸಲು ರಾಜ್ಯಪಾಲರೇ ಆದೇಶ ಹೊರಡಿಸಿದ್ದಾರೆ. ಈ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಹಾಗೂ ಚರ್ಚೆ ನಡೆಯಲಿದೆ. ಅದರ ಜತೆಗೆ, ನರೇಗಾ ಕಾಯ್ದೆಯ ಮೂಲ ಸ್ವರೂಪವನ್ನು ಬದಲಿಸಿ ‘ವಿಬಿ ಜಿ ರಾಮ್ ಜಿ’ ಎಂದು ಬದಲಿಸಿರುವ ಕೇಂದ್ರ ಸರ್ಕಾರದ ತೀರ್ಮಾನದ ಬಗ್ಗೆ ವಿಶೇಷ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ತಯಾರಿ ನಡೆಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಅನುಮೋದನೆಗೊಂಡಿರುವ ಭಾಷಣದಲ್ಲಿರುವ 11 ಪ್ಯಾರಾಗಳಿಗೆ ರಾಜ್ಯಪಾಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆ ಭಾಷಣವನ್ನು ಯಥಾವತ್ ಓದಲು ರಾಜ್ಯಪಾಲರು ನಿರಾಕರಿಸಿದ್ದಾರೆ. ಈ ಮಾಹಿತಿ ಗೊತ್ತಾಗುತ್ತಿದ್ದಂತೆ, ಮುಖ್ಯಮಂತ್ರಿಯ ಸಲಹೆಯಂತೆ ಕಾನೂನು ಸಚಿವ ಎಚ್.ಕೆ. ಪಾಟೀಲ, ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಬುಧವಾರ ಸಂಜೆ ಲೋಕಭವನಕ್ಕೆ ಭೇಟಿ ನೀಡಿ ರಾಜ್ಯಪಾಲರ ಮನವೊಲಿಕೆಗೆ ಪ್ರಯತ್ನಿಸಿದರು.

ರಾಜ್ಯಪಾಲರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಎಚ್.ಕೆ. ಪಾಟೀಲ, ‘ರಾಜ್ಯಪಾಲರು ಸರ್ಕಾರದ ಭಾಷಣವನ್ನು ಓದಬೇಕು ಎಂಬುದನ್ನು ಸಂವಿಧಾನದ 176 ವಿಧಿ ಹೇಳುತ್ತದೆ. ಇದು ರಾಷ್ಟ್ರಪತಿ, ರಾಜ್ಯಪಾಲರಿಗೂ ಅನ್ವಯ. ನಾವು ಬರ ಪರಿಹಾರಕ್ಕಾಗಿ ಸುಪ್ರೀಂಕೋರ್ಟ್‌ಗೆ ಹೋಗಬೇಕಿದೆ. 15ನೇ ಹಣಕಾಸು ಆಯೋಗದಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ. ಈ ಎಲ್ಲ ವಿಷಯಗಳನ್ನು ಭಾಷಣದಲ್ಲಿ ಪ್ರಸ್ತಾಪ ಮಾಡಲಾಗಿದೆ. ಈ ಬಗ್ಗೆ ಜಂಟಿ ಸದನದಲ್ಲಿ ತಿಳಿಸಬಾರದು ಅಂದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಕೇಂದ್ರ ಸರ್ಕಾರ ಅಧಿಕಾರ ಕೇಂದ್ರೀಕರಣ ಮಾಡಲು ಹೊರಟಿದೆ. ರಾಜ್ಯದ ಕಲ್ಯಾಣದ ದೃಷ್ಟಿಯಿಂದ ಹಲವು ಅಂಶಗಳನ್ನು ಭಾಷಣದಲ್ಲಿ ನಾವು ಸೇರಿಸಿದ್ದೇವೆ. ಜಂಟಿ ಅಧಿವೇಶನಕ್ಕೆ ರಾಜ್ಯಪಾಲರು ಬರುವುದಿಲ್ಲ ಎಂದು ಹೇಳಿಲ್ಲ. ಕೆಲವು ಮಾರ್ಪಾಡಿಗೆ ಸೂಚಿಸಿದ್ದಾರೆ. 11 ಪ್ಯಾರಾಗಳನ್ನು ಬದಲಿಸುವಂತೆ ತಿಳಿಸಿದ್ದಾರೆ. ಅದು ಅಷ್ಟು ಸಮಂಜಸ ಅಲ್ಲ. ರೈತರು, ಕೃಷಿ ಕಾರ್ಮಿಕರ ಹಕ್ಕನ್ನು ಕೇಂದ್ರ ಸರ್ಕಾರ ಕಸಿದಿದೆ, ಇದರ ಬಗ್ಗೆ ಧ್ವನಿ ಎತ್ತಬಾರದೆ’ ಎಂದೂ ಪ್ರಶ್ನಿಸಿದರು.

ನಂತರ ಲೋಕಭವನದಿಂದ ಎಚ್.ಕೆ. ಪಾಟೀಲರ ನೇತೃತ್ವದ ನಿಯೋಗ ಮುಖ್ಯಮಂತ್ರಿಯ ನಿವಾಸಕ್ಕೆ ತೆರಳಿ, ರಾಜ್ಯಪಾಲರ ಆಕ್ಷೇಪದ ಮಾಹಿತಿ ನೀಡಿದೆ. ಮುಖ್ಯಮಂತ್ರಿ ಜೊತೆ ಒಂದು ಗಂಟೆಗೂ ಹೆಚ್ಚು ಕಾಲ ನಿಯೋಗವು ಚರ್ಚೆ ನಡೆಸಿದೆ. ಬಳಿಕ ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿದ ಎ.ಎಸ್. ಪೊನ್ನಣ್ಣ, ಮುಖ್ಯಮಂತ್ರಿ ಜೊತೆಗಿನ ಮಾತುಕತೆ ಮತ್ತು ಸರ್ಕಾರದ ತೀರ್ಮಾನವನ್ನು ಅವರಿಗೆ ತಿಳಿಸಿದರು ಎಂದು ಮೂಲಗಳು ಹೇಳಿವೆ.

ರಾಜ್ಯಪಾಲರು ಸಿದ್ಧ ಭಾಷಣ ಓದಲೇಬೇಕು: ಹೊರಟ್ಟಿ

‘ಸಂವಿಧಾನದ ಪ್ರಕಾರ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಚುನಾಯಿತ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದಲೇಬೇಕು. ಸಿದ್ಧ ಭಾಷಣದಲ್ಲಿ ಒಂದು ಸಾಲು ಬಿಟ್ಟರೂ ಅದು ಸರ್ಕಾರಕ್ಕೆ ಮುಜುಗರ’ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಜಂಟಿ ಅಧಿವೇಶನದ ಭಾಷಣದ ವಿಷಯದಲ್ಲಿ ರಾಜ್ಯಪಾಲರಿಗೆ ಸ್ವಂತ ಅಧಿಕಾರ ಇಲ್ಲ. ಕೇಂದ್ರ ಮತ್ತು ರಾಜ್ಯಗಳಲ್ಲಿ ಬೇರೆ, ಬೇರೆ ಪಕ್ಷಗಳ ಸರ್ಕಾರಗಳು ಇದ್ದಾಗ ಕೆಲವೊಮ್ಮೆ ವ್ಯತ್ಯಾಸಗಳಾಗುತ್ತವೆ. ಯಾವುದೇ ಪಕ್ಷದ ಸರ್ಕಾರವಿದ್ದರೂ ಆಯಾ ರಾಜ್ಯಗಳಲ್ಲಿ ಚುನಾಯಿತ ಸರ್ಕಾರದ ನಿರ್ಧಾರವೇ ಅಂತಿಮ’ ಎಂದರು.

‘ಎಲ್ಲ ಬದಲಾವಣೆ ಸಾಧ್ಯವಿಲ್ಲ’

ಗುರುವಾರ ಬೆಳಿಗ್ಗೆ 11ಕ್ಕೆ ಅಧಿವೇಶನ ಆರಂಭವಾಗಲಿದೆ. ಭಾಷಣದಲ್ಲಿರುವ 11 ಪ್ಯಾರಾಗಳನ್ನು ಬದಲಾವಣೆ ಮಾಡಲು ರಾಜ್ಯಪಾಲರು ಹೇಳಿದ್ದರು. ಶಬ್ದಗಳ ತಿದ್ದುಪಡಿಯಷ್ಟೆ ಮಾಡುತ್ತೇವೆ. ಆದರೆ, ಎಲ್ಲವನ್ನೂ ಬದಲಾವಣೆ ಮಾಡಲು ಸಾಧ್ಯ ಇಲ್ಲ. ಬಡವರ ಪರವಾಗಿ ಇರುವ ಭಾಷಣ ಇದಾಗಿದೆ. ಅದನ್ನು ಓದಬೇಕೆಂದು ರಾಜ್ಯಪಾಲರಿಗೆ ಮನವಿ ಮಾಡುತ್ತೇವೆ

ಎಚ್.ಕೆ. ಪಾಟೀಲ, ಕಾನೂನು ಸಚಿವ ಮತ್ತು ಸಂಸದೀಯ ವ್ಯವಹಾರಗಳ ಸಚಿವ

ಎರಡು ಬಾರಿ ಭಾಷಣ ಮೊಟಕು

ಕರ್ನಾಟಕದ ಸಂಸದೀಯ ಇತಿಹಾಸದಲ್ಲಿ ವಿಧಾನಮಂಡಲ ಅಧಿವೇಶನಕ್ಕೆ ರಾಜ್ಯಪಾಲರು ಗೈರುಹಾಜರಾದ, ಭಾಷಣ ಓದಲು ನಿರಾಕರಿಸಿದ ಪೂರ್ವ ನಿದರ್ಶನ ಇಲ್ಲ. ಆದರೆ, ಸರ್ಕಾರ ಸಿದ್ಧಪಡಿಸಿದ ಪೂರ್ಣ ಭಾಷಣ ಓದದೆ ಭಾಷಣವನ್ನು ಸದನದಲ್ಲಿ ಮಂಡಿಸಿ ರಾಜ್ಯಪಾಲರು ಹೊರ ನಡೆದ ಘಟನೆ ಎರಡು ಬಾರಿ ನಡೆದಿದೆ.

ಜನತಾದಳದ ಜೆ.ಎಚ್.ಪಟೇಲರು ಮುಖ್ಯಮಂತ್ರಿಯಾಗಿದ್ದ (1996–99) ಅವಧಿಯಲ್ಲಿ ರಾಜ್ಯಪಾಲರಾಗಿದ್ದ ಖುರ್ಷಿದ್ ಆಲಂ ಖಾನ್, ಭಾಷಣದ ಆರಂಭ ಮತ್ತು ಕೊನೆಯ ಪ್ಯಾರಾಗಳನ್ನಷ್ಟೇ ಓದಿದ್ದರು.

ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ (2008–11) ಅವಧಿಯಲ್ಲಿ ರಾಜ್ಯಪಾಲರಾಗಿದ್ದ ಎಚ್.ಆರ್.ಭಾರದ್ವಾಜ್ ಅವರು ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಎರಡು ನಿಮಿಷ ಓದಿದ್ದರು. ನಂತರ ಸದನದಲ್ಲಿ ‘ಓದಲಾಗಿದೆ ಎಂದು ಪರಿಗಣಿಸಲು’ ಎಂದು ಹೇಳಿ ಹೊರನಡೆದಿದ್ದರು.

ಕದ್ರಿ ರಥೋತ್ಸವ

ಚಿತ್ರ: ಫಕ್ರುದ್ದೀನ್ ಎಚ್



ಮಂಗಳೂರಿನ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ ಅಂಗವಾಗಿ ಬುಧವಾರ ನಡೆದ ಶ್ರೀ ಮನ್ಮಹಾರಥೋತ್ಸವದಲ್ಲಿ ಅಸಂಖ್ಯ ಭಕ್ತರು ಪಾಲ್ಗೊಂಡರು

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಜ.29ರಿಂದ

70 ದೇಶಗಳ 225 ಸಿನಿಮಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಜ.29ರಿಂದ ಪ್ರಾರಂಭವಾಗಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸೌಧದ ಮುಂದೆ ಚಾಲನೆ ನೀಡಲಿದ್ದಾರೆ. ಈ ವರ್ಷ ಅಮೆರಿಕ, ಜರ್ಮನಿ, ಫ್ರಾನ್ಸ್, ಇರಾನ್ ಸೇರಿದಂತೆ 70 ದೇಶಗಳ 225 ಸಿನಿಮಾಗಳು ಪ್ರದರ್ಶನಗೊಳ್ಳಲಿವೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ ತಿಳಿಸಿದರು.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸ್ತ್ರೀ ಎಂದರೆ ಅಷ್ಟೇ ಸಾಕೆ’ ಎಂಬ ಧ್ಯೇಯದಡಿ ಈ ವರ್ಷದ ಚಿತ್ರೋತ್ಸವ ನಡೆಯಲಿದೆ. ಉದ್ಘಾಟನಾ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇರಲಿದ್ದಾರೆ. ಬಹುಭಾಷಾ ನಟ ಪ್ರಕಾಶ್ ರಾಜ್ ರಾಯಭಾರಿಯಾಗಿದ್ದು, ನಟಿ ರುಕ್ಮಿಣಿ ವಸಂತ್ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ’ ಎಂದರು.

‘ಜ.29ರಿಂದ ಫೆ.6ರವರೆಗೆ ರಾಜಾಜಿನಗರದ ಲುಲು ಮಾಲ್‌ನ 11 ಸ್ಕ್ರೀನ್‌ಗಳಲ್ಲಿ ಚಿತ್ರಗಳ ಪ್ರದರ್ಶನ ನಡೆಯಲಿದೆ. ಒರಾಯನ್ ಮಾಲ್‌ನಲ್ಲಿ ಸಿನಿಮಾಗಳ ಪ್ರದರ್ಶನಕ್ಕೆ ಹೆಚ್ಚು ಸ್ಥಳಾವಕಾಶವಿತ್ತು. ಆದರೆ ಊಟೋಪಚಾರ ಸೇರಿದಂತೆ ಇತರ ಕಾರ್ಯಗಳಿಗೆ ತೊಂದರೆಯಾಗುತ್ತಿತ್ತು. ಹೀಗಾಗಿ ಈ ಸಲ ಚಿತ್ರೋತ್ಸವದ ಸ್ಥಳ ಬದಲಿಸಿದ್ದೇವೆ. ಚಿತ್ರ ಪ್ರದರ್ಶನಗಳ ದೃಷ್ಟಿಯಿಂದ ಈ ವರ್ಷ ಚಿತ್ರೋತ್ಸವವನ್ನು ಒಂದು ದಿನ ವಿಸ್ತರಿಸಲಾಗಿದೆ. ಚಾಮರಾಜಪೇಟೆಯ ಕಲಾವಿದರ ಸಂಘ, ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿಯೂ ಚಿತ್ರ ಪ್ರದರ್ಶನವಿರಲಿದೆ’ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ತಿಳಿಸಿದರು.

‘ಸ್ತ್ರೀ’ ಕುರಿತಾದ ವಿಚಾರಗಳನ್ನು ಹೊಂದಿರುವ 60 ಚಿತ್ರಗಳು ಈ ಸಲ ಪ್ರದರ್ಶನಗೊಳ್ಳಲಿವೆ. ಇದರಲ್ಲಿ ಬಹುಪಾಲು ನಿರ್ದೇಶಕಿಯರ ಸಿನಿಮಾಗಳು. ನಿರ್ದೇಶಕರ ಸಿನಿಮಾಗಳೂ ಒಂದಷ್ಟಿವೆ.

ಸಂಕಲನಕಾರ ಶ್ರೀಕರ ಪ್ರಸಾದ್, ಮಲಯಾಳದ ಜನಪ್ರಿಯ ನಿರ್ದೇಶಕ ಮಹೇಶ್ ನಾರಾಯಣ್, ನಿರ್ದೇಶಕ ಅನುರಾಗ್ ಕಶ್ಯಪ್ ಸೇರಿದಂತೆ ಚಿತ್ರೋದ್ಯಮದ ಅನೇಕ ತಜ್ಞರು ಮಾಸ್ಟರ್ ಕ್ಲಾಸ್ ನಡೆಸಿಕೊಡಲಿದ್ದಾರೆ’ ಎಂದು ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಮುರಳಿ ಪಿ.ಬಿ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಹಾಜರಿದ್ದರು.

3 ವಿಭಾಗಗಳಲ್ಲಿ 45 ಸಿನಿಮಾಗಳು: ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡ, ಭಾರತೀಯ, ಏಷ್ಯನ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, 45 ಸಿನಿಮಾಗಳನ್ನು ಆಯ್ಕೆ ಮಾಡಲಾಗಿದೆ. ‘ಕಾಂತಾರ ಅಧ್ಯಾಯ–1’, ‘ಎಕ್ಸ್ & ವೈ’, ‘ಫೈರ್ ಫ್ಲೈ’ ‘ರೂಬಿ ಕ್ಯೂಬ್’, ಸೇರಿದಂತೆ ಒಟ್ಟು 15 ಸಿನಿಮಾಗಳು ಕನ್ನಡ ವಿಭಾಗದ ಸ್ಪರ್ಧೆಯಲ್ಲಿವೆ. ಕನ್ನಡದ ‘ನಮ್ ಸಾಲಿ’, ಮಲಯಾಳದ 6 ಸಿನಿಮಾಗಳು ಸೇರಿದಂತೆ 15 ಸಿನಿಮಾಗಳು ಭಾರತೀಯ ಸಿನಿಮಾ ಸ್ಪರ್ಧಾ ವಿಭಾಗದಲ್ಲಿವೆ. ಏಷ್ಯನ್ ವಿಭಾಗದಲ್ಲಿ ಕನ್ನಡ ‘ವಾಘಚಿಪಾಣಿ’ ಜಾಗ ಪಡೆದಿದೆ. ಈ ವಿಭಾಗದಲ್ಲಿ 15 ಸಿನಿಮಾಗಳಲ್ಲಿ ಒಟ್ಟು 6 ಭಾರತೀಯ ಸಿನಿಮಾಗಳು ಸ್ಪರ್ಧೆಯಲ್ಲಿವೆ.



17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಕುರಿತು ಬುಧವಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮುರಳಿ ಪಿ.ಬಿ, ಸಾಧು ಕೋಕಿಲ, ಕಾವೇರಿ ಬಿ.ಬಿ, ಹೇಮಂತ್ ನಿಂಬಾಳ್ಕರ್ ಹಾಜರಿದ್ದರು



ಪಾರದರ್ಶಕ ಪ್ರಕ್ರಿಯೆ

‘ಈ ಸಲ ಸಿನಿಮಾಗಳ ಆಯ್ಕೆಯಲ್ಲಿ ಯಾವುದೇ ಒತ್ತಡಕ್ಕೆ ಮಣಿದಿಲ್ಲ. ಅತ್ಯಂತ ಪಾರದರ್ಶಕವಾಗಿ ಅರ್ಹ ಸಿನಿಮಾಗಳನ್ನು ಆಯ್ಕೆ ಮಾಡಿದ್ದೇವೆ. ಕಳೆದ ವರ್ಷದ ನ್ಯೂನತೆಗಳನ್ನು ಸರಿಪಡಿಸಿದ್ದೇವೆ. ನಟ್ಟು, ಬೋಲ್ಟ್ ಮುಗಿದ ಅಧ್ಯಾಯ. ಎಲ್ಲ ಹಿರಿಯ ಕಲಾವಿದರನ್ನು ಆಹ್ವಾನಿಸುತ್ತೇವೆ. 50 ವರ್ಷಗಳ ಸಿನಿಮಾ ಪಯಣದ ಸುವರ್ಣ ಸಂಭ್ರಮ ನಡೆಯಲಿದೆ. ಚಿತ್ರೋದ್ಯಮದಲ್ಲಿ 50 ವರ್ಷ ಪೂರೈಸಿದ ಕನ್ನಡ ಕಲಾವಿದ, ತಂತ್ರಜ್ಞರ ಸಿನಿಮಾಗಳನ್ನು ಪ್ರದರ್ಶನ ಮಾಡುತ್ತೇವೆ. ಚಿತ್ರೋತ್ಸವದ ನೋಂದಣಿ ಪ್ರಾರಂಭಗೊಂಡಿದೆ. ಚಿತ್ರೋತ್ಸವದ ಜಾಲತಾಣದಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಚಿತ್ರೋದ್ಯಮ ಕ್ಷೇತ್ರದವರಿಗೆ ರಿಯಾಯಿತಿ ಇರುತ್ತದೆ’ ಎಂದು ಸಾಧು ಕೋಕಿಲ ತಿಳಿಸಿದರು.

ಕನ್ನಡ ವಿಭಾಗದ ಸ್ಪರ್ಧೆಯಲ್ಲಿನ ಚಿತ್ರಗಳು

- ಎಕ್ಸ್ & ವೈ
- ರೂಬಿ ಕ್ಯೂಬ್
- ಲವ್ ಯು ಮುದ್ದು
- ತೀರ್ಥರೂಪ ತಂದೆಯವರಿಗೆ
- ಮೃಗತೃಷ್ಣ
- ಕಾಂತಾರ ಒಂದು ದಂತ ಕಥೆ ಅಧ್ಯಾಯ ಒಂದು
- ನಮ್ ಸಾಲಿ
- ರಾವಣ ರಾಜ್ಯದಲ್ಲಿ ನವದಂಪತಿಗಳು
- ಅಜ್ಞಾತವಾಸಿ
- 4 ಬೈ 4
- ಖಾಲಿ ಪುಟ
- ಶ್ರೀ ಜಗನ್ನಾಥ ದಾಸರು ಭಾಗ 2
- ಫೈರ್ ಫ್ಲೈ
- ವನ್ಯಾ
- ಹಕ್ಕಿಗಾಗಿ

ಚಟಿಕೆ ಸುದ್ದಿ

ಉತ್ತರ ಪ್ರದೇಶ: ಜನಭವನವಾದ ರಾಜಭವನ

ಲಖನೌ (ಪಿಟಿಐ): ಉತ್ತರ ಪ್ರದೇಶ ರಾಜ್ಯಪಾಲರ ಅಧಿಕೃತ ನಿವಾಸ ರಾಜಭವನಕ್ಕೆ ಜನ ಭವನ ಎಂದು ಮರುನಾಮಕರಣ ಮಾಡಲಾಗಿದೆ.

ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದಂತೆ ಹೆಸರು ಬದಲಾವಣೆ ಮಾಡಲಾಗಿದೆ. ಇದು ತಕ್ಷಣದಿಂದ ಜಾರಿಯಾಗಲಿದೆ ಎಂದು ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರ ಕಚೇರಿ ತಿಳಿಸಿದೆ.

ಅಸ್ಸಾಂ: ಘರ್ಷಣೆ ನಿಯಂತ್ರಣಕ್ಕೆ ಸೇನೆ ನಿಯೋಜನೆ

ಗುವಾಹಟಿ (ಪಿಟಿಐ): ಬೋಡೊ ಮತ್ತು ಆದಿವಾಸಿಗಳ ನಡುವೆ ಘರ್ಷಣೆ ನಡೆದಿರುವ ಅಸ್ಸಾಂನ ಕೊಕ್ರಾಝಾರ್‌ನ ಸೂಕ್ಷ್ಮಪ್ರದೇಶಗಳಲ್ಲಿ ಸೇನೆಗಳು ಬೀಡುಬಿಟ್ಟಿವೆ.

ಸಂಘರ್ಷ ಪೀಡಿತ ಕರಿಗ್ರಾಮ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಭದ್ರತಾ ಸಿಬ್ಬಂದಿ ಮಂಗಳವಾರ ರಾತ್ರಿ ಗಸ್ತು ನಡೆಸಿದ್ದಾರೆ. ಬುಧವಾರ ಪಥಸಂಚಲನ ನಡೆಸಲಾಯಿತು ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

ಭಯಭೀತರಾಗಿರುವ ಜನರಿಗಾಗಿ ಸ್ಥಳೀಯ ಶಾಲೆಗಳಲ್ಲಿ ಸಂತ್ರಸ್ತರ ಶಿಬಿರಗಳನ್ನು ಆರಂಭಿಸಲಾಗಿದೆ.

‘ಎಸ್‌ಐಆರ್ ನಿಷ್ಪಕ್ಷಪಾತವಾಗಿರಲಿ’

ಸಹಜ ನ್ಯಾಯ ತತ್ವಗಳಿಗೆ ಅನುಗುಣವಾಗಿ ಇರಬೇಕು: ಸುಪ್ರೀಂ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಸಹಜ ನ್ಯಾಯ ತತ್ವಗಳಿಗೆ ಅನುಗುಣವಾಗಿ ಇರಬೇಕು. ಈ ಪ್ರಕ್ರಿಯೆ ನ್ಯಾಯೋಚಿತವಾಗಿ ಹಾಗೂ ನಿಷ್ಪಕ್ಷಪಾತದಿಂದ ಕೂಡಿರಬೇಕು ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಎಸ್‌ಐಆರ್‌ನ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ವೇಳೆ, ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ ಈ ಮಾತು ಹೇಳಿದೆ.

ಚುನಾವಣಾ ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ರಾಕೇಶ್ ದ್ವಿವೇದಿ,‘ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 21(3) ಅಡಿ, ಯಾವುದೇ ಕ್ಷೇತ್ರದಲ್ಲಿ ಅಥವಾ ಕ್ಷೇತ್ರದ ಒಂದು ಭಾಗದಲ್ಲಿ ಯಾವುದೇ ಸಮಯದಲ್ಲಿಯಾದರೂ ಎಸ್‌ಐಆರ್ ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗ ಹೊಂದಿದೆ’ ಎಂದು ಪೀಠಕ್ಕೆ ತಿಳಿಸಿದರು.

ಕಾಯ್ದೆಯ ಸೆಕ್ಷನ್ 21(3) ಉಲ್ಲೇಖಿಸಿದ ಪೀಠ,‘ಎಸ್‌ಐಆರ್ ನಡೆಸುವ ವೇಳೆ ಆಯೋಗವು ಪಾರದರ್ಶಕವಾಗಿ ನಡೆದುಕೊಳ್ಳಬೇಕು ಎಂಬುದಾಗಿ ನಾವು ನಿರೀಕ್ಷೆ ಮಾಡಬಾರದೇಕೆ’ ಎಂದು ಪ್ರಶ್ನಿಸಿತು.

‘ಮತದಾರರ ಪಟ್ಟಿಯ ಪರಿಷ್ಕರಣೆಗೆ ಅನುಸರಿಸುವ ವಿಧಾನ ಹಾಗೂ ಕಾರಣಗಳು ನ್ಯಾಯೋಚಿತವಾಗಿ ಹಾಗೂ ನಿಷ್ಪಕ್ಷಪಾತವಾಗಿದ್ದಾಗ, ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನ್ನು ಮೀರಿ ಕ್ರಮ ಕೈಗೊಳ್ಳುವುದಕ್ಕೆ ಈ ಕಾಯ್ದೆ ಆಯೋಗಕ್ಕೆ ಅನುಮತಿ ನೀಡುತ್ತದೆ’ ಎಂದೂ ದ್ವಿವೇದಿ ತಿಳಿಸಿದರು.

ಆಗ ಇದಕ್ಕೆ ಪ್ರತಿಕ್ರಿಯಿಸಿದ ಪೀಠ,‘ಎಸ್‌ಐಆರ್ ನಡೆಸುವ ವಿಧಾನವು ನಿಷ್ಪಕ್ಷಪಾತದಿಂದ ಕೂಡಿರಬೇಕು’ ಎಂದು ಹೇಳಿತು.

‘ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಲ್ಲಿ ಹಲವು ತಾರ್ಕಿಕ ವ್ಯತ್ಯಾಸಗಳು ಕಂಡುಬಂದಿವೆ. ಇಬ್ಬರು ಮತದಾರರು 200ಕ್ಕೂ ಹೆಚ್ಚು ಮಕ್ಕಳು ಹೊಂದಿದ್ದಾರೆ ಎಂಬ ಮಾಹಿತಿ ಇದೆ. ಏಳು ಮತದಾರರು ತಲಾ 100 ಮಕ್ಕಳನ್ನು, 10 ಮತದಾರರು ತಲಾ 50ಕ್ಕೂ ಹೆಚ್ಚು ಮಕ್ಕಳನ್ನು ಹೊಂದಿದ್ದಾರೆ ಎಂಬ ಮಾಹಿತಿ ಇದೆ’ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಚುನಾವಣಾ ಆಯೋಗ ತಿಳಿಸಿದೆ.

ಆಕ್ಷೇಪ ವ್ಯಕ್ತವಾಗಿಲ್ಲ: ಸಿಇಸಿ

ಪ್ರಜಾವಾಣಿ ವಾರ್ತೆ


ಜ್ಞಾನೇಶ್ ಕುಮಾರ್

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ (ಸಿಇಸಿ) ಬಿಹಾರದಲ್ಲಿನ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ನಂತರ ನಡೆದ ಚುನಾವಣೆಯನ್ನು ಉಲ್ಲೇಖಿಸಿ ಭಾರತದ ಚುನಾವಣಾ ವ್ಯವಸ್ಥೆಯ ಕುರಿತು ಅಂತರರಾಷ್ಟ್ರೀಯ ಚುನಾವಣಾ ನಿರ್ವಹಣಾ ಸಂಸ್ಥೆಗಳಿಗೆ ಬುಧವಾರ ವಿವರಿಸಿದರು.

ಎಸ್‌ಐಆರ್ ನಂತರ ಬಿಹಾರದಲ್ಲಿ ಚುನಾವಣೆ ನಡೆದಿದ್ದು, ಮತದಾರರ ಅಂತಿಮ ಪಟ್ಟಿ ಸಿದ್ಧವಾದ ನಂತರ ಯಾವುದೇ ಆಕ್ಷೇಪಣೆ ಸಲ್ಲಿಕೆಯಾಗಿಲ್ಲ. ಮರುಮತದಾನದ ಅಗತ್ಯವೂ ಎದುರಾಗಿಲ್ಲ ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವ ಮತ್ತು ಚುನಾವಣಾ ನಿರ್ವಹಣೆ ಕುರಿತ 2026ನೇ ಸಾಲಿನ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮತದಾರರ ಪಟ್ಟಿ ಸಿದ್ಧಪಡಿಸಲು ಸಹಾಯ ಮಾಡುವ ಮತಗಟ್ಟೆ ಅಧಿಕಾರಿಗಳು, ತಳಮಟ್ಟದ ಕಾರ್ಯಕರ್ತರು ದೇಶದ ಚುನಾಯಿತ ಪ್ರಜಾಪ್ರಭುತ್ವದ ಆಧಾರಸ್ತಂಭಗಳು ಎಂದು ಹೇಳಿದರು.

‘ಬಿಹಾರದಲ್ಲಿ ಕೆಲವು ತಿಂಗಳ ಹಿಂದೆ ಚುನಾವಣೆ ನಡೆಯಿತು. ಮೊದಲ ಹಂತದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ನಡೆಸಲಾಯಿತು. ಚುನಾವಣಾ ಕಾನೂನು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಪ್ರಕ್ರಿಯೆ ನಡೆಯಿತು. ಪರಿಣಾಮವಾಗಿ ಅರ್ಹ ಮತದಾರರ ಹೆಸರು ಪಟ್ಟಿಗೆ ಸೇರ್ಪಡೆಯಾಯಿತು ಮತ್ತು ಅನರ್ಹರ ಹೆಸರನ್ನು ಅಳಿಸಿಹಾಕಲಾಯಿತು. ಮತಗಟ್ಟೆ ಅಧಿಕಾರಿಗಳು, ಚುನಾವಣಾ ನೋಂದಣಾಧಿಕಾರಿಗಳು ಮತ್ತು ಬಿಹಾರದ ಮುಖ್ಯ ಚುನಾವಣಾ ಅಧಿಕಾರಿ ಅವರು ದಕ್ಷತೆಯಿಂದ ಕಾರ್ಯ ನಿರ್ವಹಿಸಿದರು. ಇದೆಲ್ಲರ ಪರಿಣಾಮವಾಗಿ ಚುನಾವಣೆ ಬಳಿಕ ಒಂದೂ ಆಕ್ಷೇಪ ವ್ಯಕ್ತವಾಗಿಲ್ಲ’ ಎಂದು ಹೇಳಿದರು. ‘ಬಿಹಾರದಲ್ಲಿ ಸುಮಾರು ಒಂದು ಲಕ್ಷ ಮತಗಟ್ಟೆಗಳಿವೆ. ಹೀಗಿದ್ದರೂ ಯಾವುದೇ ಮತಗಟ್ಟೆಯಲ್ಲೂ ಮರುಮತದಾನ ನಡೆಸುವ ಪ್ರಮೇಯವೇ ಬರಲಿಲ್ಲ’ ಎಂದು ತಿಳಿಸಿದರು.

ತುರ್ತು ಭೂಸ್ಪರ್ಶ: ಪೈಲಟ್ ಸುರಕ್ಷಿತ

ನವದೆಹಲಿ/ಪ್ರಯಾಗರಾಜ್ (ಪಿಟಿಐ): ಭಾರತೀಯ ವಾಯುಪಡೆಗೆ ಸೇರಿದ ಎರಡು ಆಸನಗಳ ಹಗುರ ವಿಮಾನ ಉತ್ತರ ಪ್ರದೇಶದ ಪ್ರಯಾಗರಾಜ್ ಹೊರವಲಯದ ಕೆರೆಗೆ ಬುಧವಾರ ತುರ್ತು ಭೂಸ್ಪರ್ಶ ಮಾಡಿದೆ.

ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ತುರ್ತು ಭೂಸ್ಪರ್ಶ ಮಾಡಿದ್ದು, ಅದರಲ್ಲಿದ್ದ ಇಬ್ಬರು ಪೈಲಟ್‌ಗಳು ಸುರಕ್ಷಿತವಾಗಿದ್ದಾರೆ. ಘಟನೆ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತರಬೇತಿ ಮತ್ತು ಸಮೀಕ್ಷೆ ಉದ್ದೇಶಗಳಿಗೆ ಈ ಹಗುರ ವಿಮಾನಗಳನ್ನು ಬಳಕೆ ಮಾಡಲಾಗುತ್ತದೆ.

‘ಬಮ್ರೌಲಿಯ ವಾಯುಪಡೆ ಕೇಂದ್ರದಿಂದ ಬುಧವಾರ ಮಧ್ಯಾಹ್ನ ಎಂದಿನಂತೆ ಅಭ್ಯಾಸಕ್ಕಾಗಿ ತೆರಳಿದ್ದ ವಿಮಾನ ಅವಘಡಕ್ಕೀಡಾಗಿದೆ. ನಗರ ಹೊರ ವಲಯದ ಕೆರೆಯ ಆವರಣದಲ್ಲಿ ವಿಮಾನ ಪತ್ತೆಯಾಗಿದೆ. ಯಾವುದೇ ಜೀವ ಹಾನಿ ಸಂಭವಿಸಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ಕೆರೆಗೆ ತುರ್ತು ಭೂಸ್ಪರ್ಶ ಮಾಡಿರುವ ಭಾರತೀಯ ವಾಯುಪಡೆಯ ಹಗುರ ವಿಮಾನ — ಪಿಟಿಐ ಚಿತ್ರ

ಉದಯನಿಧಿಗೆ ಕೋರ್ಟ್ ತರಾಟೆ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ್ದ ಮಾಳವೀಯ, ‘ದೇಶದ ಜನಸಂಖ್ಯೆಯ ಶೇ 80ರಷ್ಟು ಜನರು ಸನಾತನ ಧರ್ಮವನ್ನು ಪಾಲಿಸುತ್ತಿದ್ದಾರೆ. ಉದಯನಿಧಿ ಅವರ ಹೇಳಿಕೆಯು ಈ ಧರ್ಮ ಪಾಲನೆ ಮಾಡುವವರ ಸಾಮೂಹಿಕ ಹತ್ಯೆಗೆ ಕರೆ ಕೊಟ್ಟಂತೆ ಆಗಿದೆ’ ಎಂದು ಹೇಳಿದ್ದರು.

ಈ ಕುರಿತು ತಿರುಚಿರಾಪಳ್ಳಿಯ ಡಿಎಂಕೆ ಪದಾಧಿಕಾರಿ ಕೆಎವಿ ದಿನಕರನ್ ನೀಡಿದ ದೂರು ಆಧರಿಸಿ ಮಾಳವೀಯ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ವಿಚಾರಣೆ ವೇಳೆ, ‘ಒಂದು ವೇಳೆ, ವಿಚಾರಣೆ ಮುಂದುವರಿದಲ್ಲಿ ಅದರಿಂದ ಅರ್ಜಿದಾರರು ಸರಿಪಡಿಸಲಾಗದ ಹಾನಿ, ನೋವು ಅನುಭವಿಸಬೇಕಾಗುತ್ತದೆ. ಅವರ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದತಿಗೆ ಅರ್ಜಿದಾರ ಅರ್ಹರಾಗಿದ್ದಾರೆ’ ಎಂದು ನ್ಯಾಯಪೀಠ ಹೇಳಿದೆ.

‘ದ್ವೇಷ ಭಾಷಣ ಮಾಡುವ ವ್ಯಕ್ತಿ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ, ಇಂತಹ ಭಾಷಣ ಕುರಿತು ಪ್ರತಿಕ್ರಿಯಿಸುವವರು ಕಾನೂನಿನ ಬಿಸಿ ಅನುಭವಿಸಬೇಕು ಎಂಬಂತಹ ಸನ್ನಿವೇಶ ಈಗ ಇದೆ. ಈ ಮಾತನ್ನು ಬಹಳ ನೋವಿನಿಂದ ಹೇಳಬೇಕಿದೆ’ ಎಂದು ನ್ಯಾಯಾಲಯ ಹೇಳಿದೆ.

‘ಈ ಪ್ರಕರಣದಲ್ಲಿ, ದ್ವೇಷ ಭಾಷಣ ಮಾಡಿರುವ ಉಪಮುಖ್ಯಮಂತ್ರಿ ವಿರುದ್ಧ ತಮಿಳುನಾಡಿನಲ್ಲಿ ಪ್ರಕರಣ ದಾಖಲಾಗಿಲ್ಲ. ಬೇರೆ ಕೆಲ ರಾಜ್ಯಗಳಲ್ಲಿ ಪ್ರಕರಣಗಳು ದಾಖಲಾಗಿವೆ’ ಎಂದು ಆದೇಶದಲ್ಲಿ ಹೇಳಲಾಗಿದೆ.

‘ಮಹಾತ್ಮ ಗಾಂಧಿ, ಮಾಜಿ ಮುಖ್ಯಮಂತ್ರಿ ಕೆ.ಕಾಮರಾಜ ಸೇರಿ ಅನೇಕ ಗಣ್ಯರು ಸನಾತನ ಧರ್ಮ ವಿರುದ್ಧ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಸನಾತನ ಧರ್ಮ ಅನುಯಾಯಿಗಳು ಪಾಲನೆ ಮಾಡುತ್ತಿದ್ದ ಕೆಲ ಅನಗತ್ಯ ಆಚರಣೆಗಳನ್ನು ಕೈಬಿಡಬೇಕು ಎಂಬುದಷ್ಟೆ ಅವರ ಬಯಕೆಯಾಗಿತ್ತು. ಇ.ವಿ.ರಾಮಸ್ವಾಮಿ ಅಲಿಯಾಸ್ ಪೆರಿಯಾರ್ ಹೊರತುಪಡಿಸಿದಂತೆ ಇತರ ಮಹನೀಯರು ಸನಾತನ ಧರ್ಮದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿಲ್ಲ’ ಎಂಬ ಪ್ರತಿವಾದಿಯ ಹೇಳಿಕೆಯನ್ನು ಸಹ ನ್ಯಾಯಾಲಯ ಪರಿಗಣಿಸಿದೆ.

‘ಅಧಿಕಾರಿಗಳು ರಾಜಕೀಯದಿಂದ ದೂರ ಇರಬೇಕು. ರಾಜಕೀಯ ಪಕ್ಷವೊಂದರ ಪರ ನಿಲ್ಲುವುದು ಖಂಡನೀಯ’ ಎಂದು ಪೊಲೀಸರನ್ನು ಉದ್ದೇಶಿಸಿ ನ್ಯಾಯಮೂರ್ತಿ ಶ್ರೀಮತಿ ಹೇಳಿದರು.

ದೂರುದಾರ ಗೈರಾಗಿದ್ದರು. ಅವರ ಪರ ವಕೀಲರು ಸಹ ನ್ಯಾಯಾಲಯದಲ್ಲಿ ಹಾಜರಿರಲಿಲ್ಲ.

‘ನ್ಯಾಯಾಲಯ ಯುದ್ಧಭೂಮಿ ಆಗಲು ಬಿಡಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ವೈವಾಹಿಕ ವಿವಾದಗಳು ಸಮಾಜದ ರಚನೆಯ ಮೇಲೆ ತಕ್ಷಣವೇ ಪರಿಣಾಮ ಬೀರುತ್ತವೆ. ಹೀಗಾಗಿ ಪತಿ, ಪತ್ನಿ ಕಠಿಣ ನಿಲುವು ತೆಗೆದುಕೊಳ್ಳುವುದಕ್ಕೂ ಮುನ್ನವೇ ವಿವಾದವನ್ನು ಪರಿಹರಿಸಲು ಸಂಬಂಧಪಟ್ಟ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅದು ಎಲ್ಲರ ಕರ್ತವ್ಯ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜಗಳವಾಡುವ ದಂಪತಿ ನ್ಯಾಯಾಲಯಗಳನ್ನು ‘ಯುದ್ಧ ಭೂಮಿ’ಯಾಗಿ ಪರಿಗಣಿಸು ವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಎಚ್ಚರಿಕೆ ನೀಡಿದೆ.

ಇಂಥ ವಿವಾದಗಳನ್ನು ಬಗೆಹರಿಸಲು ಮೊಕದ್ದಮೆಗೂ ಮುನ್ನ ಮತ್ತು ಮೊಕದ್ದಮೆ ಆರಂಭವಾದ ಬಳಿಕವೂ ಮಧ್ಯಸ್ಥಿಕೆಯನ್ನು ಪರಿಶೀಲಿಸಬಹುದು ಎಂದು ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಮನಮೋಹನ್ ಅವರ ಪೀಠ ಒತ್ತಿ ಹೇಳಿದೆ.

ಮಧ್ಯಸ್ಥಿಕೆಗೆ ಸಲಹೆ

ವೈವಾಹಿಕ ವಿವಾದಗಳು ಪೊಲೀಸ್ ಠಾಣೆ ಮೆಟ್ಟಿಲೇರಿದಾಗಲೂ ಸಂಧಾನಕ್ಕೆ ಯತ್ನ ನಡೆಸಬೇಕು. ಕಕ್ಷಿದಾರರನ್ನು ಠಾಣೆಗಳಿಗೆ ಕರೆಯುವ ಬದಲು ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ಪರಿಹಾರಕ್ಕೆ ಪ್ರಯತ್ನಿಸಬೇಕು. ಒಂದು ವೇಳೆ ಕಕ್ಷಿದಾರರನ್ನು ಬಂಧಿಸಿದರೆ ವಿವಾದ ಕಗ್ಗಂಟಾಗಿ, ಬಗೆಹರಿಯಲಾಗದ ಪರಿಸ್ಥಿತಿಗೆ ಬಂದು ಬಿಡುತ್ತದೆ. ಹೀಗಾಗಿ ಎಚ್ಚರದಿಂದ ಪರಿಹರಿಸಬೇಕು ಎಂದಿದೆ.

‘ಕಕ್ಷಿದಾರರು ಪರಸ್ಪರರ ವಿರುದ್ಧ ಮೊಕದ್ದಮೆ ಹೂಡಲು ಪ್ರಾರಂಭಿಸಿದಾಗ, ವಿಶೇಷವಾಗಿ ಕ್ರಿಮಿನಲ್ ಆರೋಪಗಳಿದ್ದಾಗ್ಯೂ ಮತ್ತೆ ಒಂದಾಗುವ ಸಾಧ್ಯತೆ ತಳ್ಳಿಹಾಕಬಾರದು’ ಎಂದಿದೆ.

ಮಹಿಳೆಯೊಬ್ಬರ ಅರ್ಜಿಯ ವಿಚಾರಣೆ ವೇಳೆ ಪೀಠ ಈ ಕುರಿತು ಹೇಳಿದೆ. ವಿವಾಹದ ಬಳಿಕ 65 ದಿನಗಳು ಮಾತ್ರ ಒಟ್ಟಿಗೆ ಇದ್ದು, ಆ ನಂತರ ಪರಸ್ಪರ 40ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿರುವುದನ್ನು ಪೀಠ ಗಮನಿಸಿತು. ಪರಿಸ್ಥಿತಿ ಕೈಮೀರಿದ್ದು ಸರಿಪಡಿಸಲಾಗದ ಹಂತಕ್ಕೆ ಬಂದಿದೆ ಎಂದು ಹೇಳಿದ ಪೀಠ, ಈ ದಂಪತಿ 2012ರಲ್ಲಿ ಆದ ವಿವಾಹವನ್ನು ರದ್ದುಗೊಳಿಸಿತು.

ಸುಳ್ಳು ಸಾಕ್ಷ್ಯಾಧಾರಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಪ್ರಕರಣಗಳನ್ನು ರದ್ದುಗೊಳಿಸಿದ ಪೀಠವು, ದಶಕಕ್ಕೂ ಹೆಚ್ಚು ಕಾಲ ಮೊಕದ್ದಮೆಗಳಲ್ಲಿ ಭಾಗಿಯಾಗಿದ್ದಕ್ಕಾಗಿ ದಂಪತಿಗೆ ತಲಾ ₹ 10,000 ದಂಡ ವಿಧಿಸಿತು.

ಎಲ್ಲ ಜಿಲ್ಲೆಗಳಲ್ಲಿಯೂ ವ್ಯಾಜ್ಯ ಪೂರ್ವ ಮಧ್ಯಸ್ಥಿಕೆ ಕೇಂದ್ರಗಳಿವೆ. ಇವುಗಳಲ್ಲಿಯೇ ಹಲವು ಪ್ರಕರಣಗಳು ಇತ್ಯರ್ಥವಾಗಿ, ದಂಪತಿ ಒಟ್ಟಿಗೆ ವಾಸಿಸುತ್ತಿದ್ದಾರೆ. ಎಂದು ನ್ಯಾಯಪೀಠ ಹೇಳಿದೆ.

ಪೊಲೀಸರಿಂದ ಮಾಧ್ಯಮಗೋಷ್ಠಿ ನೀತಿ ರೂಪಿಸಲು ಸುಪ್ರೀಂ ಸೂಚನೆ

ನವದೆಹಲಿ (ಪಿಟಿಐ): ತನಿಖೆ ಪ್ರಗತಿಯಲ್ಲಿರುವ ಪ್ರಕರಣಗಳ ಕುರಿತು ಪೊಲೀಸರು ಮಾಧ್ಯಮಗಳಿಗೆ ಮಾಹಿತಿ ನೀಡುವ ವೇಳೆ ಅನುಸರಿಸಬೇಕಾದ ನಿಯಮಗಳಿಗೆ ಸಂಬಂಧಿಸಿ ನೀತಿಯೊಂದನ್ನು ರೂಪಿಸುವಂತೆ ಎಲ್ಲ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಈ ವಿಚಾರಕ್ಕೆ ಸಂಬಂಧಿಸಿ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕಾರ ನೀಡುವುದಕ್ಕಾಗಿ ನೇಮಕವಾದ ವಕೀಲ) ಸಿದ್ಧಪಡಿಸಿರುವ ಕೈಪಿಡಿಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಹಾಗೂ ಎನ್. ಕೋಟೀಶ್ವರ ಸಿಂಗ್ ಅವರು ಇದ್ದ ನ್ಯಾಯಪೀಠ ಈ ಸೂಚನೆ ನೀಡಿದೆ.

‘ಅಮಿಕಸ್ ಕ್ಯೂರಿ ಗೋಪಾಲ ಶಂಕರನಾರಾಯಣನ್ ಅವರು ಬಹಳ ಶ್ರಮಪಟ್ಟಿದ್ದಾರೆ. ಕೇಂದ್ರ ಸರ್ಕಾರದ ಸಲಹೆಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಢಿಯಲ್ಲಿರುವ ವಿಧಾನಗಳನ್ನು ಅವಲೋಕಿಸಿದ ಬಳಿಕ ಅವರು ಈ ಕೈಪಿಡಿಯನ್ನು ಸಿದ್ಧಪಡಿಸಿದ್ದಾರೆ’ ಎಂದು ಜನವರಿ 15ರಂದು ಹೊರಡಿಸಿರುವ ಆದೇಶದಲ್ಲಿ ನ್ಯಾಯಪೀಠ ಹೇಳಿದೆ.

ಅಪರಾಧ ಪ್ರಕರಣಗಳ ಕುರಿತು ಪೊಲೀಸ್ ಅಧಿಕಾರಿಗಳು ಮಾಧ್ಯಮಗಳಿಗೆ ಮಾಹಿತಿ ನೀಡುವುದಕ್ಕೆ ಸಂಬಂಧಿಸಿ ಸಮಗ್ರ ಕೈಪಿಡಿ ಸಿದ್ಧಪಡಿಸುವಂತೆ ಗೃಹ ಇಲಾಖೆಗೆ ಸುಪ್ರೀಂ ಕೋರ್ಟ್ 2023ರಲ್ಲಿ ನಿರ್ದೇಶನ ನೀಡಿತ್ತು.

‘ಮಾಧ್ಯಮಗಳು ಪಕ್ಷಪಾತದಿಂದ ಕೂಡಿದ ವರದಿ ಪ್ರಕಟಿಸುವುದರಿಂದ, ವ್ಯಕ್ತಿಯೊಬ್ಬ ಅಪರಾಧ ಎಸಗಿದ್ದಾನೆ ಎಂಬ ಶಂಕೆ ಸಾರ್ವಜನಿಕರಲ್ಲಿ ಮೂಡುತ್ತದೆ. ಮಾಧ್ಯಮಗಳು ಪ್ರಕಟಿಸುವ ವರದಿಗಳಿಂದ ಸಂತ್ರಸ್ತ ವ್ಯಕ್ತಿಯ ಖಾಸಗಿತನದ ಉಲ್ಲಂಘನೆಯೂ ಆಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಆಗ ಅಭಿಪ್ರಾಯಪಟ್ಟಿತ್ತು.

100 ಶ್ವಾನಗಳಿಗೆ ವಿಷಪ್ರಾಶನ: ಪ್ರಕರಣ ದಾಖಲು


ಹೈದರಾಬಾದ್ (ಪಿಟಿಐ): ಬೀದಿ ನಾಯಿಗಳನ್ನು ಕೊಲ್ಲುವ ಉದ್ದೇಶದಿಂದ ಸುಮಾರು 100 ನಾಯಿಗಳಿಗೆ ವಿಷಕಾರಿ ಚುಚ್ಚುಮದ್ದು ನೀಡಿರುವ ಘಟನೆ ಇಲ್ಲಿನ ಯಾಚಾರಂ ಗ್ರಾಮದಲ್ಲಿ ನಡೆದಿದೆ.

ಈ ಕೃತ್ಯದಲ್ಲಿ ಗ್ರಾಮದ ಸರಪಂಚ್ ಹಾಗೂ ಇತರ ಇಬ್ಬರು ವ್ಯಕ್ತಿಗಳ ಕೈವಾಡ ಇರುವ ಆರೋಪ ಕೇಳಿಬಂದಿದ್ದು, ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸ್ಟ್ರೇ ಅನಿಮಲ್ ಫೌಂಡೇಷನ್ ಆಫ್ ಇಂಡಿಯಾದ (ಎಸ್‌ಎಎಫ್‌ಐ) ಪ್ರಾಣಿಗಳ ಹಕ್ಕುಗಳ ಹೋರಾಟಗಾರ ಅದುಲಪುರಂ ಗೌತಮ್ ಅವರು ಇದಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದು, ಜನವರಿ 19ರಂದು ಶ್ವಾನಗಳಿಗೆ ವಿಷಕಾರಿ ಚುಚ್ಚುಮದ್ದು ನೀಡಲಾಗಿದೆ ಎಂದಿದ್ದಾರೆ.

ಪ್ರಾಣಿಗಳ ವಿರುದ್ಧದ ದೌರ್ಜನ್ಯ (ತಡೆ) ಕಾಯ್ದೆ ಅನ್ವಯ ಹಾಗೂ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಸರಪಂಚ್, ಕಾರ್ಯದರ್ಶಿ ಹಾಗೂ ವಾರ್ಡ್ ಸದಸ್ಯನ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

600 ಶ್ವಾನಗಳ ಹತ್ಯಾಕಾಂಡ: ಕಳವಳ




ತೆಲಂಗಾಣದ ಗ್ರಾಮೀಣ ಭಾಗದಲ್ಲಿ ಬೀದಿ ನಾಯಿಗಳನ್ನು ಕೊಲ್ಲುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬಗ್ಗೆ ಪ್ರಾಣಿ ದಯಾ ಸಂಘಟನೆಗಳ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗಿನ ದಿನಗಳಲ್ಲಿ ವಿಷಕಾರಿ ಚುಚ್ಚುಮದ್ದು ನೀಡಿ ಸುಮಾರು 600 ಶ್ವಾನಗಳನ್ನು ಕೊಲ್ಲಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

ಯಾಚಾರಂನಲ್ಲಿ 100, ಧರ್ಮಪುರಿ ಎಂಬಲ್ಲಿ 50, ಹನುಮ ಕೊಂಡ ಜಿಲ್ಲೆಯಲ್ಲಿ 300 ಬೀದಿ ನಾಯಿಗಳನ್ನು ಕೊಲ್ಲಲಾಗಿದೆ. ಕಾಮರೆಡ್ಡಿ ಜಿಲ್ಲೆಯಲ್ಲಿ ಎರಡು–ಮೂರು ದಿನಗಳಲ್ಲೇ 200 ಬೀದಿ ನಾಯಿಗಳನ್ನು ಹತ್ಯೆಗೈಯ್ಯಲಾಗಿದೆ ಎಂದು ಹೋರಾಟಗಾರ ಗೌತಮ್ ಹೇಳಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಅದೃಷ್ಟವೆನ್ನುವುದು ಪ್ರಯತ್ನವೆಂಬ ತಾಯಿ ಹಾಗೂ ಅವಕಾಶ ಎಂಬ ತಂದೆಗೆ ಜನಿಸುವ ಮಗು.

-ಗುರುನಾನಕ್

ಸಂಪಾದಕೀಯ

ಪೊಲೀಸ್: ಸಾಂಸ್ಥಿಕ ಶಿಸ್ತು ಕುಸಿತ ಸಾರ್ವಜನಿಕ ವಿಶ್ವಾಸಾರ್ಹತೆಗೆ ಧಕ್ಕೆ

ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎನ್ನಲಾದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಹಿನ್ನೆಲೆಯಲ್ಲಿ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಕೆ. ರಾಮಚಂದ್ರ ರಾವ್ ಅವರನ್ನು ರಾಜ್ಯ ಸರ್ಕಾರ ಅಮಾನತುಗೊಳಿಸಿದೆ. ಈ ಬೆಳವಣಿಗೆ ಕರ್ನಾಟಕ ಪೊಲೀಸ್ ವ್ಯವಸ್ಥೆಗೆ ಆಘಾತ ತರುವ ವಿದ್ಯಮಾನವಾಗಿದೆ. ಸೋರಿಕೆಯಾಗಿರುವ ವಿಡಿಯೊಗಳಲ್ಲಿ ಸಮವಸ್ತ್ರದಲ್ಲಿರುವ ಅಧಿಕಾರಿಯು ತಮ್ಮ ಅಧಿಕೃತ ಕಚೇರಿಯಲ್ಲಿ ಮಹಿಳೆಯೊಂದಿಗೆ ಖಾಸಗಿ ಕ್ಷಣಗಳನ್ನು ಕಳೆಯುತ್ತಿರುವ ಸನ್ನಿವೇಶಗಳಿವೆ. ಈ ಕೃತ್ಯಗಳು ಪರಸ್ಪರ ಸಮ್ಮತಿಯಿಂದ ನಡೆದಿರುವಂತೆ ಕಾಣಿಸಿದರೂ, ಸಂಭವಿಸಿರುವ ಘಟನೆ ನೈತಿಕವಾಗಿ ಹಾಗೂ ಕಾನೂನಿನ ದೃಷ್ಟಿಯಿಂದ ಒಪ್ಪಿಕೊಳ್ಳುವಂತಹದ್ದಲ್ಲ. ಅಖಿಲ ಭಾರತ ಸೇವಾ (ನಡವಳಿಕೆ) ನಿಯಮಾವಳಿಯ 'ನಿಯಮ 3', ಸೇವೆಯಲ್ಲಿರುವ ವ್ಯಕ್ತಿ ಉನ್ನತ ನೈತಿಕ ಮಾನದಂಡಗಳು, ಸಮಗ್ರತೆ ಮತ್ತು ಪ್ರಾಮಾಣಿಕತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳುತ್ತದೆ. ಸಾರ್ವಜನಿಕ ಸೇವೆಯಲ್ಲಿ ಇರುವವರು ಅನುಚಿತ ನಡವಳಿಕೆಯಿಂದ ದೂರವಿರಬೇಕು ಎಂದೂ ನಿಯಮ ಹೇಳುತ್ತದೆ. ಈ ನಿಯಮಕ್ಕೆ ವಿರುದ್ಧವಾಗಿರುವ ಡಿಜಿಪಿ ಅವರ ನಡವಳಿಕೆ ನೈತಿಕ ಅಧಃಪತನದ ಸಂಕೇತವಾಗಿದೆ ಹಾಗೂ ಸೇವಾ ನಿಯಮಾವಳಿಯ ಗಂಭೀರ ಉಲ್ಲಂಘನೆಯಾಗಿದೆ. ಇಂತಹದ್ದೇ ನಡವಳಿಕೆಯ ಕಾರಣದಿಂದಾಗಿ ಅಲ್ಲದಿದ್ದರೂ, ಇದೇ ನಿಯಮದ ಅನ್ವಯ ಬಳ್ಳಾರಿಯ ಎಸ್‌ಪಿ ಪವನ್ ನೆಜ್ಜೂರ್ ಅವರನ್ನು ಇತ್ತೀಚೆಗಷ್ಟೇ ಅಮಾನತುಗೊಳಿಸಲಾಗಿತ್ತು. ಈ ಪ್ರತ್ಯೇಕ ಪ್ರಕರಣಗಳು, ಒಟ್ಟಾರೆ ಪೊಲೀಸ್ ಇಲಾಖೆಯಲ್ಲಿನ ಸಾಂಸ್ಥಿಕ ಶಿಸ್ತಿನ ಕುಸಿತವನ್ನು ಸೂಚಿಸುವಂತಿವೆ.



ಪೊಲೀಸ್ ಇಲಾಖೆಯಲ್ಲಿ ದುರ್ವರ್ತನೆ ಹಾಗೂ ಅಪರಾಧ ಪ್ರವೃತ್ತಿ ಹೆಚ್ಚುತ್ತಿರುವುದು ದುರದೃಷ್ಟಕರ. ಈ ಬೆಳವಣಿಗೆ ಇಲಾಖೆಯಲ್ಲಿನ ಸಾಂಸ್ಥಿಕ ಶಿಸ್ತಿನ ಕುಸಿತದ ಸಂಕೇತವಾಗಿದೆ.

ರಾಜಕಾರಣಿಗಳ ಅನೈತಿಕ ವರ್ತನೆಯ ವಿಡಿಯೊಗಳು ರಾಜ್ಯಕ್ಕೆ ಅಪರೂಪವೇನೂ ಅಲ್ಲ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಕೆಲವು ರಾಜಕಾರಣಿಗಳ ಖಾಸಗಿ ಕ್ಷಣಗಳ ವಿಡಿಯೊಗಳು ಬಹಿರಂಗಗೊಂಡಿವೆ. ತಂತ್ರಜ್ಞಾನ ಬಳಸಿ ತಿರುಚಿದ ವಿಡಿಯೊಗಳು ಹಾಗೂ ಕೃತಕ ಬುದ್ಧಿಮತ್ತೆ ಬಳಸಿ ರೂಪಿಸಿದ ವಿಡಿಯೊಗಳು ಎಂದು ಹೇಳುವ ಮೂಲಕ ರಾಜಕಾರಣಿಗಳು ತಮ್ಮ ವಿರುದ್ಧದ ಆರೋಪಗಳಿಂದ ಪಾರಾಗಿದ್ದಾರೆ. ಪ್ರಸ್ತುತ, ಡಿಜಿಪಿ ರಾಮಚಂದ್ರ ರಾವ್ ಅವರು ಕೂಡ ಇದೇ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಆದರೆ, ಇಂಥ ವಾದದಲ್ಲಿ ಇರಬಹುದಾದ ಪೊಳ್ಳುತನ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಸಾಬೀತಾಗಿದೆ. ಅತ್ಯಾಧುನಿಕ ವಿಧಿವಿಜ್ಞಾನ ತಂತ್ರಜ್ಞಾನ ಬಳಸಿ, ಆರೋಪಿಯ ಅಪರಾಧ ಕೃತ್ಯಗಳನ್ನು ಸಂಶಯಕ್ಕೆ ಆಸ್ಪದವಿಲ್ಲದಂತೆ ಪೊಲೀಸರು ಸಾಬೀತುಪಡಿಸಿದ್ದಾರೆ. ಆ ಪ್ರಕರಣದಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆಯೂ ಆಗಿದೆ. ಆ ಕಠಿಣ ಪರಿಶೋಧನೆಯ ತನಿಖಾ ವಿಧಾನವನ್ನು, ರಾವ್ ಅವರ ಪ್ರಕರಣದಲ್ಲೂ ಅನುಸರಿಸುವ ಮೂಲಕ ವಿಡಿಯೊಗಳ ಅಸಲೀತನವನ್ನು ಒರೆಗೆ ಹಚ್ಚಬಹುದಾಗಿದೆ. ಈ ಅಧಿಕಾರಿ ವಿವಾದಾತೀತರೇನೂ ಅಲ್ಲ. 2014ರಲ್ಲಿ ಬೆಂಗಳೂರು ದಕ್ಷಿಣ ವಲಯದ ಐಜಿಪಿ ಆಗಿದ್ದಾಗ, ನಗದು ವಶ ಪ್ರಕರಣವೊಂದರಲ್ಲಿ ಇವರ ಹೆಸರು ಪ್ರಸ್ತಾಪವಾಗಿತ್ತು. ಕೇರಳಕ್ಕೆ ಬಸ್ಸಿನಲ್ಲಿ ಅನಧಿಕೃತವಾಗಿ ಸಾಗಿಸುತ್ತಿದ್ದ ₹2.25 ಕೋಟಿ ವಶಪಡಿಸಿಕೊಂಡಿದ್ದರೂ, ಎಫ್‌ಐಆರ್‌ನಲ್ಲಿ ₹20 ಲಕ್ಷವನ್ನಷ್ಟೇ ತೋರಿಸಲಾಗಿದೆ ಎಂದು ಹೇಳಲಾಗಿತ್ತು. ಪೊಲೀಸ್ ಪ್ರೋಟೋಕಾಲ್ ದುರುಪಯೋಗದೊಂದಿಗೆ ಚಿನ್ನ ಕಳ್ಳಸಾಗಣೆಯ ಆರೋಪದಲ್ಲಿ ಅವರ ಮಲಮಗಳನ್ನು ಇತ್ತೀಚೆಗಷ್ಟೇ ಬಂಧಿಸಲಾಗಿದೆ. ಈ ಪ್ರಕರಣಗಳು ಡಿಜಿಪಿ ಅವರ ಮೇಲಿನ ಪ್ರಸಕ್ತ ಆರೋಪಗಳನ್ನು ಹೆಚ್ಚು ಸೂಕ್ಷ್ಮವಾಗಿ ನೋಡಲು ಒತ್ತಾಯಿಸುವಂತಿವೆ.

ಉನ್ನತ ಪೊಲೀಸ್ ಅಧಿಕಾರಿಗಳ ಅಮಾನತು ಪ್ರಕರಣಗಳು ಹಾಗೂ ಪೊಲೀಸ್ ಇಲಾಖೆಯ ಕಾರ್ಯದಕ್ಷತೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಇತ್ತೀಚಿನ ಹೇಳಿಕೆಯನ್ನು ಒಟ್ಟಿಗೆ ಗಮನಿಸಬೇಕು. ಹಿರಿಯ ಪೊಲೀಸ್ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿರುವ ಮುಖ್ಯಮಂತ್ರಿ, ಕಳೆದ ವರ್ಷ 88 ಪೊಲೀಸ್ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿರುವುದನ್ನು ನಾಚಿಕೆಗೇಡು ಎಂದು ಕರೆದಿದ್ದಾರೆ. ಸ್ಥಳೀಯ ಪೊಲೀಸರ ಕಣ್ಣು ತಪ್ಪಿಸಿ ಮೈಸೂರು ಮತ್ತು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಮಾದಕ ವಸ್ತುಗಳ ದಂಧೆಯನ್ನು ಮಹಾರಾಷ್ಟ್ರ ಪೊಲೀಸರು ಪತ್ತೆಹಚ್ಚಿರುವುದರ ಬಗ್ಗೆ ಮುಜುಗರ ವ್ಯಕ್ತಪಡಿಸಿದ್ದಾರೆ. ಹಿರಿಯ ಅಧಿಕಾರಿಗಳ ದುರ್ವರ್ತನೆಯ ಕೃತ್ಯಗಳಿಗೆ ಅಮಾನತು ಮತ್ತು ಇಲಾಖಾ ತನಿಖೆಯಾಚೆಗೆ ಕಠಿಣ ದಂಡನೆ ಆಗದಿರುವುದೇ ಪೊಲೀಸ್ ಇಲಾಖೆಯಲ್ಲಿ ಸಮಸ್ಯೆಗಳ ಮುಂದುವರಿಕೆಗೆ ಮುಖ್ಯ ಕಾರಣವಾಗಿದೆ. ಪೊಲೀಸ್ ಅಧಿಕಾರಿಗಳ ಹೊಣೆಗಾರಿಕೆ ನಿರ್ಣಾಯಕ ಆಗುವುದರ ಬದಲು ಎಲ್ಲಿಯವರೆಗೆ ಐಚ್ಛಿಕವಾಗಿಯೇ ಉಳಿಯುವುದೋ ಅಲ್ಲಿಯವರೆಗೆ, ಇಲಾಖೆಯ ಮೇಲಿನ ಸಾರ್ವಜನಿಕರ ವಿಶ್ವಾಸ ಇಳಿಮುಖವಾಗಿಯೇ ಇರುತ್ತದೆ.

ಅಂಬೇಡ್ಕರ್ ವಾದ

ಅಂಬೇಡ್ಕರ್ ವಾದ ಫೋಟೊದಲ್ಲಿ ಅಲ್ಲ, ಯೋಜನೆ ಮತ್ತು ಕಾನೂನುಗಳಲ್ಲಿ ಜಾರಿಗೆ ಬರಬೇಕು.



ಚೇತನ್ 'ಅಹಿಂಸಾ', ನಟ, 'ಎಕ್ಸ್'ನಿಂದ

ಕಿಡಿನುಡಿ



ಕೈ ಬೆಚ್ಚಗೆ ಮಾಡದಿದ್ದರೆ ಸುಳ್ಳು ಪ್ರಕರಣ ದಾಖಲಿಸಿ ಟಾರ್ಗೆಟ್ ಮಾಡಲಾಗುತ್ತದೆ ಎಂದು ಮದ್ಯದಂಗಡಿ ಮಾಲೀಕರೊಬ್ಬರು ಲೋಕಾಯುಕ್ತದ ಮೆಟ್ಟಿಲೇರಿದ್ದಾರೆ. ಅಬಕಾರಿ ಇಲಾಖೆಯ ಕರ್ಮಕಾಂಡಕ್ಕೆ ಇದು ಸ್ಪಷ್ಟ ಸಾಕ್ಷಿಯಾಗಿದೆ.

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 22-1-2001

• ಭೀಮಾ ನೀರು ಹರಿಯದೆ ತೀವ್ರ ಬರದ ಪರಿಸ್ಥಿತಿ

ಕಲ್ಬುರ್ಗಿ, ಜ. 21- ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಭೀಮಾ ನದಿಗೆ ನೀರು ಹರಿಸದ ಕಾರಣ ವಿಜಾಪುರ ಮತ್ತು ಕಲ್ಬುರ್ಗಿ ಜಿಲ್ಲೆಗಳ ಸುಮಾರು 135 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ. ಕೋಟ್ಯಂತರ ರೂಪಾಯಿ ಮೌಲ್ಯದ ಬೆಳೆ ನಾಶದ ಅಂಚನ್ನು ತಲುಪಿದೆ ಎಂದು ವಸತಿ ಸಚಿವ ಖಮರುಲ್ ಇಸ್ಲಾಂ ತಿಳಿಸಿದರು.

ಐವಾನ್-ಇ-ಶಾಹಿ ಅತಿಥಿಗೃಹದಲ್ಲಿ ಭೀಮಾ ನೀರು ಹೋರಾಟ ಸಮಿತಿಯಿಂದ ಹಮ್ಮಿಕೊಂಡಿದ್ದ ಸರ್ವಪಕ್ಷಗಳ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಮಸ್ಯೆಯನ್ನು ಕಲ್ಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಚರ್ಚಿಸಿ ಮುಂದಿನ ಹೋರಾಟದ ರೂಪರೇಷೆ ರಚಿಸುವ ಬಗ್ಗೆ ಸಮಿತಿ ನಿರ್ಣಯಿಸಿತು.

• ಪೊಲೀಸರ ಕಣ್ತಪ್ಪಿಸಿ ದೇವದಾಸಿ ಪದ್ಧತಿ ಆಚರಣೆ

ರಾಯಚೂರು, ಜ. 21- ಪೊಲೀಸರ ಸರ್ಪಗಾವಲು ಮತ್ತು ವಿವಿಧ ಸಂಘಟನೆಗಳ ಪ್ರತಿಭಟನೆ ನಡುವೆ ಎಲ್ಲರ ಕಣ್ತಪ್ಪಿಸಿ ಎಂಟು ಜನ ಯುವತಿಯರು ಗೋಪ್ಯವಾಗಿ ದೇವದಾಸಿತ್ವ ಸ್ವೀಕರಿಸಿದ ಘಟನೆ ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ತೊಂಡಿಹಾಳ ಗ್ರಾಮದ ಹುಲಿಗೆಮ್ಮ ಜಾತ್ರೆಯಲ್ಲಿ ನಡೆಯಿತು.

75 ವರ್ಷಗಳ ಹಿಂದೆ

ಸೋಮವಾರ, 22-1-1951

• ಜಾರ್ಜಿಯಾದಲ್ಲಿ ವರ್ಣಭೇದ ನೀತಿ

ಜಾರ್ಜಿಯಾ, ಜ. 21- ಜಾರ್ಜಿಯಾದ ಪಾಠಶಾಲೆಗಳಲ್ಲಿ ಬಿಳಿಯ ಮತ್ತು ವರ್ಣೀಯ ವಿದ್ಯಾರ್ಥಿಗಳನ್ನು ಒಟ್ಟಿಗೆ ಸೇರಿಸಿದ್ದಲ್ಲಿ ಅಂತಹ ಪಾಠಶಾಲೆಗಳಿಗೆ ಸರ್ಕಾರ ಕೊಡುತ್ತಿರುವ ಎಲ್ಲಾ ಸಹಾಯಗಳನ್ನೂ ನಿಲ್ಲಿಸಲಾಗುವು-ದೆಂದೂ, ಈ ಅವಕಾಶ ಪಡೆಯುವ ಮಸೂದೆಯನ್ನು ಗೌರ್ನರ್ ಹೆರ್‌ಮನ್‌ತಲ್ ಮಾಡ್ಗೆಯವರು ಶಾಸನಸಭೆಗೆ ಕಳುಹಿಸಿದ್ದಾರೆ.

ಯೂನಿವರ್ಸಿಟಿಗಳಲ್ಲಿಯೂ ಇದೇ ರೀತಿಯ ಮಾರ್ಪಾಡು ಮಾಡಲಾಗಿದೆ ಎಂದು ಗೊತ್ತಾಗಿದೆ.

• ಮುಂಬೈಗೆ ಪ್ರಧಾನಿ ನೆಹರೂ ಆಗಮನ

ಮುಂಬಯಿ, ಜ. 21- ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್‌ಗೆ ತೆರಳಿದ್ದ ಪ್ರಧಾನಿ ಜವಾಹರಲಾಲ್ ಅವರು ಈ ದಿನ ಮಧ್ಯಾಹ್ನ 1 ಗಂಟೆ 40 ನಿಮಿಷಕ್ಕೆ ವಿಮಾನದ ಮೂಲಕ ಮುಂಬಯಿಗೆ ಹಿಂತಿರುಗಿ ಬಂದರು.

ಜಿಡಿಪಿ ಬೆಳೆಯುತ್ತಿದೆ! ಹೌದಾ?



ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಜಿಡಿಪಿ ಹೆಚ್ಚಾಗುತ್ತಿರುವುದು ದೇಶದ ಅಭಿವೃದ್ಧಿಯ ಸಂಕೇತ ಎನ್ನುವ ಪ್ರಮೇಯ ಗಟ್ಟಿಯಾಗಿ ಕೇಳಿಬರುತ್ತಿದೆ. ಇನ್ನೊಂದು ತುದಿಯಲ್ಲಿ, ದೇಶದಲ್ಲಿನ ಅಸಮಾನತೆ ಹೆಚ್ಚಾಗುತ್ತಿದೆ. ಭಾರತೀಯ ಸರಕುಗಳ ಖರೀದಿ ಕುಗ್ಗಿ, ಆಮದು ಹೆಚ್ಚುತ್ತಿದೆ. ಮನುಷ್ಯರ ಸ್ವಾತಂತ್ರ್ಯ ಹೆಚ್ಚಿಸುವುದಕ್ಕೆ ಗಮನಕೊಡದೆ ಹೋದರೆ, ಅಭಿವೃದ್ಧಿ ಪ್ರಕ್ರಿಯೆ ಅಪೂರ್ಣವಾಗುತ್ತದೆ.

ದೇಶದ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಡಿಪಿ) ರಾಷ್ಟ್ರದ ಪ್ರಗತಿಯ ಸಂಕೇತವಾಗಿ ನೋಡುತ್ತಿದ್ದೇವೆ. ಜಿಡಿಪಿ ಹೆಚ್ಚಾದರೆ ಸಂಭ್ರಮಿಸುತ್ತೇವೆ. ಅದು ಕುಸಿದರೆ ನಾವೂ ಕುಸಿಯುತ್ತೇವೆ. ಜಿಡಿಪಿಯನ್ನು ದೇಶದ ಅಭಿವೃದ್ಧಿಯ ಸೂಚಿಯಾಗಿ ನೋಡುವುದಕ್ಕೆ ಸಾಧ್ಯವಿಲ್ಲ ಎಂದು ಸ್ವತಃ ಈ ಪರಿಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿದ ಅರ್ಥಶಾಸ್ತ್ರಜ್ಞ ಸೈಮನ್ ಕುಜ್ನೆಟ್ಸ್ ಎಚ್ಚರಿಸಿದ್ದರು. ಆದರೆ, ಜಿಡಿಪಿ ಬೆಳೆದರೆ, ಬೆಳವಣಿಗೆಯ ಫಲ ಜನರಿಗೆ ಹರಿದು ಬರುತ್ತದೆ ಎಂದು ನಮ್ಮ ರಾಜಕೀಯ ನಾಯಕರು ಮತ್ತು ಕೆಲವು ಅರ್ಥಶಾಸ್ತ್ರಜ್ಞರು ನಮ್ಮನ್ನು ನಂಬಿಸುತ್ತಾ ಬಂದಿದ್ದಾರೆ. 'ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಿದ್ದರೆ ಜಿಡಿಪಿ ಅರ್ಥಹೀನವಾಗುತ್ತದೆ' ಎಂದು ಸ್ವತಃ ಕುಜ್ನೆಟ್ಸ್ ಹೇಳಿದ್ದರೂ, ಜಿಡಿಪಿಯನ್ನು ಪ್ರತಿಷ್ಠೆಯ ವಿಷಯ ಮಾಡಿಕೊಂಡಿದ್ದೇವೆ. ಬೇರೆ ದೇಶಗಳೊಂದಿಗೆ ಸ್ಪರ್ಧೆಗೆ ಇಳಿದಿದ್ದೇವೆ. ಅಸಮಾನತೆ ಒಂದೇ ಸಮ ಹೆಚ್ಚುತ್ತಿದೆ ಎನ್ನುತ್ತಿವೆ ಎಲ್ಲಾ ವರದಿಗಳು. ಭಾರತವು ಜಗತ್ತಿನಲ್ಲೇ ಹೆಚ್ಚು ಅಸಮಾನತೆ ಉಳ್ಳ ದೇಶವೆಂಬ ವರದಿಯೂ ಇದೆ. ಆದರೂ ಬೆಳವಣಿಗೆಯ ಫಲ ಎಲ್ಲರಿಗೂ ಹರಿದುಬರುತ್ತದೆಂಬ ಭ್ರಮೆ ಹೋಗಿಲ್ಲ.

ಸ್ವಾತಂತ್ರ್ಯಾನಂತರದ ಹಲವು ದಶಕಗಳಲ್ಲಿ, ಹಕ್ಕುಗಳು ಹಾಗೂ ಸಂಪತ್ತು ಸಮಾನವಾಗಿ ಎಲ್ಲರಿಗೂ ದಕ್ಕುವಂತಾಗುವುದು ಆರ್ಥಿಕತೆಯ ಗುರಿಯಾಗಿತ್ತು. ಇತ್ತೀಚಿನ ಒಂದೆರಡು ದಶಕಗಳಿಂದ, ಭಾರತವನ್ನು ಜಗತ್ತಿನಲ್ಲೇ ಅತಿದೊಡ್ಡ ಶಕ್ತಿಯನ್ನಾಗಿ ಬೆಳೆಸುವುದು ನಮ್ಮ ಗುರಿಯಾಗಿದೆ. ಆ ಪ್ರತಿಷ್ಠೆಯ ಮುಂದೆ ಸಾಮಾನ್ಯ ಮನುಷ್ಯನ ಹಸಿವು, ಅಸಮಾನತೆ ಗೌಣವಾಗತೊಡಗಿವೆ. ರಾಷ್ಟ್ರವನ್ನು ದೊಡ್ಡ ಶಕ್ತಿಯನ್ನಾಗಿ ಬೆಳೆಸುವ ಹಾದಿಯಲ್ಲಿ ಇವೆಲ್ಲವೂ ಅನಿವಾರ್ಯವಾದ 'ಸಣ್ಣ ತ್ಯಾಗ'ಗಳಂತೆ ಬಿಂಬಿತವಾಗುತ್ತಿವೆ. ಪ್ರಭಾತ್ ಪಟ್ನಾಯಕ್ ಇದನ್ನು 'ಜಿಡಿಪಿ ರಾಷ್ಟ್ರೀಯತೆ' ಅನ್ನುತ್ತಾರೆ. 'ಇದು ನಮ್ಮ ಗಮನವನ್ನು ಮೂಲಭೂತ ಸಮಸ್ಯೆಗಳಿಂದ ಸೆಳೆದು, ಅಮೂರ್ತ ಶಕ್ತಿಯ ಬೆನ್ನಟ್ಟಿ ಹೋಗುವಂತೆ ಮಾಡುತ್ತಿದೆ' ಎನ್ನುತ್ತಾರೆ.

ಜಿಡಿಪಿ ಅಂದಾಜಿನ ಬಗ್ಗೆಯೂ ಹಲವು ಅನುಮಾನಗಳಿವೆ. ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರರಾಗಿದ್ದ ಅರವಿಂದ್ ಸುಬ್ರಮಣಿಯನ್ ಜಿಡಿಪಿಯನ್ನು ಕನಿಷ್ಠ ಶೇ 2.5ರಷ್ಟು ಹೆಚ್ಚಾಗಿ ಅಂದಾಜು ಮಾಡಲಾಗಿದೆ ಎನ್ನುತ್ತಾರೆ. ಜಿಡಿಪಿ ಸರ್ಕಾರ ಹೇಳುವಷ್ಟು ಹೆಚ್ಚಾಗಿದ್ದರೆ ವಿದ್ಯುತ್ ಬಳಕೆ, ದ್ವಿಚಕ್ರ ಮತ್ತು ವಾಣಿಜ್ಯ ವಾಹನಗಳ ಮಾರಾಟ, ರೈಲ್ವೆ ಸರಕು ಸಾಗಣೆ, ಕೈಗಾರಿಕಾ ಉತ್ಪಾದನಾ ಸೂಚ್ಯಂಕ ಇತ್ಯಾದಿಗಳಲ್ಲೂ ಸುಮಾರಾಗಿ ಅಷ್ಟೇ ಹೆಚ್ಚಳ ಕಾಣಬೇಕಿತ್ತು. ಹಾಗೆ ಆಗಿಲ್ಲದಿರುವುದನ್ನು ತಮ್ಮ ಅಂದಾಜಿಗೆ ಸಮರ್ಥನೆಯಾಗಿ ಅವರು ಉಲ್ಲೇಖಿಸುತ್ತಾರೆ.

ಸುಬ್ರಮಣಿಯನ್ ಮಾತ್ರವಲ್ಲ, ಅನೇಕರು ಈ ಕುರಿತು ಅನುಮಾನ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಅಂತರರಾಷ್ಟ್ರೀಯ ಹಣಕಾಸು ನಿಧಿ ಕೂಡ ನಮ್ಮ ದತ್ತಾಂಶಕ್ಕೆ 'ಸಿ' ರೇಟಿಂಗ್ ನೀಡಿ ಅನುಮಾನಗಳಿಗೆ ಪುಷ್ಟಿ ನೀಡಿದೆ. ಐಎಂಎಫ್ ಮಾಡಿರುವ ಟೀಕೆಗಳಲ್ಲಿ ಹೊಸದೇನಿಲ್ಲ. ಇದನ್ನು ಅದು ಮೊದಲೂ ಹೇಳಿತ್ತು. ಬೇರೆಯವರೂ ಹೇಳಿದ್ದಾರೆ. ಅವು ಬಹುತೇಕ ನಿಜ ಕೂಡ.

ನಮ್ಮ ಜಿಡಿಪಿ ಅಂದಾಜನ್ನು ಕುರಿತ ಕೆಲವು ಪ್ರಮುಖ ಟೀಕೆಗಳನ್ನು ಗಮನಿಸೋಣ. ನಮ್ಮಲ್ಲಿ ಅಸಂಘಟಿತ ವಲಯ ದೊಡ್ಡದು. ನಮ್ಮ ಜಿಡಿಪಿಯ ಸುಮಾರು ಅರ್ಧದಷ್ಟು ಬರುವುದು ಅಲ್ಲಿಂದಲೇ. ಆದರೆ, ಅಸಂಘಟಿತ ವಲಯದ ಬಗ್ಗೆ ಸರಿಯಾದ ಮಾಹಿತಿ ನಮ್ಮಲ್ಲಿಲ್ಲ. ಜಿಡಿಪಿಯನ್ನು ಲೆಕ್ಕ ಹಾಕಲು ಸಂಘಟಿತ ವಲಯದ ಬೆಳವಣಿಗೆಯನ್ನೇ ಅಸಂಘಟಿತ ವಲಯಕ್ಕೂ ಅನ್ವಯಿಸುತ್ತಿದ್ದೇವೆ. ಅದು ಸರಿಯಲ್ಲ. ಎರಡು ವಲಯಗಳು ಒಂದೇ ರೀತಿಯಲ್ಲಿ ಬೆಳೆಯಬೇಕಾಗಿಲ್ಲ. ಐನೂರು ಹಾಗೂ ಸಾವಿರ ರೂಪಾಯಿ ನೋಟು ಅಮಾನ್ಯೀಕರಣ ಆದಾಗ, ಕೋವಿಡ್ ಕಾಲದಲ್ಲಿ ಅಸಂಘಟಿತ ವಲಯ ಸೊರಗಿದ್ದನ್ನು ಗಮನಿಸಿದ್ದೇವೆ. ಅದರ ಬೆಳವಣಿಗೆಯನ್ನು ಸಂಘಟಿತ ವಲಯದ ಬೆಳವಣಿಗೆಯ ಮೂಲಕ ನೋಡಿದರೆ ಕುಸಿಯುತ್ತಿರುವ ವಲಯವನ್ನು ಬೆಳೆಯುತ್ತಿರುವಂತೆ ತೋರಿಸಿದಂತಾಗುತ್ತದೆ. ಸಹಜವಾಗಿಯೇ ಜಿಡಿಪಿ ಹೆಚ್ಚಾದಂತೆ ಕಾಣುತ್ತದೆ.

ನಮ್ಮ ಜಿಡಿಪಿ ಲೆಕ್ಕಾಚಾರದ ಬಗ್ಗೆ ಇರುವ ಇನ್ನೊಂದು ಟೀಕೆಯೆಂದರೆ, ನಮ್ಮ ಬೆಳವಣಿಗೆಯನ್ನು ಹೋಲಿಸುವುದಕ್ಕೆ 2011-12ನ್ನೇ ಈಗಲೂ ಮೂಲ ವರ್ಷವನ್ನಾಗಿ ಇಟ್ಟುಕೊಂಡಿದ್ದೇವೆ. ಆದರೆ, ಕಳೆದ 15 ವರ್ಷಗಳಲ್ಲಿ ಭಾರತದ ಆರ್ಥಿಕತೆ ಸಾಕಷ್ಟು ಬದಲಾಗಿದೆ. ಆಗ ಬಳಸುತ್ತಿದ್ದ ಎಷ್ಟೋ ಸರಕು ಸೇವೆಗಳು ಈಗ ಬಳಕೆಯಲ್ಲಿಲ್ಲ. ಎಷ್ಟೋ ಹೊಸ ಸರಕು ಹಾಗೂ ಸೇವೆಗಳು ಮಾರುಕಟ್ಟೆಗೆ ಬಂದಿವೆ. ಹಳೆಯ ಮಾನದಂಡ ಬಳಸಿ ಇಂದಿನ ಬೆಳವಣಿಗೆಯನ್ನು ಅಳೆಯುವುದು ಸರಿಯಲ್ಲ. ಅದು ಬದಲಾದ ಆರ್ಥಿಕತೆಯನ್ನು ಸರಿಯಾಗಿ ಬಿಂಬಿಸುವುದಿಲ್ಲ. ಇದನ್ನು ಸರ್ಕಾರವೂ ಅಲ್ಲಗಳೆಯುತ್ತಿಲ್ಲ. ಪರಿಷ್ಕರಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದಿದ್ದಾರೆ.

ಮುಂದಿನದು ದೇಶದ ಒಟ್ಟಾರೆ ಉತ್ಪನ್ನದ ಅಂದಾಜು ಮಾಡುವ, ಅರ್ಥಾತ್ ಜಿಡಿಪಿಯನ್ನು ಅಂದಾಜು ಮಾಡುವ ಸಮಸ್ಯೆ. ಪ್ರತಿ ಆರ್ಥಿಕತೆಯಲ್ಲಿ ಕೊಳ್ಳುವವನು ಮಾಡುವ ಖರ್ಚು ಮಾರುವವನ ಆದಾಯವಾಗಿರುತ್ತದೆ. ಹಾಗಾಗಿ, ಒಂದು ದೇಶದ ಒಟ್ಟು ಉತ್ಪನ್ನವನ್ನು ಅಂದಾಜು ಮಾಡುವುದಕ್ಕೆ ಜನರ, ಸರ್ಕಾರದ ಹಾಗೂ ಕಂಪನಿಗಳ ಒಟ್ಟು ಆದಾಯವನ್ನು ಪರಿಗಣಿಸುವುದು ಒಂದು ವಿಧಾನ. ಹಾಗಿಲ್ಲವಾದಲ್ಲಿ ಇವರೆಲ್ಲರೂ ಮಾಡುವ ಒಟ್ಟಾರೆ ಖರ್ಚನ್ನು ಆಧರಿಸಿ ಜಿಡಿಪಿಯನ್ನು ಅಂದಾಜು ಮಾಡಬಹುದು.


ಭಾರತದಲ್ಲಿ ಆದಾಯವನ್ನು ಆಧರಿಸಿದ ಅಂದಾಜನ್ನು ಜಿಡಿಪಿಯೆಂದು ಪರಿಗಣಿಸಲಾಗುತ್ತದೆ. ಅಮೆರಿಕದಲ್ಲಿ ಖರ್ಚನ್ನು ಆಧರಿಸಿದ ಅಂದಾಜು ಜಿಡಿಪಿಯಾಗುತ್ತದೆ. ತಾತ್ತ್ವಿಕವಾಗಿ ಇವೆರಡೂ ಒಂದೇ ಆಗಿರಬೇಕು. ಆದರೆ, ಎರಡು ಮಾಹಿತಿಗಳ ಮೂಲಗಳೂ ಬೇರೆಯಾಗಿರುವುದರಿಂದ ಒಂದಿಷ್ಟು ವ್ಯತ್ಯಾಸ ಇರುತ್ತದಾದರೂ, ಆ ವ್ಯತ್ಯಾಸ ಹೆಚ್ಚಾಗಬಾರದು. ಅರ್ಥಶಾಸ್ತ್ರಜ್ಞ ಅಶೋಕ್ ಮೋದಿಯವರು ಭಾರತದಲ್ಲಿ ಈ ಎರಡು ಅಂದಾಜುಗಳ ನಡುವಿನ ವ್ಯತ್ಯಾಸ ಹೆಚ್ಚಿದೆ ಅನ್ನುತ್ತಾರೆ. 2025-26ರಲ್ಲಿ ಆದಾಯವನ್ನಾಧರಿಸಿ ಲೆಕ್ಕ ಹಾಕಿದ ಜಿಡಿಪಿ ಶೇ 8ರಷ್ಟಿದೆ. ಖರ್ಚನ್ನು ಒಟ್ಟು ಮಾಡಿ ನೋಡಿದಾಗ ಅದು ಶೇ 5 ಇದೆ. ನಮ್ಮಲ್ಲಿ ಜಿಡಿಪಿ ಶೇ 8ರಷ್ಟು ಎನ್ನುತ್ತೇವೆ. ಅಮೆರಿಕದಲ್ಲಾಗಿದ್ದರೆ ಅದು ಶೇ 5ರಷ್ಟು ಆಗಿರುತ್ತಿತ್ತು. ಎರಡು ಕ್ರಮಗಳಲ್ಲೂ ಸಮಸ್ಯೆಗಳಿರುವುದರಿಂದ ಎರಡರ ಸರಾಸರಿಯನ್ನು ತೆಗೆದುಕೊಳ್ಳುವುದು ಒಳ್ಳೆಯದು.

ಆದಾಯದಷ್ಟು ಖರ್ಚು ಹೆಚ್ಚದಿರುವುದಕ್ಕೆ ಅಶೋಕ್ ಮೋದಿಯವರು ಕೊಡುವ ವಿವರಣೆಯೆಂದರೆ, ಅನುಕೂಲಸ್ಥ ಭಾರತೀಯರು ಭಾರತದ ಸರಕುಗಳನ್ನು ಕೊಳ್ಳುವ ಬದಲು ವಿದೇಶಿ ಸರಕುಗಳನ್ನು ಕೊಳ್ಳುತ್ತಿದ್ದಾರೆ. ವಿದೇಶಿ ಬ್ರ್ಯಾಂಡ್‌ಗಳು ಹೆಚ್ಚು ವ್ಯಾಪಾರವಾಗುತ್ತಿವೆ. ಆಮದಿನ ಪ್ರಮಾಣ ಹೆಚ್ಚುತ್ತಿದೆ. ಭಾರತೀಯ ಸರಕುಗಳ ಖರೀದಿ ಕಡಿಮೆ ಯಾಗಿದೆ. ಅದು ಆದಾಯ ಹಾಗೂ ಖರ್ಚಿನ ನಡುವಿನ ವ್ಯತ್ಯಾಸಕ್ಕೆ ಕಾರಣವೆಂದು ಅವರು ಸೂಚಿಸುತ್ತಾರೆ.

ಜಿಡಿಪಿ ಕೇಂದ್ರಿತ ಆರ್ಥಿಕತೆಯೇ ನಮ್ಮ ಗುರಿ ಅನ್ನುವುದಾದರೆ, ಅದರ ಲೆಕ್ಕಾಚಾರದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿಕೊಂಡು ಸರಿಯಾದ ಜಿಡಿಪಿಯನ್ನು ಲೆಕ್ಕ ಹಾಕುವ ಕಡೆ ಗಮನಕೊಡಬೇಕು. ಇದು ದೇಶದ ಆರ್ಥಿಕ ನೀತಿಗಳನ್ನು ರೂಪಿಸುವುದಕ್ಕೆ ತುಂಬಾ ಮುಖ್ಯ. ಬಹುಶಃ, ಸರ್ಕಾರ ಭಾವಿಸಿದಷ್ಟು ವೇಗವಾಗಿ ಜಿಡಿಪಿ ಬೆಳೆಯುತ್ತಿಲ್ಲವೆಂಬ ಅರಿವಿದ್ದಿದ್ದರೆ ಆರ್‌ಬಿಐ ಬಡ್ಡಿದರವನ್ನು ಇಳಿಸುತ್ತಿತ್ತು. ಜನರಿಗೆ ಸಾಲ ಸುಲಭವಾಗಿ ಸಿಗುತ್ತಿತ್ತು. ಕೃಷಿ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸುವುದು, ಬ್ಯಾಂಕಿಂಗ್ ವ್ಯವಸ್ಥೆಯನ್ನು ಸುಧಾರಿಸುವುದು, ಇತ್ಯಾದಿ ಸುಧಾರಣೆಗಳು ಆದ್ಯತೆಯ ವಿಷಯವಾಗುತ್ತಿದ್ದವು.

ನಮ್ಮಲ್ಲಿನ ದತ್ತಾಂಶಗಳಿಗೆ ಸಂಬಂಧಿಸಿದ ಟೀಕೆಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆ. ನಮ್ಮಲ್ಲಿ ಜನಗಣತಿ 2021ರಲ್ಲಿ ಆಗಬೇಕಿತ್ತು. ಈವರೆಗೂ ಆಗಿಲ್ಲ. ಬಹುತೇಕ ಸಮೀಕ್ಷೆಗಳು ಹಳತಾಗಿವೆ. ನಾವು 15 ವರ್ಷಗಳ ಹಿಂದಿನ ಚಿತ್ರಣವನ್ನಿಟ್ಟುಕೊಂಡು ಇಂದಿನ ಆರ್ಥಿಕತೆಯನ್ನು ಅಳೆಯಲು ಯತ್ನಿಸುತ್ತಿದ್ದೇವೆ. ತ್ರೈಮಾಸಿಕ ಜಿಡಿಪಿ ಅಂದಾಜು ಮಾಡುವಾಗ ಸಾಕಷ್ಟು ಊಹೆಗಳನ್ನು ಮಾಡುತ್ತೇವೆ. ಏಕೆಂದರೆ, ಎಷ್ಟೋ ವಿಷಯಗಳಿಗೆ ಸಂಬಂಧಿಸಿದಂತೆ ನಮಗೆ ತ್ರೈಮಾಸಿಕ ದತ್ತಾಂಶ ಲಭ್ಯವಿಲ್ಲ. ಹಿಂದೆ ಹೀಗಿತ್ತು ಅಂದುಕೊಂಡು, ಈಗಿನ ಮಾಹಿತಿಯನ್ನು ಅಂದಾಜು ಮಾಡುತ್ತೇವೆ. ನಮಗೆ ಬೇಕಾದ ಮಾಹಿತಿಯನ್ನು ನೇರವಾಗಿ ಸಂಗ್ರಹಿಸುವವರೆಗೆ ನಮ್ಮ ಅಂದಾಜು ನಿಖರವಾಗಿರುವುದಕ್ಕೆ ಸಾಧ್ಯವಿಲ್ಲ. ಫೆಬ್ರುವರಿಯಲ್ಲಿ ಪರಿಷ್ಕೃತ ಅಂದಾಜುಗಳು ಬರುವ ನಿರೀಕ್ಷೆಯಿದೆ.

ಜಿಡಿಪಿ ಹೆಚ್ಚಿದ ಮಾತ್ರಕ್ಕೆ ಬಡತನ, ನಿರುದ್ಯೋಗ, ಅಸಮಾನತೆ ಇವೆಲ್ಲಾ ಅದರಷ್ಟಕ್ಕೆ ಸರಿಹೋಗಿಬಿಡುವುದಿಲ್ಲ. ಹಾಗೆ ಆಗುತ್ತದೆ ಅನ್ನುವುದಕ್ಕೆ ಯಾವ ಪುರಾವೆಯೂ ಇಲ್ಲ. ಅದಕ್ಕಾಗಿಯೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅಭಿವೃದ್ಧಿಯ ಕೇಂದ್ರ ಹಾಗೂ ಉದ್ದೇಶ ಬದಲಾಗಬೇಕು. ಅಮರ್ತ್ಯ ಸೆನ್ ಹೇಳುವಂತೆ, ಅಭಿವೃದ್ಧಿಯನ್ನು ಆರ್ಥಿಕ ಬೆಳವಣಿಗೆಯ ಕಣ್ಣಲ್ಲಿ ನೋಡುವಾಗ ಆರ್ಥಿಕತೆ ಕೇಂದ್ರವಾಗಿಬಿಡುತ್ತದೆ. ಅದನ್ನು ಬೆಳೆಸುವುದೇ ಪ್ರಗತಿಯೆನಿಸಿಕೊಳ್ಳುತ್ತದೆ. ತಲಾ ಆದಾಯವೊ, ನಿವ್ವಳ ರಾಷ್ಟ್ರೀಯ ಉತ್ಪನ್ನವೋ ಅದರ ಬೆಳವಣಿಗೆಯ ಅಳತೆಗೋಲಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಯಾಗಿ ನೋಡಿದರೆ, ಆರ್ಥಿಕತೆಯನ್ನು ಅನುಭವಿಸುತ್ತಿರುವ ಮನುಷ್ಯ ಆರ್ಥಿಕತೆಯ ಕೇಂದ್ರವಾಗುತ್ತಾನೆ. ಜನರ ಸಾಮರ್ಥ್ಯ ಬೆಳವಣಿಗೆಯ ಅಳತೆಗೋಲಾಗುತ್ತದೆ. ಶಿಕ್ಷಣ, ಆರೋಗ್ಯ, ರಾಜಕೀಯ ಸ್ವಾತಂತ್ರ್ಯ, ಇವೆಲ್ಲಾ ಬೆಳವಣಿಗೆಯ ಸಾಧನಗಳಾಗುವುದಿಲ್ಲ; ಬೆಳವಣಿಗೆಯ ಅವಶ್ಯಕ ಭಾಗವಾಗುತ್ತವೆ. ಮನುಷ್ಯರಿಗೆ ಇದನ್ನು ಪಡೆಯಲು ಇರುವ ಅಡ್ಡಿಗಳನ್ನು ತೆಗೆಯುವುದು ಅಥವಾ ಸ್ವಾತಂತ್ರ್ಯವನ್ನು ಹೆಚ್ಚಿಸುವುದು ಮುಖ್ಯವಾಗುತ್ತದೆ. ಜಿಡಿಪಿಯನ್ನು ಹೆಚ್ಚಿಸುವುದಕ್ಕೆ ಮಾರ್ಗಗಳನ್ನು ಹಾಗೂ ಸಾಧನಗಳನ್ನು ಹುಡುಕುವುದಕ್ಕಿಂತ ಮನುಷ್ಯರ ಸ್ವಾತಂತ್ರ್ಯವನ್ನು ವಿಸ್ತರಿಸುವುದಕ್ಕೆ ನೇರವಾಗಿ ಗಮನಕೊಡಬೇಕು. ಆ ಪ್ರಕ್ರಿಯೆಯಲ್ಲಿ ಅಭಿವೃದ್ಧಿಯೂ ಸಾಧ್ಯವಾಗುತ್ತದೆ ಅನ್ನುವ ವಿವೇಕ ಒಳ್ಳೆಯದು.



ವಾಚಕರ ವಾಣಿ

ಜೇಬು ತುಂಬಬೇಡಿ, ಜೋಳಿಗೆ ಹಿಡಿಯಿರಿ

ಸಿದ್ಧಗಂಗಾ ಮಠದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರು ಹೇಳಿರುವ 'ಜೇಬು ತುಂಬಿಸಿಕೊಳ್ಳುವ ಬದಲು ಜೋಳಿಗೆ ತುಂಬಿಸಿಕೊಳ್ಳಿ' ಎನ್ನುವ ಮಾತು ರಾಜ್ಯದ ಹಲವು ಮಠಾಧೀಶರಿಗೆ ಆತ್ಮಾವಲೋಕನದ ಕಿವಿಮಾತಿನಂತಿದೆ. ಅಂದು ಶ್ರೀಗಳು ತಮ್ಮ ಜೋಳಿಗೆ ಹಿಡಿದು ಲಕ್ಷಾಂತರ ಬಡಮಕ್ಕಳ ಹೊಟ್ಟೆಯ ಹಸಿವು ಹಾಗೂ ಜ್ಞಾನದ ಹಸಿವು ನೀಗಿಸಿದರು. ಪ್ರಸ್ತುತ ಕೆಲವು ಮಠಾಧೀಶರು 'ಜೇಬು' ಮತ್ತು 'ಖಜಾನೆ' ತುಂಬಿಸಿಕೊಳ್ಳಲು ರಾಜಕೀಯ ಅಧಿಕಾರ ಹಾಗೂ ಆಸ್ತಿ ಮಾಡುವ ಹಪಹಪಿಗೆ ಬಿದ್ದಿದ್ದಾರೆ. ಮಠಗಳು ಅಧ್ಯಾತ್ಮದ ಕೇಂದ್ರಗಳಾಗುವ ಬದಲು ರಾಜಕೀಯ ಪಕ್ಷಗಳ ಅಖಾಡಗಳಾಗುತ್ತಿವೆ. ಭಕ್ತರು ನೀಡುವ ಹಣ ಸ್ವಾಮೀಜಿಗಳ ವೈಭವೋಪೇತ ಜೀವನಕ್ಕೆ ಬಳಕೆಯಾಗುತ್ತಿರುವ ಅನುಮಾನವಿದೆ. ಸಮಾಜಕ್ಕೆ ಮಾದರಿಯಾಗಬೇಕಾದವರು ಮೌಲ್ಯಗಳ ಜೋಳಿಗೆಯನ್ನು ತುಂಬಿಸಿಕೊಳ್ಳಬೇಕಿದೆ. ಆಗಷ್ಟೆ ಧರ್ಮ, ಮಠಗಳ ಮೇಲಿನ ಗೌರವ ಉಳಿಯಲಿದೆ.

ಸುಜಾತ ನಾಯಕ, ಶಕ್ತಿನಗರ

ಕ್ಯಾಮೆರಾ ಇರಲಿ, 'ದೀಪ'ಸಂಸ್ಕೃತಿ ಬೇಡ

ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ, ಅಲ್ಲಿನ ಅಧಿಕಾರಿಗಳ ಕೊಠಡಿಯನ್ನೂ ಒಳಗೊಂಡಂತೆ ಎಲ್ಲೆಡೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನೂ ಒಳಗೊಂಡು ಐಪಿಎಸ್ ಅಧಿಕಾರಿಗಳ ಕೊಠಡಿಗಳಿಗೆ ಕ್ಯಾಮೆರಾ ಅಳವಡಿಸಿಲ್ಲ. ಇದು ಅನುಮಾನಗಳಿಗೆ ಎಡೆಮಾಡಿ ಕೊಡುತ್ತಿದೆ. ಐಪಿಎಸ್ ಅಧಿಕಾರಿಗಳ ಕೊಠಡಿಗೆ ಕೆಂಪು ಮತ್ತು ಹಸಿರುದೀಪ ಅಳವಡಿಸಲಾಗಿದೆ. ಒಳಗೆ ಮುಖ್ಯಸಭೆ ನಡೆಯುತ್ತಿದ್ದರೆ ಕೆಂಪುದೀಪ ಉರಿಯುತ್ತಿರುತ್ತದೆ. ಬಾಗಿಲ ಬಳಿ ಪೊಲೀಸ್ ಕಾವಲಿದ್ದರೂ, ಈ ದೀಪ ಹೊತ್ತಿಸಿ ನಡೆಸುವ ಗೋಪ್ಯ ಸಭೆಯಾದರೂ ಏನು? ಐಪಿಎಸ್ ಅಧಿಕಾರಿಗಳ ಕೊಠಡಿಗೂ ಕ್ಯಾಮೆರಾ ಅಳವಡಿಸುವ ಬಗ್ಗೆ ಹಾಗೂ 'ದೀಪ ಸಂಸ್ಕೃತಿ' ಕೊನೆಗೊಳಿಸಲು ಗೃಹ ಸಚಿವರು ಕಟ್ಟುನಿಟ್ಟಿನ ಕ್ರಮವಹಿಸಬೇಕು. ಆಗಷ್ಟೇ ಮುಜುಗರದ ಪ್ರಕರಣಗಳಿಂದ ಸರ್ಕಾರ ಪಾರಾಗಬಹುದು.

ಸುಜಿತ್, ಮಂಡ್ಯ

ಪೂರ್ವಸಿದ್ಧತಾ ಪರೀಕ್ಷೆಯ ಗೊಂದಲ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಯು ಗೊಂದಲದ ಗೂಡಾಗಿದೆ. ಎರಡನೇ ಪೂರ್ವಸಿದ್ಧತಾ ಪರೀಕ್ಷೆಯನ್ನು ಬೆಳಿಗ್ಗೆ 11 ಗಂಟೆಯಿಂದ ಆರಂಭಿಸಲು ಸೂಚಿಸಿದೆ. ವಿದ್ಯಾರ್ಥಿಗಳು ಬೆಳಗ್ಗೆ 9 ಗಂಟೆಯೊಳಗೆ ಶಾಲೆಗೆ ಬರಬೇಕು. ಅವರಿಗೆ 9 ಗಂಟೆಯಿಂದ 10.30 ಗಂಟೆವರೆಗೆ ತರಗತಿ ತೆಗೆದುಕೊಳ್ಳಬೇಕು. ನಂತರ 11 ಗಂಟೆಯಿಂದ ಮಧ್ಯಾಹ್ನ 2.15 ಗಂಟೆವರೆಗೆ ಪರೀಕ್ಷೆ ನಡೆಸಲು ಆದೇಶಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಶಾಲೆಗಳಿಗೆ ಮಕ್ಕಳು ದೂರದ ಊರಿನಿಂದ ಬೆಳಗ್ಗೆ 7 ಅಥವಾ 8 ಗಂಟೆಗೆ ಶಾಲೆಗೆ ಬರುತ್ತಾರೆ. ಹೀಗೆ ಬರುವ ಮಕ್ಕಳಿಗೆ ಹಸಿವೆ ಆಗಬಹುದು. ಹಾಗಾಗಿ, ಮಧ್ಯಾಹ್ನ ಊಟದ ನಂತರ 2 ಗಂಟೆಯಿಂದ ಪರೀಕ್ಷೆ ಆರಂಭಿಸುವುದು ಸೂಕ್ತ. ಮಂಡಳಿಯು ವೇಳಾಪಟ್ಟಿಯನ್ನು ಪರಿಷ್ಕರಿಸಬೇಕಿದೆ.

ರಾಧ ಅಶೋಕ ಚನ್ನಳ್ಳಿ, ಹಿರೇಕೆರೂರ

ಅಧಿಕಾರಿ ರಕ್ಷಣೆ: ಕಾನೂನು ಬಿಗಿಯಾಗಲಿ

ರಾಜಕಾರಣಿಗಳು ಸಾರ್ವಜನಿಕವಾಗಿ ಸರ್ಕಾರಿ ಅಧಿಕಾರಿಗಳನ್ನು ನಿಂದಿಸುವುದು ಮತ್ತು ದರ್ಪದ ವರ್ತನೆ ತೋರುತ್ತಿರುವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿದೆ. ದಕ್ಷತೆಯಿಂದ ಕೆಲಸ ಮಾಡುವ ಅಧಿಕಾರಿಗಳನ್ನು ಗುರಿಯಾಗಿಸಿ ಬೆದರಿಕೆ ಹಾಕುವುದು ಅಥವಾ ಏಕವಚನದಲ್ಲಿ ನಿಂದಿಸುವುದು ಆಡಳಿತ ವ್ಯವಸ್ಥೆಯ ನೈತಿಕತೆಯನ್ನು ಕುಗ್ಗಿಸುತ್ತದೆ. ಅಧಿಕಾರಿಗಳು ರಾಜಕೀಯ ಪಕ್ಷಗಳ ಆಜ್ಞಾಪಾಲಕರಲ್ಲ. ಸಂವಿಧಾನಬದ್ಧವಾಗಿ ಜನಸೇವೆ ಮಾಡಲು ನೇಮಕಗೊಂಡವರು. ಜನಪ್ರತಿನಿಧಿಗಳ ವರ್ತನೆಯು ಸಮಾಜಕ್ಕೆ ತಪ್ಪುಸಂದೇಶ ರವಾನಿಸುತ್ತದೆ. ಅಧಿಕಾರಿಗಳಿಗೆ ಭಯಮುಕ್ತವಾಗಿ ಕೆಲಸ ಮಾಡುವ ವಾತಾವರಣ ಕಲ್ಪಿಸುವುದು ಸರ್ಕಾರದ ಕರ್ತವ್ಯ. ದಕ್ಷ ಅಧಿಕಾರಿಗಳ ಬೆನ್ನಿಗೆ ಸರ್ಕಾರ ನಿಲ್ಲದಿದ್ದರೆ ಆಡಳಿತ ಯಂತ್ರ ಕುಸಿದು ಬೀಳುವುದರಲ್ಲಿ ಸಂಶಯವಿಲ್ಲ.

ಲಾವಣ್ಯ ಬೀರೇಶ್, ಮುಗುಳಿ

ಮಾಂಜಾ: ಬದುಕಿನ ಸೂತ್ರ ಹರಿಯದಿರಲಿ

ಬೀದರ್ ಜಿಲ್ಲೆಯಲ್ಲಿ ಗಾಳಿಪಟದ ಮಾಂಜಾ (ದಾರ) ವ್ಯಕ್ತಿಯೊಬ್ಬರ ಕತ್ತು ಸೀಳಿ ಅವರ ಸಾವಿಗೆ ಕಾರಣವಾಗಿದೆ. ಉತ್ತರಪ್ರದೇಶ, ತೆಲಂಗಾಣದಲ್ಲಿಯೂ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಇಬ್ಬರು ಪ್ರಾಣ ಕಳೆದುಕೊಂಡಿದ್ದು, ನೂರಾರು ಜನರು ಗಾಯಗೊಂಡಿರುವುದು ವರದಿಯಾಗಿದೆ. ಈ ಅವಘಡಗಳು ಗಾಳಿಪಟ ಹಾರಿಸುವವರಿಗೆ ಎಚ್ಚರಿಕೆಯ ಗಂಟೆ. ಮಾಂಜಾ ಲೇಪಿತ ತುಂಡರಿಸಿದ ದಾರಗಳು ಮರದ ಕೊಂಬೆ, ಪೊದೆಗಳಲ್ಲಿ ಸಿಕ್ಕಿಕೊಂಡು ಪ್ರಾಣಿ, ಪಕ್ಷಿಗಳ ಜೀವಕ್ಕೂ ಸಂಚಕಾರ ತರುತ್ತಿವೆ. ಸರ್ಕಾರ ಮಾಂಜಾವನ್ನು ನಿಷೇಧಿಸಿದೆ. ಆದರೆ, ಕದ್ದುಮುಚ್ಚಿ ಇದರ ಉತ್ಪಾದನೆ, ಮಾರಾಟ ನಡೆಯುತ್ತಿದೆ. ಮಕ್ಕಳು, ಯುವಕರಿಗೆ ಈ ದಾರದ ಬಳಕೆಯಿಂದ ಆಗುವ ಸಾವು-ನೋವಿನ ಬಗ್ಗೆ ಮನವರಿಕೆ ಮಾಡಿಕೊಡಬೇಕಿದೆ.

ಮಾಲಾ ಮ. ಅಕ್ಕಿಶೆಟ್ಟಿ, ಬೆಳಗಾವಿ

ಎಳೆಯರ ಮನಗಳಿಗೆ ಪೂಚಂತೇ ಬೀಳಲಿ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಈ ಬಾರಿ ಫಲಪುಷ್ಪ ಪ್ರದರ್ಶನದ ಅಂಗವಾಗಿ 'ತೇಜಸ್ವಿ ವಿಸ್ಮಯ ಲೋಕ' ಮೈದಾಳಿದೆ. ಮೊಬೈಲ್ ಲೋಕದಲ್ಲಿ ಕಳೆದುಹೋಗುತ್ತಿರುವ ಮಕ್ಕಳು ಮತ್ತು ರಿಯಾಲಿಟಿ ಶೋಗಳಲ್ಲಿ ಮೈಮರೆಯುತ್ತಿರುವ ಪೋಷಕರು ಕೊಂಚ ಬಿಡುವು ಮಾಡಿಕೊಂಡು ಈ ವಿಸ್ಮಯವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ತೇಜಸ್ವಿ ಅವರು ಇಡೀ ಬದುಕನ್ನು ಪ್ರಕೃತಿಯ ಜೊತೆಗೆ ಕಳೆದರು. ಪ್ರಾಣಿ-ಪಕ್ಷಿಗಳು, ಹೊಲಗದ್ದೆಗಳಲ್ಲಿ ದಕ್ಕಿದ ಅನುಭವವನ್ನು ಸೃಜನಶೀಲ ಸಾಹಿತ್ಯ ರಚಿಸಲು ಹೇಗೆ ಬಳಸಿಕೊಂಡರು ಎನ್ನುವುದನ್ನು ಪ್ರದರ್ಶನ ಕಟ್ಟಿಕೊಟ್ಟಿದೆ. ಶಿಕ್ಷಕರು ವಿದ್ಯಾರ್ಥಿಗಳೊಟ್ಟಿಗೆ ಭೇಟಿ ನೀಡಿ ಆನಂದಿಸಬಹುದಾಗಿದೆ.

ಚಿಕ್ಕವೀರಯ್ಯ ಟಿ.ಎನ್., ರಾಮನಗರ

ಚುರುಮುರಿ



ವೋಟಿಂಗ್-ನೋಟಿಂಗ್!

• ಗುರು ಪಿ.ಎಸ್.

'ಇದೇನ್ರೀ ಇದು, ಎಲ್ಲರೂ ಮುಂದೆ ಮುಂದೆ ಹೋಗ್ತಿದ್ರೆ ಇವರು ಹಿಂದೆ ಹಿಂದೆ ಹೋಗ್ತಿದಾರೆ' ಪೇಪರ್ ಓದುತ್ತಾ ಹೇಳಿದಳು ಹೆಂಡತಿ.

'ಯಾರಮ್ಮ, ಯಾರ ಬಗ್ಗೆ ಮಾತಾಡ್ತಿದ್ದೀಯ?' ಪೇಪರ್ ಪುಟ ತಿರುಗಿಸುತ್ತಾ ಕೇಳಿದೆ.

'ಜಿಬಿಎ ಎಲೆಕ್ಷನ್‌ಗೆ ಬ್ಯಾಲೆಟ್ ಪೇಪರ್ ಬಳಸ್ತಾರಂತೆ. ಬೆಂಗಳೂರಿನಂತ ಐಟಿ ಸಿಟಿ ಎಲೆಕ್ಷನ್‌ಗೆ ಪೇಪರ್ ಬಳಸಿದ್ರೆ ಸರಿ ಇರುತ್ತಾ?'

'ಇವಿಎಂ ಬಳಸೋಕೆ ಬಿಟ್ರೆ ಗೋಲ್‌ಮಾಲ್ ನಡೆಯುತ್ತಂತಲ್ಲ, ಅದಕ್ಕೆ ಬ್ಯಾಲೆಟ್ ಪೇಪರ್ ಮೊರೆ ಹೋಗಿದ್ದಾರೆ ಬಿಡು' ಎಂದೆ ಸಮಾಧಾನದಿಂದ.

'ಬ್ಯಾಲೆಟ್ ಪೇಪರ್ ಬಳಸೋ ಎಲೆಕ್ಷನ್‌ನಲ್ಲೂ ಅಕ್ರಮ ಆಗುತ್ತೆ, ವೋಟಿಂಗ್‌ಗಿಂತ ಮೊದಲೇ ಡೀಲ್ ಆಗಿರುತ್ತೆ' ನಗುತ್ತಾ ಹೇಳಿದಳು.

'ಯಾವುದೂ ಬೇಡ ಅಂದ್ರೆ ಹೇಗಮ್ಮ? ಎಲೆಕ್ಷನ್ ಹೇಗೆ ನಡೆಸಬೇಕು ಅವರು?'

'ಬಿಗ್‌ಬಾಸ್‌ನವರು ನಡೆಸ್ತಾರಲ್ಲ. ಒಂದು ಆ್ಯಪ್ ಮಾಡಿ ಅದರಲ್ಲೇ ವೋಟ್ ಹಾಕಿ ಅನ್ನೋದು. ಒಬ್ಬರಿಗೆ 99 ವೋಟ್ ಹಾಕೋಕೆ ಅವಕಾಶ ಕೊಡೋದು' ಎಂದು ಹೊಸ ಐಡಿಯಾ ಕೊಟ್ಟಳು.

'ಒಬ್ಬೊಬ್ಬರು 99 ವೋಟ್ ಹಾಕೋದಾ?!' ಅಚ್ಚರಿಯಿಂದ ಕೇಳಿದೆ.

'ಹೂಂ, ಆಗ ಗೆದ್ದವರಿಗೂ ಒಂದು ಖುಷಿ ಇರುತ್ತೆ. ನಾನು 40 ಕೋಟಿ ವೋಟ್ ತಗೊಂಡೆ, 50 ಕೋಟಿ ಮತಗಳಿಂದ ಗೆದ್ದೆ ಅಂತ ಹೇಳಬಹುದು'.

'ಎರಡು-ಮೂರು ಸಿಮ್ ಇದ್ದವರು ಎರಡು-ಮೂರು ಬಾರಿ ವೋಟ್ ಮಾಡ್ಬಿಟ್ರೆ'.

'ಮೊಬೈಲ್ ನಂಬರ್ ಅಲ್ಲ, ಆಧಾರ್ ನಂಬರ್ ಆಧಾರದ ಮೇಲೆ ವೋಟಿಂಗ್. ಒಂದು ಆಧಾರ್ ಸಂಖ್ಯೆಗೆ ಒಂದು ಬಾರಿ ಅವಕಾಶ ಅಂತ' ಎಂದಳು.

'ಐಡಿಯಾ ಚೆನ್ನಾಗಿದೆ. ಮುಂದೆ ನಮ್ ಹೊಸ ಸಿಎಂ ಅವರನ್ನೂ ಹೀಗೆ ಆಯ್ಕೆ ಮಾಡಿಕೊಂಡ್ರೆ ಚೆನ್ನಾಗಿರುತ್ತಲ್ವ?'

'ಮಾಡಬಹುದು. ಆದರೆ, ಆನ್‌ಲೈನ್ ವೋಟಿಂಗ್ ಜೊತೆಗೆ ನೋಟಿಂಗ್ ಕೂಡ ಇರಬೇಕು'.

'ನೋಟಿಂಗ್ ಅಂದ್ರೆ?'

'ಸಿಎಂ ಹುದ್ದೆಗೆ 2,500 ಕೋಟಿ ರೂಪಾಯಿ ಕೊಡಬೇಕಾಗುತ್ತೆ ಅಂತ ಹಿಂದೆ ಒಬ್ಬರು ಹೇಳಿದ್ರಲ್ಲ, ಅದೇ ನೋಟಿಂಗ್' ಎಂದು ನಕ್ಕಳು.

ಸಂಗತ

ಶೃಂಗೇರಿ: ಅನ್ನದಬಟ್ಟಲಿನಲ್ಲಿ ಚಂಡಮಾರುತ


ಮೇಲ್ನೋಟಕ್ಕೆ ಹಸಿರುಸಿರಿಯಂತೆ ಕಾಣಿಸುವ ಶೃಂಗೇರಿಯ ಪರಿಸರದ ಆಂತರ್ಯ ಬೇರೆಯದೇ ಆಗಿದೆ. ಕೃಷಿಯಲ್ಲಾದ ಪಲ್ಲಟ ರೈತನ ಬದುಕನ್ನು ಗಾಸಿಗೊಳಿಸಿದೆ.

• ಸುಧಾಕರ್ ಎಸ್. ಶೆಟ್ಟಿ

ಮಲೆನಾಡು ಎಂದರೆ ಹಸಿರು, ಧಾರಾಕಾರ ಮಳೆ, ಸಮೃದ್ಧಿ ಹಾಗೂ ನೆಮ್ಮದಿಯ ಜೀವನ ಎನ್ನುವ ಕಲ್ಪನೆ ಬಯಲು ಪ್ರದೇಶದ ಅನೇಕರ ಮನಸ್ಸಿನಲ್ಲಿ ಜೀವಂತವಾಗಿದೆ. ಆದರೆ, ಮಲೆನಾಡು ಈಗ ಮೊದಲಿನಂತಿಲ್ಲ. ಅದರಲ್ಲೂ, ಮಲೆನಾಡಿನ ಹೃದಯಭಾಗ ಆಗಿರುವ ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ರೈತರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಒಂದು ಕಾಲದಲ್ಲಿ 'ಅನ್ನದ ಕಣಜ' ಎಂದು ಕರೆಸಿಕೊಳ್ಳುತ್ತಿದ್ದ ಈ ಭಾಗದಲ್ಲಿ ಪ್ರಸ್ತುತ ರೈತನ ಬದುಕು ಬಿರುಗಾಳಿಗೆ ಸಿಲುಕಿರುವ ಸೊಡರಿನಂತಿದೆ.

ಹಿಂದೆ ಈ ಭಾಗದಲ್ಲಿ ಭತ್ತದ ಬೆಳೆಯೇ ರೈತನ ಜೀವನವಾಗಿತ್ತು. ಭತ್ತ ಬೆಳೆಯುವುದನ್ನು ಜಮೀನ್ದಾರ ಕುಟುಂಬಗಳಿಗೆ ಹೆಮ್ಮೆಯ ವಿಷಯವೆಂದು ಪರಿಗಣಿಸಲಾಗುತ್ತಿತ್ತು. ಒಂದು ಮನೆತನದ ಗೌರವ, ಸಮೃದ್ಧಿ, ಸಾಮಾಜಿಕ ಸ್ಥಾನಮಾನ ಎಲ್ಲವೂ ಭತ್ತದ ಬೆಳೆಯೊಂದಿಗೆ ತಳಕು ಹಾಕಿಕೊಂಡಿತ್ತು. ಕಾಲಕ್ರಮೇಣ ಭತ್ತದ ಬೆಳೆಯು ರೈತನಿಗೆ ಲಾಭವಿಲ್ಲದ, ನಷ್ಟದ ವ್ಯವಹಾರವಾಗಿ ಬದಲಾಯಿತು.

ಪ್ರಸ್ತುತ, ಒಂದು ಎಕರೆಗೆ ಸುಮಾರು ₹40 ಸಾವಿರ ವೆಚ್ಚ ಮಾಡಿದರೂ, ಅದರಿಂದ ಬರೀ ₹28 ಸಾವಿರದಷ್ಟು ಉತ್ಪತ್ತಿ ಬರುವಂತಹ ಸ್ಥಿತಿ ನಿರ್ಮಾಣವಾಗಿದೆ. ಶ್ರಮಕ್ಕೂ, ಹೂಡಿದ ಹಣಕ್ಕೂ ಮೌಲ್ಯ ಸಿಗದ ಕಾರಣ ಭತ್ತದ ಬೆಳೆಯನ್ನು ರೈತನು ಕೈಬಿಡಬೇಕಾದ ಅನಿವಾರ್ಯತೆ ಎದುರಾಗಿದೆ.



ಎಪ್ಪತ್ತರ ದಶಕದಲ್ಲಿ ಭತ್ತದ ಬೆಳೆಯು ಕಷ್ಟಕರವಾಗುತ್ತಿದೆ ಎಂಬ ಅರಿವು ರೈತರಿಗೆ ಬಂತು. ಅದರ ಪರಿಣಾಮವಾಗಿ, ತೊಂಬತ್ತರ ದಶಕದ ವೇಳೆಗೆ ಶೃಂಗೇರಿ ಕ್ಷೇತ್ರ ಸಂಪೂರ್ಣವಾಗಿ ಅಡಿಕೆಮಯ ಪ್ರದೇಶವಾಗಿ ಪರಿವರ್ತಿತವಾಯಿತು. ಅಡಿಕೆ ಬೆಳೆಯು ಆರಂಭದಲ್ಲಿ ರೈತರಿಗೆ ನೆಮ್ಮದಿಯ ಉಸಿರನ್ನು ನೀಡಿತು. ಆದಾಯ ದೊರೆಯಿತು, ಸಾಲ ತೀರಿತು, ಬದುಕು ಸ್ವಲ್ಪ ಸ್ಥಿರವಾಯಿತು. ಆ ನೆಮ್ಮದಿ ಹೆಚ್ಚುಕಾಲ ಉಳಿಯಲಿಲ್ಲ. 2000ರ ಇಸವಿಯ ನಂತರ ಅಡಿಕೆಗೆ ತಗುಲಿದ ಭೀಕರ ರೋಗಗಳು, ವಿಶೇಷವಾಗಿ ಹಳದಿ ರೋಗ, ಎಲೆಚುಕ್ಕಿ ರೋಗ, ಕೊಳೆ ರೋಗ ಮತ್ತು ನುಸಿ ರೋಗ, ಶೃಂಗೇರಿ ಕ್ಷೇತ್ರದ ಅಡಿಕೆ ತೋಟಗಳನ್ನು ಸಂಪೂರ್ಣವಾಗಿ ನಾಶಮಾಡುತ್ತಾ ಬಂದವು. ಒಂದು ಕಾಲದಲ್ಲಿ ನೂರು ಕ್ವಿಂಟಲ್ ಅಡಿಕೆ ಬೆಳೆಯುತ್ತಿದ್ದ ಜಾಗಗಳಲ್ಲಿ ಇಂದು ಎರಡು ಕ್ವಿಂಟಲ್ ಬೆಳೆಯುವುದೇ ಕಷ್ಟ ಎಂಬಂತಹ ದಾರುಣ ಪರಿಸ್ಥಿತಿ ನಿರ್ಮಾಣವಾಗಿದೆ. ವರ್ಷಗಳ ಕಾಲ ಬೆಳೆಸಿದ ತೋಟಗಳು ಕಣ್ಣೆದುರೇ ಒಣಗುತ್ತಿರುವುದನ್ನು ನೋಡುತ್ತಾ ರೈತನು ಅಸಹಾಯಕನಾಗಿ ನಿಂತಿದ್ದಾನೆ.

ಭತ್ತ ಬೆಳೆಯುವುದನ್ನು ಬಿಟ್ಟ ಮೇಲೆ ಅಡಿಕೆ ಹೊರತುಪಡಿಸಿ ಬೇರೆ ಬೆಳೆ ಬೆಳೆಯಲು ಸಾಧ್ಯವಿಲ್ಲದಂತಹ ಪರಿಸ್ಥಿತಿಯೂ ಮಲೆನಾಡಿನಲ್ಲಿದೆ. ಮಳೆ ಅವಲಂಬಿತ ಕೃಷಿಯು ರೈತನನ್ನು ಆಯ್ಕೆಗಳಿಲ್ಲದ ದುಃಸ್ಥಿತಿಗೆ ತಳ್ಳಿದೆ. ಅರಣ್ಯ ಇಲಾಖೆಯ ಹಾಗೂ ಕಂದಾಯ ಇಲಾಖೆಯ ಅಮಾನವೀಯ ಕಾನೂನುಗಳು ಮತ್ತು ಬೆಳೆಹಾನಿಗೆ ಸೂಕ್ತ ಪರಿಹಾರ ದೊರೆಯದಿರುವ ಸ್ಥಿತಿಯೂ ರೈತರನ್ನು ಕಂಗಾಲಾಗಿಸಿದೆ.

ರೈತ ಕುಟುಂಬಗಳ ಕೆಲವು ಮಕ್ಕಳು ಉತ್ತಮ ಶಿಕ್ಷಣ ಪಡೆದಿದ್ದಾರೆ; ಬೆಂಗಳೂರು ಸೇರಿದಂತೆ ನಗರ ಪ್ರದೇಶಗಳ ಸಾಫ್ಟ್‌ವೇರ್ ಕಂಪನಿಗಳಲ್ಲಿ ಉದ್ಯೋಗ ಪಡೆದು, ನಗರ ಜೀವನಕ್ಕೆ ಹೊಂದಿಕೊಂಡಿದ್ದಾರೆ. ಹಳ್ಳಿಗೆ, ಶೃಂಗೇರಿ ಭಾಗದ ಗ್ರಾಮೀಣ ಬದುಕಿಗೆ ಮರಳುವ ಬದಲು, ನಗರಗಳಲ್ಲಿಯೇ ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ಹೀಗಾಗಿ ಹಳ್ಳಿಯಲ್ಲಿ ಉಳಿದಿರುವುದು ವಯೋವೃದ್ಧ ತಂದೆ-ತಾಯಿ ಅಥವಾ ಇತರೆ ಆಯ್ಕೆಗಳಿಲ್ಲದ ಅಣ್ಣ-ತಮ್ಮಂದಿರು ಮಾತ್ರ. ಆದಾಯವಿಲ್ಲದ ಕೃಷಿ, ಬೆಳೆ ನಾಶ, ಸಾಲದ ಒತ್ತಡ - ಇವೆಲ್ಲವೂ ಅವರನ್ನು ನಿರಂತರವಾಗಿ ಆತಂಕದಲ್ಲಿ ಬದುಕುವಂತೆ ಮಾಡಿವೆ.

ಅಡಿಕೆ, ಕಾಳುಮೆಣಸು, ರಬ್ಬರ್ ಇಂತಹ ಪ್ರಮುಖ ಬೆಳೆಗಳು ಪ್ರಸ್ತುತ ಆದಾಯಶೂನ್ಯ ಸ್ಥಿತಿಗೆ ತಲಪಿವೆ. ಒಂದು ವರ್ಷ ಬೆಳೆ ಬರುತ್ತದೆ ಎಂಬ ನೆಮ್ಮದಿಯ ಸ್ಥಿತಿಗೆ ಹೊಂದಿಕೊಳ್ಳುವ ಮೊದಲೇ ಸಮಸ್ಯೆಗಳ ಸರಮಾಲೆ ಎದುರಾಗುತ್ತದೆ. ನಿರಂತರ ಮಳೆಯಿಂದ ಕೊಳೆ ರೋಗ, ಮಳೆ ಸ್ವಲ್ಪ ನಿಂತಾಗ ನುಸಿ ರೋಗ, ಎಲೆಚುಕ್ಕಿ ರೋಗ, ಮಳೆ ಭೀಕರವಾದಾಗ ಗಾಳಿಯಿಂದ ಅಡಿಕೆ ಹಾಗೂ ಭತ್ತದ ಬೆಳೆ ನಾಶವಾಗುತ್ತದೆ. ಇದರೊಂದಿಗೆ ಕಾಟಿಗಳ ಕಾಟ, ಆನೆ ದಾಳಿ, ಕಾಡು ಹಂದಿಗಳಿಂದ ಬೆಳೆಯ ಸರ್ವನಾಶ - ಇವೆಲ್ಲವೂ ರೈತನಿಗೆ ನಿತ್ಯದ ಯಾತನೆಯಾಗಿವೆ.

ಮಲೆನಾಡು, ವಿಶೇಷವಾಗಿ ಶೃಂಗೇರಿ ಕ್ಷೇತ್ರ ಇಂದು ಹಸಿರು ಸ್ವರ್ಗವಲ್ಲ, ಅದು ನಲುಗುತ್ತಿರುವ ರೈತ ಬದುಕಿನ ಪ್ರತಿಬಿಂಬ. ಈ ಸಂಕಷ್ಟವನ್ನು ಅರ್ಥಮಾಡಿಕೊಂಡು, ಸರ್ಕಾರ, ಆಡಳಿತ ವ್ಯವಸ್ಥೆ ಮತ್ತು ಸಮಾಜ ಒಟ್ಟಾಗಿ ಮಲೆನಾಡಿನ ರೈತರ ಬದುಕು ಕೊಂಚ ಹಸನಾಗಲು ಸ್ಪಂದಿಸಬೇಕಾದ ಅವಶ್ಯಕತೆ ಇದೆ. ಆದರೆ, ಸರ್ಕಾರದ ಕಾಳಜಿ ಬೆಂಗಳೂರು, ಮೈಸೂರು ನಗರ ವ್ಯಾಪ್ತಿಗಳಿಗೆ ಸೀಮಿತ ಎನ್ನುವಂತಾಗಿದೆ.

ಶೃಂಗೇರಿ ಕ್ಷೇತ್ರಕ್ಕೆ ಬಹುತೇಕ ರಾಜಕೀಯ ನಾಯಕರು ಭೇಟಿ ನೀಡುವುದೇ ಹೆಲಿಕಾಪ್ಟರ್‌ನಲ್ಲಿ! ಗಗನಗಾಮಿಗಳಿಗೆ ನೆಲದ ಸಮಸ್ಯೆಗಳು ಅರ್ಥವಾಗುವುದು ಹೇಗೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ತಾಳ್ಯಾಕ ತಂತ್ಯಾಕ ಜಗದ ಹಂಗ್ಯಾಕ

ಟ್ರಂಪ್ ಆಡಳಿತಕ್ಕೆ ಒಂದು ವರ್ಷ

• ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಜನವರಿ 20ಕ್ಕೆ (ಮಂಗಳವಾರ) ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಒಂದು ವರ್ಷ ತುಂಬಿದೆ. ಚುನಾವಣೆಯಲ್ಲಿ ಗೆದ್ದ ನಂತರ, ಅಧಿಕೃತವಾಗಿ ಅಧಿಕಾರ ಸ್ವೀಕರಿಸುವುದಕ್ಕೂ ಮುಂಚೆಯೇ ಅವರು ಈ ಬಾರಿಯ ತಮ್ಮ ಆಡಳಿತ ಭಿನ್ನವಾಗಿರುವ ಸೂಚನೆಗಳನ್ನು ನೀಡಿದ್ದರು. ಶ್ವೇತಭವನದ ಮೆಟ್ಟಿಲು ಹತ್ತಿದ ದಿನದಿಂದ ಅವರು ತಮ್ಮ ಅನಿರೀಕ್ಷಿತ ನಿರ್ಧಾರಗಳು, ಅಚ್ಚರಿಯ ಘೋಷಣೆಗಳು, ಊಹೆ ಮಾಡಲಾಗದ ನಿಲುವುಗಳನ್ನು ಪ್ರಕಟಿಸುತ್ತಲೇ ಇದ್ದಾರೆ.

ಅಮೆರಿಕದ ಅಧ್ಯಕ್ಷರಾಗಿದ್ದರೂ ಟ್ರಂಪ್ ಅವರ ಚಟುವಟಿಕೆ ಮತ್ತು ಕ್ರಮಗಳು ಅಮೆರಿಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ಜಗತ್ತೇ ತಮ್ಮ ಪ್ರಯೋಗ ಶಾಲೆ ಎನ್ನುವಂತೆ ಭಾವಿಸಿದ್ದಾರೆ.

ತಮ್ಮ ಮಾತು ಎಲ್ಲರೂ ಕೇಳಬೇಕು ಎನ್ನುವುದು ಅವರ ಬಯಕೆ. ಮಾತು ಕೇಳದಿದ್ದರೆ, ಅಂಥ ದೇಶದ ಮೇಲೆ ಸುಂಕದ ಅಸ್ತ್ರ ಝಳಪಿಸುತ್ತಾರೆ. ದಿಢೀರ್ ಆಗಿ ಸುಂಕದ ಪ್ರಮಾಣವನ್ನು ಹತ್ತಾರು ಪಟ್ಟು ಹೆಚ್ಚಿಸುತ್ತಾರೆ. ನಂತರ ಅದನ್ನು ಇಳಿಸುತ್ತಾರೆ, ತಡೆಯುತ್ತಾರೆ, ಮುಂದೂಡುತ್ತಾರೆ. ಒಮ್ಮೆ ಉಕ್ರೇನ್ ಮೇಲೆ ಕೆಂಡಾಮಂಡಲರಾಗಿ ಕೂಗಾಡುತ್ತಾರೆ. ಮತ್ತೊಮ್ಮೆ ಅನಾಥನನ್ನು ಎಳೆದು ಎದೆಗಪ್ಪಿಕೊಳ್ಳುವಂತೆ ಪ್ರೀತಿ ತೋರುತ್ತಾರೆ. 'ಮೋದಿ ನನ್ನ ಸ್ನೇಹಿತರು' ಎನ್ನುತ್ತಾರೆ. ಆದರೆ, ಭಾರತದ ಮೇಲೆ ಸುಂಕದ ಪ್ರಮಾಣವನ್ನು ಏರಿಸುತ್ತಲೇ ಇದ್ದಾರೆ. ರಷ್ಯಾದಿಂದ ಕಡಿಮೆ ಬೆಲೆಗೆ ಸಿಗುವ ಇಂಧನ ಕೊಳ್ಳುವುದನ್ನು ಭಾರತ ಬಿಡಬೇಕು ಎಂದು ಠರಾವು ಹೊರಡಿಸುತ್ತಾರೆ. ಅಮೆರಿಕದಿಂದಲೇ ಶಸ್ತ್ರಾಸ್ತ್ರಗಳನ್ನು ಕೊಳ್ಳಬೇಕು ಎಂದು ಆದೇಶ ಹೊರಡಿಸಿ, ಒತ್ತಡ ತಂತ್ರ ಅನುಸರಿಸುತ್ತಾರೆ.




ಟ್ರಂಪ್ ಅವರು ಕೇವಲ ಮಾತಿಗೆ ಸೀಮಿತವಾಗಿಲ್ಲ. ಕೆಲವು ದೇಶಗಳಲ್ಲಿ ಭಾರಿ ತಲ್ಲಣವನ್ನೇ ಉಂಟುಮಾಡಿದ್ದಾರೆ. ರಾತ್ರೋರಾತ್ರಿ ವೆನೆಜುವೆಲಾದ ಅಧ್ಯಕ್ಷರ ಮನೆಗೆ ನುಗ್ಗಿ ಅವರನ್ನು ಅಮೆರಿಕಕ್ಕೆ ಹೊತ್ತೊಯ್ಯಲಾಗುತ್ತದೆ. 'ನಾನೇ ವೆನೆಜುವೆಲಾ ಅಧ್ಯಕ್ಷ' ಎಂದು ಘೋಷಣೆ ಮಾಡುತ್ತಾರೆ. ಎಂಟು ಯುದ್ಧಗಳನ್ನು ನಿಲ್ಲಿಸಿದೆ, ಜಗತ್ತಿನಲ್ಲಿ ಶಾಂತಿ ಸ್ಥಾಪಿಸಿದೆ ಎಂದು ಹೇಳುತ್ತಲೇ ಗ್ರೀನ್‌ಲ್ಯಾಂಡ್ ಸೇರಿದಂತೆ ಹಲವು ದೇಶಗಳ ಮೇಲೆ ಸೇನಾ ದಾಳಿ ನಡೆಸುವ ಸೂಚನೆ ನೀಡುತ್ತಾರೆ. ಟ್ರಂಪ್ ಅವರ ದೃಷ್ಟಿ ತಮ್ಮ ಮೇಲೆ ಬೀಳದಿರಲಿ ಎಂದು ಕೆಲವು ದೇಶಗಳ ನಾಯಕರು ಪ್ರಾರ್ಥಿಸುವಂತಾಗಿದೆ.

ಗಳಿಗೆಯಿಂದ ಗಳಿಗೆಗೆ ಅವರ ಮನಃಸ್ಥಿತಿ ಬದಲಾಗುತ್ತದೆ. ಅದನ್ನು ಅನುಸರಿಸಿ ಅವರ ಮಾತು, ಕ್ರಿಯೆ, ದೇಹಭಾಷೆ ಎಲ್ಲವೂ ಬದಲಾಗುತ್ತವೆ. ಸಾರ್ವಜನಿಕವಾಗಿ ಕೂಗಾಡಿದ, ಗೇಲಿ ಮಾಡಿದ, ಗಹಗಹಿಸಿ ನಕ್ಕ, ಸಿಟ್ಟಿನಿಂದ ಹೂಂಕರಿಸಿದ ಘಟನೆಗಳು ಅದೆಷ್ಟೋ. ವ್ಯಕ್ತಿಗಳ ಬಗ್ಗೆ ಆಗಲಿ, ದೇಶದ ಬಗ್ಗೆ ಆಗಲಿ, ಇಂಥದ್ದು ಮಾತಾಡಬಾರದು ಎನ್ನುವ ಗೆರೆಯನ್ನು ಅವರೆಂದೂ ಹಾಕಿಕೊಂಡಿಲ್ಲ. ಮನಸ್ಸು ಹರಿದಂತೆ, ನಾಲಿಗೆ ಹೊರಳಿದಂತೆ ವಾಕ್‌ಪ್ರಹಾರ ಹರಿಯುತ್ತದೆ. ಅವರ ಮಾತು, ಭಾಷೆ, ಹಾವಭಾವಗಳ ಬಗ್ಗೆ ಕೋಟ್ಯಂತರ ಮೀಮ್‌ಗಳು, ಎಐ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.


ಟ್ರಂಪ್ ಅವರನ್ನು ಹೀಗೇ ಎಂದು ಯಾರೂ ಅಂದಾಜು ಮಾಡಲಾಗದು. ಎಲ್ಲವೂ ತಮ್ಮ ದೇಶದ ಹಿತಾಸಕ್ತಿ ಕಾಪಾಡಲು ಎನ್ನುವುದು ಅವರ ಸಮರ್ಥನೆ. ಅದನ್ನು ಅಲ್ಲಗಳೆಯಲಾಗದು. ಅವರನ್ನು ಕಡೆಗಣಿಸಲೂ ಆಗದು. 'ವಿಶ್ವದ ದೊಡ್ಡಣ್ಣ' ಎಂದು ಕರೆಸಿಕೊಳ್ಳುವ ದೇಶದಲ್ಲಿ ಜನರೇ ಎರಡನೇ ಬಾರಿಗೆ ಮತ ಹಾಕಿ, ಆರಿಸಿ ಕಳಿಸಿದ್ದಾರೆ. ಅಮೆರಿಕದ ಆಡಳಿತ ವ್ಯವಸ್ಥೆಯಲ್ಲಿಯೂ ಅವರು ಅನೇಕ ಬದಲಾವಣೆಗಳನ್ನು ಮಾಡಿದ್ದಾರೆ. ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುವುದು ಅವರ ಶೈಲಿ. ಟ್ರಂಪ್ ಜನರ ಪಾಲಿಗೆ ಬಿಸಿತುಪ್ಪವಾಗಿದ್ದು, ಉಗುಳಲೂ ಆಗದ, ನುಂಗಲೂ ಆಗದ ಸ್ಥಿತಿ ಇದೆ.






ಟ್ರಂಪ್ ನೀತಿ: ಅಮೆರಿಕನ್ನರಲ್ಲಿ ಆತಂಕ

ಡೊನಾಲ್ಡ್ ಟ್ರಂಪ್ ಅವರ ನೀತಿಗಳು ಮತ್ತು ಅವರ ಆದ್ಯತೆಗಳು ಅಮೆರಿಕನ್ನರಲ್ಲಿ ಕಳವಳ ಉಂಟು ಮಾಡಿವೆ ಎಂದು ಸುದ್ದಿ ಸಂಸ್ಥೆ ಎಪಿ ಮತ್ತು ಷಿಕಾಗೊ ವಿಶ್ವವಿದ್ಯಾಲಯದ ಎನ್‌ಒಆರ್‌ಸಿ (ನ್ಯಾಷನಲ್ ಒಪಿನೀಯನ್ ರಿಸರ್ಚ್ ಸೆಂಟರ್) ನಡೆಸಿರುವ ಜಂಟಿ ಸಮೀಕ್ಷೆ ತಿಳಿಸಿದೆ. ಜನವರಿ ತಿಂಗಳ ಆರಂಭದಲ್ಲಿ ನಡೆಸಿರುವ ಸಮೀಕ್ಷೆಯಲ್ಲಿ ಭಾಗವಹಿಸಿದ್ದ ಜನರ ಪೈಕಿ ಶೇ 59 ಮಂದಿ ಅಧ್ಯಕ್ಷರಾಗಿ ಟ್ರಂಪ್ ಅವರ ಕೆಲಸ ತೃಪ್ತಿ ತಂದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಟ್ರಂಪ್ ಆಡಳಿತದಲ್ಲಿ ಅರ್ಥವ್ಯವಸ್ಥೆ ಇನ್ನಷ್ಟು ಹದಗೆಟ್ಟಿದೆ ಎಂದು ಜನರು ಅಭಿಪ್ರಾಯಪಟ್ಟಿದ್ದಾರೆ. ಹೊರದೇಶಗಳಿಂದ ಆಮದಾಗುವ ಉತ್ಪನ್ನಗಳ ಮೇಲೆ ಸುಂಕ ಹೆಚ್ಚಳ ಮಾಡಿರುವುದರಿಂದ ದಿನನಿತ್ಯದ ವೆಚ್ಚ ಹೆಚ್ಚಾಗಿದೆ ಎಂದು ಜನರು ಹೇಳಿದ್ದಾರೆ. ಟ್ರಂಪ್ ಆರ್ಥಿಕ ನಿರ್ವಹಣೆ ಸರಿಯಾಗಿಲ್ಲ ಎಂದು ಶೇ 62 ಮಂದಿ ಹೇಳಿದ್ದಾರೆ. ವಲಸೆ ವಿಚಾರದಲ್ಲಿ ಟ್ರಂಪ್ ನೀತಿಯನ್ನೂ ಜನರು ವಿರೋಧಿಸಿದ್ದಾರೆ. ವೆನೆಜುವೆಲಾ ವಿರುದ್ಧದ ಸೇನಾ ಕ್ರಮವನ್ನು ಶೇ 57 ಮಂದಿ ಸರಿಯಲ್ಲ ಎಂದಿದ್ದಾರೆ.





365 ದಿನಗಳಲ್ಲಿ 365 ಗೆಲುವು

ಒಂದು ವರ್ಷದಲ್ಲಿ ಟ್ರಂಪ್ ಆಡಳಿತ ಕೈಗೊಂಡ ಕ್ರಮಗಳ ಪಟ್ಟಿಯನ್ನು ಶ್ವೇತಭವನ ಬಿಡುಗಡೆ ಮಾಡಿದೆ. '365 ದಿನಗಳಲ್ಲಿ 365 ಗೆಲುವು' ಎಂಬ ತಲೆಬರಹದ ಅಡಿಯಲ್ಲಿ 365 ಸಾಧನೆಗಳನ್ನು ಪಟ್ಟಿ ಮಾಡಲಾಗಿದೆ. ವಲಸಿಗರು, ಕ್ರಿಮಿನಲ್‌ಗಳು, ಮಾದಕ ದ್ರವ್ಯ ಕಳ್ಳಸಾಗಣೆ ವಿರುದ್ಧ ಕೈಗೊಂಡ ಕ್ರಮಗಳು, ಜಾಗತಿಕ ಮಟ್ಟದಲ್ಲಿ ಅಮೆರಿಕದ ನಾಯಕತ್ವ, ಅರ್ಥವ್ಯವಸ್ಥೆ ಸುಧಾರಣೆಗೆ ತೆಗೆದುಕೊಂಡ ನಿರ್ಧಾರಗಳು, ಅನಗತ್ಯ ವೆಚ್ಚಕ್ಕೆ ನಿಯಂತ್ರಣ, ದೇಶದಲ್ಲಿ ಉದ್ಯೋಗ ಸೃಷ್ಟಿ, ಅಮೆರಿಕದ ನಾಗರಿಕರ ಜೀವನ ಸುಧಾರಣೆಗೆ ಒತ್ತು, ಸೇನೆಯ ಬಲವರ್ಧನೆ... ಸೇರಿದಂತೆ ಹಲವು ವಿಚಾರಗಳು ಇದರಲ್ಲಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ಸ್ಥಗಿತಗೊಂಡಿದ್ದು ಕೂಡ ಈ ಪಟ್ಟಿಯಲ್ಲಿ (144ನೆಯದ್ದು) ಸ್ಥಾನ ಪಡೆದಿದೆ.

ವರ್ಷದಲ್ಲಿ ಮಾಡಿದ್ದು

7 ದೇಶಗಳ ಮೇಲೆ ಬಾಂಬ್ ದಾಳಿ

229 ಹೊರಡಿಸಿರುವ ಕಾರ್ಯಾದೇಶಗಳು. ಅಧಿಕಾರ ವಹಿಸಿಕೊಂಡ ದಿನವೇ 26 ಕಾರ್ಯಾದೇಶಗಳಿಗೆ ಟ್ರಂಪ್ ಸಹಿ ಹಾಕಿದ್ದರು. ವರ್ಷದಲ್ಲಿ ಗರಿಷ್ಠ ಕಾರ್ಯಾದೇಶ ಹೊರಡಿಸಿರುವ ಎರಡನೇ ಅಧ್ಯಕ್ಷ ಇವರು. ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರು ತಮ್ಮ ಮೂರನೇ ಅವಧಿಯಲ್ಲಿ ಎರಡನೇ ವಿಶ್ವ ಯುದ್ಧಕ್ಕೂ ಮೊದಲು ಒಂದೇ ವರ್ಷದಲ್ಲಿ 381 ಆದೇಶಗಳಿಗೆ ಸಹಿ ಹಾಕಿದ್ದರು

88 ಕ್ಷಮಾದಾನ ನೀಡಿರುವ ಜನರ ಸಂಖ್ಯೆ. ಮೊದಲ ದಿನವೇ ಆರು ಮಂದಿಗೆ ಅವರು ಕ್ಷಮಾದಾನ ನೀಡಿದ್ದರು

100 ಭೇಟಿ ಮಾಡಿದ ಹೊರದೇಶಗಳ ನಾಯಕರು. ಈ ಪೈಕಿ 49 ಮಂದಿಯನ್ನು ಶ್ವೇತ ಭವನದಲ್ಲೇ ಅವರು ಭೇಟಿಯಾಗಿದ್ದಾರೆ

13 ವಿದೇಶ ಪ್ರವಾಸ

6.05 ಲಕ್ಷ ಗಡಿಪಾರು ಮಾಡಿದ ಅಕ್ರಮ ವಲಸಿಗರು

19 ಲಕ್ಷ ಸ್ವಯಂ ಪ್ರೇರಿತರಾಗಿ ಗಡಿಪಾರುಗೊಂಡ ವಲಸಿಗರು

16 ಲಕ್ಷ ಟ್ರಂಪ್ ವಲಸೆ ನೀತಿಯಿಂದ ಕಾನೂನು ಪ್ರಕಾರವಾಗಿ ಹೊಂದಿದ್ದ ವಲಸಿಗ ಸ್ಥಾನಮಾನ ಕಳೆದುಕೊಂಡವರು

'ಮನಶ್ಶಾಂತಿ' ಕದಡಿದ ನೊಬೆಲ್ ಶಾಂತಿ ಪ್ರಶಸ್ತಿ

ಮೊದಲ ವರ್ಷದಲ್ಲೇ ಟ್ರಂಪ್ ಕಣ್ಣಿಟ್ಟಿದ್ದು ನೊಬೆಲ್ ಶಾಂತಿ ಪ್ರಶಸ್ತಿ ಮೇಲೆ. ಜಗತ್ತಿನ ಶಾಂತಿದೂತ ಎಂದು ತಮ್ಮನ್ನು ಬಿಂಬಿಸಿಕೊಂಡಿದ್ದ ಅವರು, 'ನಾನು ಎಂಟು ಯುದ್ಧಗಳನ್ನು ನಿಲ್ಲಿಸಿದ್ದೇನೆ. ನೊಬೆಲ್ ಶಾಂತಿ ಪ್ರಶಸ್ತಿ ನನಗೇ ಸಿಗಬೇಕು' ಎಂದು ಪ್ರತಿಪಾದಿಸುತ್ತಾ ಬಂದಿದ್ದರು. ಪಾಕಿಸ್ತಾನ, ಇಸ್ರೇಲ್ ಸೇರಿದಂತೆ ಕೆಲವು ರಾಷ್ಟ್ರಗಳು ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಶಿಫಾರಸು ಮಾಡಿದ್ದವು. ಆದರೆ, ನಾರ್ವೆಯ ನೊಬೆಲ್ ಫೌಂಡೇಷನ್ ವೆನೆಜುವೆಲಾದ ವಿಪಕ್ಷ ನಾಯಕಿ ಮಾರಿಯಾ ಕೊರಿನಾ ಮಚಾದೊ ಅವರನ್ನು ಆಯ್ಕೆ ಮಾಡಿತು. ಮರುದಿನ ಮಾಧ್ಯಮದವರೊಂದಿಗೆ ಮಾತನಾಡಿದ್ದ ಟ್ರಂಪ್, 'ಪ್ರಶಸ್ತಿಗೆ ಆಯ್ಕೆಯಾಗಿರುವ ವ್ಯಕ್ತಿ ನನಗೆ ಕರೆ ಮಾಡಿದ್ದರು. ನಿಮ್ಮ ಗೌರವಾರ್ಥ ನಾನು ಇದನ್ನು ಸ್ವೀಕರಿಸುತ್ತಿದ್ದೇನೆ. ನಿಜವಾಗಲೂ ಈ ಪ್ರಶಸ್ತಿಗೆ ನೀವು ಅರ್ಹರು ಎಂದು ಹೇಳಿದ್ದಾರೆ' ಎಂದಿದ್ದರು.



ವಾರದ ಹಿಂದೆ ಮಚಾದೊ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಹಸ್ತಾಂತರಿಸಿದ್ದರು. ಪ್ರಶಸ್ತಿಯನ್ನು ತಾವು ಸ್ವೀಕರಿಸುತ್ತಿರುವುದಾಗಿ ಅವರು ಹೇಳಿದ್ದರು. ಆದರೆ, ನೊಬೆಲ್ ಫೌಂಡೇಷನ್, ಒಬ್ಬರನ್ನು ಆಯ್ಕೆ ಮಾಡಿದ ನಂತರ ಪ್ರಶಸ್ತಿಯನ್ನು ಬೇರೆಯವರಿಗೆ ನೀಡುವ ಹಾಗಿಲ್ಲ ಎಂದು ಹೇಳಿತ್ತು. ಇದಕ್ಕೆ ಅಸಮಾಧಾನಗೊಂಡಿದ್ದ ಟ್ರಂಪ್ ನಾರ್ವೆ ಅಧ್ಯಕ್ಷರಿಗೆ ಪತ್ರ ಬರೆದು, 'ಎಂಟಕ್ಕೂ ಹೆಚ್ಚು ಯುದ್ಧಗಳನ್ನು ನಿಲ್ಲಿಸಿದ ನನಗೆ ನೀವು ನೋಬೆಲ್ ಶಾಂತಿ ಪ್ರಶಸ್ತಿ ಕೊಡಬಾರದು ಎಂದು ತೀರ್ಮಾನಿಸಿರುವುದರಿಂದ, ನಾನು ಇನ್ನು ಮುಂದೆ ಕೇವಲ ಶಾಂತಿಯ ಬಗ್ಗೆಯೇ ಯೋಚಿಸಬೇಕೆಂದೇನೂ ಇಲ್ಲ. ಹಾಗಿದ್ದರೂ, ಅದು ಯಾವಾಗಲೂ ನನಗೆ ಪ್ರಮುಖ ವಿಷಯವಾಗಿರಲಿದೆ. ಆದರೆ, ಇನ್ನೀಗ ಅಮೆರಿಕಕ್ಕೆ ಯಾವುದು ಒಳ್ಳೆಯದು ಎಂಬುದರ ಬಗ್ಗೆ ನಾನು ಯೋಚಿಸಬಹುದು' ಎಂದು ಹೇಳಿ ಗ್ರೀನ್‌ಲ್ಯಾಂಡ್ ಅಮೆರಿಕಕ್ಕೆ ಯಾಕೆ ಮುಖ್ಯ ಎಂಬುದನ್ನು ವಿವರಿಸಿದ್ದರು!

ಗ್ರೀನ್‌ಲ್ಯಾಂಡ್ ಮೇಲೆ ಕಣ್ಣು

ಡೆನ್ಮಾರ್ಕ್‌ನ ಅಧೀನದಲ್ಲಿರುವ ಹಿಮದ್ವೀಪ ಗ್ರೀನ್‌ಲ್ಯಾಂಡ್ ಮೇಲೆ ಮೊದಲಿನಿಂದಲೂ ಟ್ರಂಪ್ ಕಣ್ಣಿಟ್ಟಿದ್ದಾರೆ. ವೆನೆಜುವೆಲಾದ ಮೇಲೆ ಸೇನಾ ಕಾರ್ಯಾಚರಣೆ ನಡೆಸಿ ಅಲ್ಲಿನ ಅಧ್ಯಕ್ಷ ನಿಕೊಲಸ್ ಮಡೂರೊ ಅವರನ್ನು ಸೆರೆ ಹಿಡಿದು ಕರೆತಂದ ನಂತರ ಗ್ರೀನ್‌ಲ್ಯಾಂಡ್ ಅನ್ನು ವಶಕ್ಕೆ ಪಡೆಯುವ ಅವರ ಹೆಬ್ಬಯಕೆ ಇನ್ನಷ್ಟು ತೀವ್ರಗೊಂಡಿದೆ. ವಾರದಿಂದೀಚೆಗೆ ಅವರು ಹೋದಲ್ಲಿ ಬಂದಲ್ಲಿ ಗ್ರೀನ್‌ಲ್ಯಾಂಡ್‌ನ ಜಪ ಮಾಡುತ್ತಿದ್ದಾರೆ. ಅಮೆರಿಕದ ಪ್ರಯತ್ನಕ್ಕೆ ವಿರೋಧ ವ್ಯಕ್ತಪಡಿಸಿದ ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳ ಮೇಲೆ ಹೆಚ್ಚುವರಿ ಸುಂಕದ ಬರೆ ಎಳೆದಿದ್ದಾರೆ. ಕೆನಡಾ, ವೆನೆಜುವೆಲಾ ಮತ್ತು ಗ್ರೀನ್‌ಲ್ಯಾಂಡ್ ಕೂಡ ಅಮೆರಿಕಕ್ಕೆ ಸೇರಿದ್ದು ಎನ್ನುವ ಅರ್ಥ ಬರುವ, ಅವುಗಳ ಮ್ಯಾಪ್‌ನಲ್ಲಿ ಅಮೆರಿಕದ ಧ್ವಜದ ಬಣ್ಣಗಳನ್ನು ಬಳಿದಿರುವ ಎಐ ಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ. ಗ್ರೀನ್‌ಲ್ಯಾಂಡ್: 'ಅಮೆರಿಕದ ಭೂಭಾಗ, ಸ್ಥಾಪನೆ 2026' ಎಂದು ಫಲಕದಲ್ಲಿ ಬರೆದು ಟ್ರಂಪ್ ಅವರು ಅಮೆರಿಕದ ಧ್ವಜವನ್ನು ಗ್ರೀನ್‌ಲ್ಯಾಂಡ್‌ನಲ್ಲಿ ನೆಡುತ್ತಿರುವ ಎಐ ಚಿತ್ರವನ್ನೂ ಹಂಚಿಕೊಂಡಿದ್ದಾರೆ.

ಯುದ್ಧ ಸ್ಥಗಿತ: 70 ಬಾರಿ ಜಪ

2025ರ ಮೇ 7ರಿಂದ 10ರವರೆಗೆ ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದಿದ್ದ ಯುದ್ಧವನ್ನು ನಿಲ್ಲಿಸಿದ್ದು ತಾವೇ ಎಂದು ಟ್ರಂಪ್ ಅವರು ಒಂಬತ್ತು ತಿಂಗಳಲ್ಲಿ 70 ಬಾರಿ ಹೇಳಿದ್ದಾರೆ. ಪಾಕಿಸ್ತಾನವು ಇದನ್ನು ಅನುಮೋದಿಸಿ, ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕು ಎಂದು ಶಿಫಾರಸು ಮಾಡಿದ್ದರೂ, ಭಾರತವು ಟ್ರಂಪ್ ಅವರ ಮಧ್ಯಪ್ರವೇಶವನ್ನು ನಿರಾಕರಿಸುತ್ತಲೇ ಬಂದಿದೆ. ಶಾಂತಿ ಪ್ರಶಸ್ತಿಯ ವಿಷಯ ಬಂದಾಗಲೆಲ್ಲ ಭಾರತ ಮತ್ತು ಪಾಕಿಸ್ತಾನ ನಡುವಿನ ಸೇನಾ ಸಂಘರ್ಷವನ್ನು ಪ್ರಸ್ತಾಪಿಸುವ ಅವರು, 'ಸುಂಕ ಹೇರಿಕೆಯ ಒತ್ತಡವನ್ನು ಹಾಕಿ ಸಂಭವನೀಯ ಪರಮಾಣು ಸಂಘರ್ಷವನ್ನು ತಡೆದಿದ್ದೇನೆ' ಎಂದು ಹೇಳುತ್ತಾ ಬಂದಿದ್ದಾರೆ.

ಅವರ ಮಾತನ್ನು ಒಪ್ಪದಿರುವುದಕ್ಕೆ ಭಾರತದ ಮೇಲೆ ಅಸಮಾಧಾನವನ್ನೂ ಹೊಂದಿದ್ದಾರೆ. ತಮ್ಮನ್ನು ಹೊಗಳಿದ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಂ ಮುನೀರ್ ಅವರನ್ನು ಅಮೆರಿಕಕ್ಕೆ ಆಹ್ವಾನಿಸಿ ಔತಣವನ್ನೂ ನೀಡಿದ್ದಾರೆ.

ವಿಚಿತ್ರ ಹೇಳಿಕೆಗಳು

- 'ಟ್ರಂಪ್ ಯಾವುದರ ಬಗ್ಗೆ ಏನು ಹೇಳಿದರೂ ಅದು ಸರಿಯಾಗಿರುತ್ತೆ. ಹೌದಲ್ಲವೇ?'
- 'ಸರ್ಕಾರದ ಇಲಾಖೆ, ವಾಣಿಜ್ಯ ಇಲಾಖೆ ಅಥವಾ ಬೊಕ್ಕಸಕ್ಕೆ ನಾನು ಹೋದರೆ, ಅಲ್ಲಿ ಏನಾದರೂ ನನಗೆ ಇಷ್ಟವಾದರೆ, ಅದನ್ನು ತೆಗೆದುಕೊಳ್ಳಲು ನನಗೆ ಅನುಮತಿ ಇದೆ'
- 'ಪೋಪ್ ಆಗಲು ನಾನು ಇಷ್ಟಪಡುತ್ತೇನೆ. ಅದು ನನ್ನ ಪ್ರಥಮ ಆಯ್ಕೆ' (ಪೋಪ್ ಫ್ರಾನ್ಸಿಸ್ ಮೃತರಾದ ನಂತರ ಹೇಳಿದ್ದು)
- 'ಸುಂಕ ಎನ್ನುವುದು ನನ್ನ ನೆಚ್ಚಿನ ಪದ'
- 'ಗಾಜಾವನ್ನು ಕೊಂಡುಕೊಳ್ಳಲು ಮತ್ತು ಅದರ ಮಾಲೀಕತ್ವ ಸಾಧಿಸಲು ನಾನು ಬದ್ಧನಾಗಿದ್ದೇನೆ'
- 'ಕರೋಲಿನ್! ತಮ್ಮ ಸುಂದರ ಮುಖದೊಂದಿಗೆ ಆಕೆ ಎದ್ದುನಿಲ್ಲುತ್ತಾಳೆ ಮತ್ತು ಆಕೆಯ ಸುಂದರ ತುಟಿಗಳು ಮಷೀನ್ ಗನ್‌ನಂತೆ ನಿರಂತರವಾಗಿ, ತಡೆಯೇ ಇಲ್ಲದಂತೆ ಉಲಿಯುತ್ತಲೇ ಇರುತ್ತವೆ' (ತಮ್ಮ ಮಾಧ್ಯಮ ಕಾರ್ಯದರ್ಶಿ ಕರೋಲಿನಾ ಲೀವಿಟ್ಟ ಟಿ.ವಿ ಶೋಗಳಲ್ಲಿ ಮಾತನಾಡುವ ಬಗ್ಗೆ)
- 'ವಿಶ್ವಸಂಸ್ಥೆಯಿಂದ ನನಗೆ ಸಿಕ್ಕಿದ್ದು ಒಂದು ಕೆಟ್ಟುಹೋದ ಟೆಲಿಪ್ರಾಂಪ್ಟರ್ ಮತ್ತು ಅರ್ಧದಲ್ಲಿ ಕೆಟ್ಟುನಿಲ್ಲುವ ಎಸ್ಕಲೇಟರ್. ಅಮೆರಿಕದ ಮೊದಲ ಮಹಿಳೆಯ (ಟ್ರಂಪ್ ಪತ್ನಿ) ದೇಹದ ಆಕಾರ ಚೆನ್ನಾಗಿದೆ, ಇಲ್ಲದಿದ್ದರೆ ಕುಸಿದುಬೀಳುತ್ತಿದ್ದಳು. ನಮ್ಮಿಬ್ಬರ ಆಕಾರಗಳೂ ಚೆನ್ನಾಗಿವೆ' (ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಎಸ್ಕಲೇಟರ್ ಕೆಟ್ಟುನಿಂತಾಗ)
- ಆತ ಹಾಗೆ ಹೇಳಿದನೆ? ಇರಲಿ, ಅಷ್ಟಕ್ಕೂ ಆತ ಬರೋದು ಯಾರಿಗೂ ಬೇಡ ಬಿಡಿ. ಏಕೆಂದರೆ, ಶೀಘ್ರದಲ್ಲೇ ಆತ ಕುರ್ಚಿಯಿಂದ ಕೆಳಗಿಳಿಯುತ್ತಾನೆ. ಅವರ ವೈನ್ ಮತ್ತು ಶ್ಯಾಂಪೇನ್ ಮೇಲೆ ನಾನು ಶೇ 200 ಸುಂಕ ವಿಧಿಸುತ್ತೇನೆ. ಆಗ ಆತ ನಮ್ಮೊಂದಿಗೆ ಸೇರಲು ಬರುತ್ತಾನೆ. ಆಗ, ಆತನ್ನು ನಾವು ಸೇರಿಸಬೇಕೆಂದೇನೂ ಇಲ್ಲ' (ತಾವು ಪ್ರಸ್ತಾಪಿಸಿರುವ ಶಾಂತಿ ಮಂಡಳಿಗೆ ಸೇರಲು ನಿರಾಕರಿಸಿದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹೇಳಿಕೆ ಬಗ್ಗೆ)

> ನಾನು ಏಳು ಯುದ್ಧಗಳನ್ನು ನಿಲ್ಲಿಸಿದ್ದೇನೆ. ಆ ಎಲ್ಲ ದೇಶಗಳ ನಾಯಕರೊಂದಿಗೂ ಮಾತನಾಡಿದ್ದೇನೆ. ಆದರೆ, ವಿಶ್ವಸಂಸ್ಥೆಯಿಂದ ನನಗೆ ಕನಿಷ್ಠ ಒಂದು ಫೋನ್ ಕರೆ ಕೂಡ ಬಂದಿಲ್ಲ

ಆಧಾರ: ರಾಯಿಟರ್ಸ್, ಪಿಟಿಐ, ದಿ ನ್ಯೂಯಾರ್ಕ್ ಟೈಮ್ಸ್, ಎನ್‌ಬಿಸಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಬೀದಿಯಲ್ಲಿ ಬೃಹತ್ ಸಂಖ್ಯೆಯ ಜನ ನೆರೆದಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿರುದ್ಧ ನ್ಯೂಯಾರ್ಕ್ ನಗರದಲ್ಲಿ ಜನರು ಭಾರಿ ಪ್ರತಿಭಟನೆ ನಡೆಸಿದರು ಎಂದು ಕೆಲವರು ಚಿತ್ರವನ್ನು ಹಂಚಿಕೊಳ್ಳುವ ಮೂಲಕ ಪ್ರತಿಪಾದಿಸುತ್ತಿದ್ದಾರೆ. ಆದರೆ, ಈ ಸುದ್ದಿ ವಾಸ್ತವ ಅಲ್ಲ.



ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ ಹಲವರು ಇದೇ ಚಿತ್ರವನ್ನು ಹಂಚಿಕೊಂಡು ಇದೇ ರೀತಿ ಪ್ರತಿಪಾದಿಸಿರುವುದು ಕಂಡಿತು. ಗೂಗಲ್‌ನಲ್ಲಿ ಈ ಬಗ್ಗೆ ಹುಡುಕಾಟ ನಡೆಸಿದಾಗ, ಬ್ರಿಟನ್‌ನ 'ಇಂಡಿಪೆಂಡೆಂಟ್' ಪತ್ರಿಕೆಯು 2018ರ ಏ.6ರಂದು ಇದೇ ಚಿತ್ರವನ್ನು ಪ್ರಕಟಿಸಿರುವುದು ಕಂಡಿತು. '2016ರಿಂದ ಅಮೆರಿಕದಲ್ಲಿ ಐವರಲ್ಲಿ ಒಬ್ಬರು ರ್‍ಯಾಲಿ ಅಥವಾ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ ಎಂದು ಸಮೀಕ್ಷೆಯೊಂದು ತಿಳಿಸಿದೆ' ಎಂದು ವರದಿ ಉಲ್ಲೇಖಿಸಿತ್ತು. ಅದರ ಆಧಾರದಲ್ಲಿ ನಿರ್ದಿಷ್ಟ ಪದದ ಮೂಲಕ ಹುಡುಕಾಟ ಮುಂದುವರಿಸಿದಾಗ, ಅಮೆರಿಕದ ಸಾರ್ವಜನಿಕ ಎಫ್‌ಎಂ ರೇಡಿಯೊ ವಾಹಿನಿ ಡಬ್ಲ್ಯುಎಎಂಯು 88.5ರ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿದ್ದ ಸುದ್ದಿ ಕಂಡಿತು. ವಾಷಿಂಗ್ಟನ್‌ನಲ್ಲಿ 2018 ಮಾರ್ಚ್ 24ರಂದು ಗನ್ ಸಂಸ್ಕೃತಿಯ ತಡೆಗೆ ಆಗ್ರಹಿಸಿದ ರ್‍ಯಾಲಿಯ ಸುದ್ದಿಯೊಂದಿಗೆ ಈ ಚಿತ್ರ ಪ್ರಕಟವಾಗಿತ್ತು. ಇತರ ಹಲವು ಮಾಧ್ಯಮಗಳಲ್ಲಿಯೂ ಈ ಸುದ್ದಿ ಪ್ರಕಟವಾಗಿತ್ತು. ಹಳೆಯ ಚಿತ್ರವನ್ನು ಹಂಚಿಕೊಂಡು ಟ್ರಂಪ್ ವಿರುದ್ಧದ ಪ್ರತಿಭಟನೆಯ ಚಿತ್ರ ಎಂದು ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಕಬೀರನ ಕನಸು



ಪಿ.ಚಂದ್ರಿಕಾ

ಕಬೀರನಿಗೆ ನೇಕಾರಿಕೆ ತಂದೆಯಿಂದ ಬಂದ ವೃತ್ತಿಯಾಗಿತ್ತು. ಆದರೂ ಅವನಿಗೆ ನೂಲಿಗಿಂತ ಅಧ್ಯಾತ್ಮದ ಕಡೆಗೆ ಒಲವಿತ್ತು. ತನ್ನ ಬಳಿ ಬರುವ ಗಿರಾಕಿಗಳಿಗಿಂತ ದೈವ ಸಾಕ್ಷಾತ್ಕಾರದ ಕುರಿತ ಚಿಂತನೆಯ ಸಾಧುಗಳು ಮುಖ್ಯವಾಗುತ್ತಿದ್ದರು. ದಾರಗಳು ಒಂದರೊಳಗೊಂದು ಹಾಸು ಹೊಕ್ಕು ಬಟ್ಟೆಯಾಗುವ ಅದ್ಭುತವನ್ನು ನೋಡುತ್ತಲೇ ಧ್ಯಾನಾಸಕ್ತನಾಗುತ್ತಿದ್ದ. ಇದ್ದಕ್ಕಿದ್ದಂತೆ ದೇಶ ಪರ್ಯಟನೆ ಹೊರಟುಬಿಡುತ್ತಿದ್ದ. ಅವನೇ ತನ್ನ ಬರಹದಲ್ಲಿ ಒಂದು ಕಡೆ ಹೇಳುತ್ತಾನೆ, 'ನಾನು ಕಾಬಾಕ್ಕೂ ಹೋಗಿದ್ದೇನೆ. ಹಜ್‌ಗೆ ಕೂಡಾ' ಎಂದು. ಅನೇಕ ಗ್ರಂಥಗಳಲ್ಲಿ ಆತ ಗೋಮತೀ ತೀರಕ್ಕೆ, ಪುರಿ ಜಗನ್ನಾಥಕ್ಕೆ ಹೋದ ಉಲ್ಲೇಖಗಳು ದೊರಕುತ್ತವೆ.

ಒಮ್ಮೆ ದೊಡ್ಡ ಗಾಳಿ ಸುದ್ದಿ ಹಬ್ಬುತ್ತದೆ, 'ಕಬೀರನು ನೇಯುವುದನ್ನು ತ್ಯಜಿಸಿದ್ದಾನೆ. ಅವನ ಮೈಮೇಲೆಲ್ಲಾ ಹರಿಯ ಹೆಸರು ಛಾಪಿಸಿದೆ' ಎಂದು. ಇದನ್ನು ಕೇಳಿದ ಕೆಲವರಲ್ಲಿ ಕುತೂಹಲವೂ, ಇನ್ನು ಕೆಲವರಲ್ಲಿ ತಿರಸ್ಕಾರವೂ ಮೂಡಿತ್ತು. ಅವನನ್ನು ಅಪಹಾಸ್ಯ ಕೂಡಾ ಮಾಡಿದರು.

ಕರ್ಮಠನಾದ ವ್ಯಕ್ತಿಯೊಬ್ಬ ಕಬೀರನ ಬಳಿಗೆ ಬಂದು, 'ನೀನು ಅನ್ಯಧರ್ಮೀಯನಾಗಿದ್ದು, ಹರಿಯ ನಾಮವನ್ನು ದೇಹದ ಮೇಲೆ ಹೇಗೆ ಛಾಪಿಸಿಕೊಂಡೆ? ನಿನ್ನ ದೇವರ ಹೆಸರನ್ನು ಬರೆದುಕೊಳ್ಳಬೇಕಿತ್ತು. ಇಂಥಾ ಸುಳ್ಳುಗಳಿಂದ ನೀನು ಏನನ್ನು ಸಾಧಿಸುವೆ' ಎಂದ. ಕಬೀರ ಆಕಾಶವನ್ನು ನೋಡಿದ. ಮೋಡಗಳು ಹರಡಿ ತೇಲುತ್ತಿದ್ದವು. ಅದನ್ನು ತೋರುತ್ತಾ, 'ಅದೇನದು ಗಾಳಿ ಬೀಸಿದಾಕ್ಷಣ ಆಕಾರ ಬದಲಿಸುತ್ತಲೇ ಇದೆಯಲ್ಲಾ' ಎಂದ. ಕರ್ಮಠನು, 'ಅದು ಮೋಡ. ಆಕಾರ ಬದಲಿಸುವುದು ಅದರ ಗುಣ. ಅದಕ್ಕೂ ದೈವತ್ವಕ್ಕೂ ಸಂಬಂಧ ಏನು?' ಎಂದ. ಕಬೀರ ಗಹನವಾಗಿ, 'ನಾನು ಮೋಡದ ಬಗ್ಗೆ ಮಾತ್ರ ಮಾತಾಡುತ್ತಿರುವೆ. ದೈವದ ಬಗ್ಗೆ ಅಲ್ಲ' ಎಂದ. ಸ್ವಲ್ಪ ಹೊತ್ತು ಗಾಳಿಗೆ ಮೋಡ ಮತ್ತೆ ತನ್ನ ಆಕಾರವನ್ನೇ ಬದಲಿಸಿತು. ಮತ್ತೆ ಕಬೀರ ಮೋಡವನ್ನು ತೋರುತ್ತಾ, 'ಮತ್ತೆ ಮೋಡ ತನ್ನ ಆಕಾರ ಬದಲಿಸಿತು. ಈಗ ಹೇಳು ಅದು ಮೋಡವೋ ಅಲ್ಲವೋ?' ಎಂದ. ಅದಕ್ಕೆ ಕರ್ಮಠ ಸ್ವಲ್ಪ ಕೋಪದಿಂದ 'ಅದು ಮೋಡವೇ, ಆಕಾರ ಬದಲಾದ ತಕ್ಷಣ ಅದರ ಹೆಸರು ಬದಲಾಗಲ್ಲ' ಎಂದ. ಕಬೀರ ನಗುತ್ತಾ, 'ನೀನು ಹರಿಯ ಹೆಸರನ್ನು ಹೇಗೆ ಛಾಪಿಸಿಕೊಂಡೆ ಎಂದೆಯಲ್ಲವೇ? ಕಡೆಗೂ ಪರಮಾತ್ಮ ಎನ್ನುವುದು ಒಂದು ಹೆಸರಷ್ಟೇ. ಅದು ಹರಿಯಾದರೂ, ಅಲ್ಲಾನಾದರೂ ಒಂದೇ. ಹೆಸರು ಬೇರೆಯಾದ ತಕ್ಷಣ ಭಾವ ಬೇರೆಯಾಗಲ್ಲ. ಮುಖ್ಯ ಅವನು ಒಳಿತಿನ ರೂಪದಲ್ಲಿ ನಮ್ಮೊಂದಿಗಿರಬೇಕು' ಎಂದ.

ನಿಜ ಮಡಕೆ ಬೇರೆ ಬೇರೆ ಆಕಾರದಲ್ಲಿರಬಹುದು-ಆಗಿರುವುದು ಒಂದೇ ಮಣ್ಣಿನಿಂದ. ಹಸುವಿನ ಬಣ್ಣ ಬೇರೆಯಾಗಿರಬಹುದು ಹಾಲು ಮಾತ್ರ ಬಿಳಿಯೇ. ಹೊಸ್ತಿಲ ಮೇಲಿಟ್ಟ ದೀಪ ಒಳಹೊರಗೂ ಒಂದೇ ಬೆಳಕನ್ನು ಹರಡುವ ಹಾಗೆ ದೈವ. ಬಣ್ಣ, ಆಕಾರ, ಬಟ್ಟೆ ಬೇರೆಯಾದರೂ ಶ್ರದ್ಧೆ ಮಾತ್ರ ಒಂದೇ. ಕಬೀರ ಸಮಾಜವನ್ನು ಕಟ್ಟಿದ್ದು ಎಷ್ಟು ಚಂದ ಅಲ್ಲವೇ! ಇದನ್ನು ಹೇಳಿದ ಕಬೀರನಿಗೆ ಅವನ ಕಾಲದಲ್ಲಿ ಗೌರವ ದೊರಕಲಿಲ್ಲ. ಆದರೆ ಅವನ ಕನಸು ಈಗಲೂ ನಮ್ಮನ್ನು ಹಿಂಬಾಲಿಸುತ್ತಲೇ ಇದೆ. ❖

ಪದಬಂಧ 6292


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಂಗಳ ಕಾರ್ಯವಾದ ಮೇಲೆ ಮಾಡುವ ಜಳಕ (6)
4.ಗುರಿಯಿಟ್ಟು ಹೊಡೆಯುವುದರಲ್ಲಿ ನಿಪುಣ (4)
5.ಅಧಿಕಾರ ಪತ್ರವಿದು (3)
7.ನೀರ ಮೇಲಣ ಗುಳ್ಳೆ (3)
10.ರೀತಿಯೊಡಗೂಡುವ ಸಂಪ್ರದಾಯ (3)
12.ಕನ್ನ ಹಾಕಿ ಕದ್ದೊಯ್ದ ಚಿನ್ನ! (3)
13.ರಾತ್ರಿವೇಳೆ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)
15.ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ

1.ಅವನು ಸರ ತರಲು ತೋರಿದ ಅರ್ಜೆಂಟು! (4)
2.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ! (2)
3.ಅನ್ಯರಿಗೆ ಅಧೀನರಾಗಿರುವುದು (4)
6.ಈತ ಕೆಟ್ಟ ನಡತೆಯವನು (4)
7.ಕೋಟೆಯ ಮೇಲಿನ ಕೊತ್ತಳ (3)
8.ಸೇನಾಧಿಪತಿ ಇಲ್ಲಿದ್ದಾನೆ (4)
9.ತೆಳ್ಳಗಿನ ಸೊಂಟ (4)
11.ನಿದ್ದೆಯ ಜೊಂಪು (4)
14.ಸೂರ್ಯನ ಇನ್ನೊಂದು ಹೆಸರು (2)



6291ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚಾರಣಕವಿ 4.ಪಾನೀಯ 5.ಧಾವಂತ 6.ಕಶೇರು 8.ಸಂತಸ 10.ಅಂಡಜ 11.ಕುಣಿಕೆ 15.ಲಕ್ಷಣ 16.ಆಯಾಸ 17.ಮಚ್ಚರದಾನಿ

ಮೇಲಿಂದ ಕೆಳಕ್ಕೆ: 1.ಚಾರ್ವಾಕ 2.ಣರಕಮೀಸ 3.ವಿಧಾತ 4.ಪಾತಕ 7.ಶೇಕಡ 9.ತರುಣಿ 10.ಅಂತ್ಯಸಂಸ್ಕಾರ 12.ಕೆಲಸ 13.ಕಣಮ 14.ಅವನಿ

ಸುಡೊಕು 6676

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

6675 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಜನವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ಥಿ ಗಂ. 26-29 ನಕ್ಷತ್ರ: ಶತಭಿಷ ಗಂ. 14-27 ಯೋಗ: ವರಿಯಾನ್ ಗಂ. 17-38 ಕರಣ: ವಣಿಜ ಗಂ. 14-41 ಮಕರ ಮಾಸದ 08 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30-03-00 ಸೂರ್ಯೋದಯ : 07-01 ಸೂರ್ಯಾಸ್ತ : 06-23 ಮುಸ್ಲಿಂ ದಿನಾಂಕ : 2 ಶಬನ್ ದಿನ ವಿಶೇಷ : ವರದ ಚತುರ್ಥಿ ಅದೃಷ್ಟ ಸಂಖ್ಯೆ : 7, 10

ಮೇಷ: ಉದ್ಯೋಗದಲ್ಲಿ ಸ್ಥಳ ಬದಲಾವಣೆ ಅಥವಾ ಅಧಿಕ ಜವಾಬ್ದಾರಿ ಹೊರಬೇಕಾಗುವ ಸಾಧ್ಯತೆಗಳಿವೆ. ಯುವ ಕಲಾವಿದರಿಗೆ ಅವಕಾಶಗಳು ಲಭಿಸಿವೆ. ಬರವಣಿಗೆಯಲ್ಲಿ ಉತ್ಸಾಹ ಹೆಚ್ಚುವುದು.

ವೃಷಭ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವಂಥ ದೊಡ್ಡ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಮಂಜಸವಲ್ಲ. ಆಜ್ಞೆಯನ್ನು ಪಾಲಿಸುವ ಜನರು ಸಿಗುತ್ತಾರೆ.

ಮಿಥುನ: ಆದಾಯ ಅಧಿಕವಾಗಿಯೇ ಇದ್ದರೂ ಖರ್ಚಿಗೆ ಬೇಕಾದಂಥ ಸಂದರ್ಭದಲ್ಲಿ ಕೈಗೆ ಎಟುಕದೇ ಇರುವಂಥ ಪರಿಸ್ಥಿತಿ ಉಂಟಾಗುತ್ತದೆ. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ಪಡೆಯುವ ಕಾಲ ನಿಮ್ಮದಾಗಲಿದೆ.

ಕರ್ಕಾಟಕ: ಉತ್ತಮ ಯೋಚನಾ ಸಾಮರ್ಥ್ಯವನ್ನು ಹೊಂದಿದ್ದರೂ ಒತ್ತಡದಲ್ಲಿ ನಿರ್ಧಾರ ತೆಗೆದುಕೊಳ್ಳದಿರಿ. ಮೇಲಧಿಕಾರಿಗಳು ನಿಮ್ಮ ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯ ನಿರ್ವಹಿಸಿ.

ಸಿಂಹ: ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ಮಕ್ಕಳ ವಿಚಾರದಲ್ಲಿ ತುಂಬಾ ಭಾವನಾತ್ಮಕವಾದ ನಿರ್ಧಾರವನ್ನು ತೆಗೆದುಕೊಳ್ಳುವಿರಿ.

ಕನ್ಯಾ: ಹಿರಿಯರಿಂದ ಅಪೂರ್ಣವಾದಂಥ ಕೆಲಸವನ್ನು ಪೂರ್ಣಗೊಳಿಸು-ವಂಥ ಅಪೂರ್ವ ಅವಕಾಶ ಒದಗಿ ಬರಲಿದೆ. ವ್ಯಾಪಾರ-ವ್ಯವಹಾರದಲ್ಲಿ ಮತ್ತು ಪ್ರಯಾಣ ನಡೆಸುವಾಗ ನಯವಂಚಕರ ಬಗ್ಗೆ ಎಚ್ಚರವಹಿಸಿ.

ತುಲಾ: ಸ್ವಲ್ಪ ಎಚ್ಚರ ತಪ್ಪಿದಲ್ಲಿ ಶತ್ರುಗಳಿಂದ ತುಂಬಾ ಸುಲಭವಾಗಿ ಮೋಸ ಹೋಗುವಂಥ ಸಾಧ್ಯತೆಗಳಿವೆ. ಹಲವು ದಿನದ ಮನಸ್ತಾಪದ ಬಳಿಕ ಮನೆಯಲ್ಲಿ ಮಕ್ಕಳ ಸಡಗರ ಕಂಡು ಮನಸ್ಸಿಗೆ ಸಂತೋಷವಾಗುವುದು.

ವೃಶ್ಚಿಕ: ಉದ್ಯೋಗದಲ್ಲಿ ವೈಯಕ್ತಿಕ ಅನಿಸಿಕೆ ಕಂಪನಿಗಳಿಗೆ ಸಹಾಯಕಾರಿ. ವೃತ್ತಿ ತರಬೇತಿ ಹೊಂದಿದ ಕುಶಲ ಕರ್ಮಿಗಳಿಗೆ ಆದಾಯ ಹೆಚ್ಚಲಿದೆ. ಮಕ್ಕಳಿಗಾಗಿ ಆಟಿಕೆ ವಸ್ತುಗಳ ಖರೀದಿ ಮಾಡುವಂತಾಗುವುದು.

ಧನು: ದವಸ ಧಾನ್ಯಗಳ ಸಗಟು ವ್ಯಾಪಾರಿಗಳು ಹಾಗು ದಲ್ಲಾಳಿಗಳು ಹೆಚ್ಚಿನ ಅನುಕೂಲವನ್ನು ಪಡೆಯುವರು. ಕೊಡು ಕೊಳ್ಳುವಿಕೆಯ ವ್ಯವಹಾರದಿಂದ ಅಧಿಕ ಲಾಭ ಬರಲಿದೆ. ವ್ಯವಹಾರ ನಿಮಿತ್ತ ದೂರದ ಪ್ರಯಾಣ ಸಂಭವಿಸಲಿದೆ.

ಮಕರ: ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ. ಹೋಟೆಲ್ ಉದ್ಯಮದವರಿಗೆ ಅತ್ಯಧಿಕ ಲಾಭ ಪ್ರಾಪ್ತಿ. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಫಲವನ್ನು ಅನುಭವಿಸುವಿರಿ.


ಕುಂಭ: ಅನಾರೋಗ್ಯ ಅಥವಾ ಇನ್ನಿತರ ಕಾರಣಗಳಿಂದ ಏರುಪೇರಾಗಿದ್ದ ಮಕ್ಕಳ ವೇಳಾಪಟ್ಟಿಯು ನಿಧಾನವಾಗಿ ಸರಿಯಾಗುತ್ತದೆ. ವೈದ್ಯಕೀಯ ವಿದ್ಯಾ-ರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಅಗತ್ಯವೆನಿಸಲಿದೆ.

ಮೀನ: ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳಬಹುದು ಜಾಗ್ರತೆವಹಿಸಿ. ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಿ. ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕು ನಿವಾರಿಸಿಕೊಳ್ಳಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,232
ಇಂದಿನ ಅಂತ್ಯ: 25,157
ದಿನದ ಗರಿಷ್ಠ: 24,919
75

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು
100 ಕ್ಕೆ ₹550
12 ಕ್ಕೆ ₹75
ಮೈಸೂರು: 100 ಕ್ಕೆ ₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್‌-4 ₹188.50
ಆರ್‌ಎಸ್‌ಎಸ್‌-5 ₹183.50
ಗುಡ್ ಲಾಟ್ ₹172

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹350-748
ದ್ವಿತಳಿ (ಬಿ.ವಿ) ₹380-930

ಮುದ್ರೆಮನೆ ಕಾಫಿ
ಎಪಿ ₹26100
ಎಸಿ ₹14280
ಆರ್‌ಪಿ ₹17200
ಆರ್‌ಸಿ ₹10200

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1635 (1630)
ಸೋಯಾ (ರಿಫೈನ್ಡ್) ₹1355 (1350)
ಸೂರ್ಯಕಾಂತಿ (ರಿಫೈನ್ಡ್) ₹1615 (1600)
ಪಾಮೋಲಿನ್ ₹1295 (1290)

ರಾಜ್ಯದಲ್ಲಿ ದತ್ತಾಂಶ ಕೇಂದ್ರ: ಭಾರ್ತಿ ಒಲವು

ಉದ್ಯಮಿಗಳ ಜತೆ ಡಿಸಿಎಂ, ಎಂ.ಬಿ. ಪಾಟೀಲ ಮಾತುಕತೆ
ದತ್ತಾಂಶ ಕೇಂದ್ರ ಸ್ಥಾಪನೆಗೆ ಸಿಫಿ ಕೂಡ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎರಡನೇ ಸ್ತರದ ನಗರಗಳಲ್ಲಿ ಸಿಫಿ ಟೆಕ್ನಾಲಜೀಸ್ ಮತ್ತು ಭಾರ್ತಿ ಎಂಟರ್‌ಪ್ರೈಸಸ್ ದತ್ತಾಂಶ ಕೇಂದ್ರಗಳನ್ನು ತೆರೆಯಲು ಆಸಕ್ತಿ ವ್ಯಕ್ತಪಡಿಸಿವೆ. ಪಾನೀಯ ತಯಾರಿಕೆ ವಲಯದಲ್ಲಿ ಕಾರ್ಲ್ಸ್‌ಬರ್ಗ್ ಗ್ರೂಪ್ ₹350 ಕೋಟಿ ಹೂಡಿಕೆಯೊಂದಿಗೆ ಬಾಟ್ಲಿಂಗ್ ಘಟಕ ಸ್ಥಾಪಿಸುವ ಬದ್ಧತೆಯನ್ನು ಪುನರುಚ್ಚರಿಸಿದೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ಸಮಾವೇಶದ ಮೂರನೆಯ ದಿನವಾದ ಬುಧವಾರ ಹಲವು ಕಂಪನಿಗಳ ಉನ್ನತ ಮಟ್ಟದ ಪ್ರತಿನಿಧಿಗಳ ಜೊತೆ ಬಂಡವಾಳ ಹೂಡಿಕೆ



ದಾವೋಸ್‌ನಲ್ಲಿ ರಾಜನ್ ಭಾರ್ತಿ ಮಿತ್ತಲ್ ಅವರ ಜತೆ ಡಿ.ಕೆ. ಶಿವಕುಮಾರ್ ಹಾಗೂ ಎಂ.ಬಿ. ಪಾಟೀಲ ಸಮಾಲೋಚನೆ ನಡೆಸಿದರು. ಈ ವೇಳೆ, ಬಿಡಿಎ ಅಧ್ಯಕ್ಷ ಎನ್‌.ಎ. ಹ್ಯಾರಿಸ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು

ಕುರಿತು ಅವರು ಮಾತುಕತೆ ನಡೆಸಿದರು.

ಭಾರ್ತಿ ಎಂಟರ್‌ಪ್ರೈಸಸ್ ಉಪಾಧ್ಯಕ್ಷ ರಾಜನ್ ಭಾರ್ತಿ ಮಿತ್ತಲ್ ಜತೆ ನಡೆದ ಮಾತುಕತೆಯ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ಇದ್ದರು.

'ಬೆಂಗಳೂರಿನಲ್ಲಿರುವ ಹಲವು ಡೇಟಾ ಕೇಂದ್ರಗಳಲ್ಲಿ ಸಿಫಿ ಟೆಕ್ನಾಲಜೀಸ್ ಈಗಾಗಲೇ ಸಾಕಷ್ಟು ಹೂಡಿಕೆ ಮಾಡಿದೆ. ಎರಡನೇ ಸ್ತರದ ನಗರಗಳಲ್ಲೂ ಹೂಡಿಕೆಗೆ ಆಸಕ್ತಿ ಹೊಂದಿರುವ ಈ ಸಂಸ್ಥೆಯು, ಸಂಪರ್ಕ ವ್ಯವಸ್ಥೆ ಮತ್ತು ಭೂಮಿಯ ಲಭ್ಯತೆ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದೆ' ಎಂದಿದ್ದಾರೆ.

'ರಾಜ್ಯದಲ್ಲಿ ಇದುವರೆಗೆ ₹13 ಸಾವಿರ ಕೋಟಿ ಹೂಡಿಕೆ ಮಾಡಿರುವ ಭಾರ್ತಿ ಎಂಟರ್‌ಪ್ರೈಸಸ್, ಮತ್ತೊಂದು ಡೇಟಾ ಕೇಂದ್ರ ಸ್ಥಾಪಿಸಲು ಬಯಸುವುದಾಗಿ ಹೇಳಿದೆ. ಫೋರ್ಜಿಂಗ್ ಮತ್ತು ಪ್ರಿಸಿಷನ್ ಎಂಜಿನಿಯರಿಂಗ್ ಕಂಪನಿಯಾಗಿರುವ ಭಾರತ್ ಫೋರ್ಜ್ ಲಿಮಿಟೆಡ್ ಕೂಡ ರಾಜ್ಯದಲ್ಲಿ ಮತ್ತಷ್ಟು ಹೂಡಿಕೆಗೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ಪಡೆದುಕೊಂಡಿದೆ' ಎಂದು ತಿಳಿಸಿದ್ದಾರೆ.

'ಫ್ರಾನ್ಸ್ ಮೂಲದ ಎಐ ಕಂಪನಿ ಮಿಸ್ಟ್ರಾಲ್ ಎಐ, ಬೆಂಗಳೂರಿನಲ್ಲಿ ಹಂತಹಂತವಾಗಿ ಆರ್‌ ಆ್ಯಂಡ್‌ ಡಿ ಕೇಂದ್ರ ಅಭಿವೃದ್ಧಿಪಡಿಸಲು ಉತ್ಸುಕವಾಗಿದೆ. ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳಿಗೆ ಹೆಸರಾಗಿರುವ ಅಮೆರಿಕ ಮೂಲದ ಫಿಲಿಪ್ ಮಾರಿಸ್ ಕಂಪನಿ ಕೂಡ ಧೂಮರಹಿತ ಉತ್ಪನ್ನಗಳನ್ನು ತಯಾರಿಸುವ ಇಚ್ಛೆಯನ್ನು ಹಂಚಿಕೊಂಡಿದೆ. ಬೆಲ್ ರೈಸ್ ಕಂಪನಿ ಕೂಡ ಹೂಡಿಕೆ ಮಾಡಲು ಬಯಸಿದೆ' ಎಂದು ಪಾಟೀಲ ಹೇಳಿದ್ದಾರೆ.

'2045 ಗುರಿ ಇಟ್ಟುಕೊಂಡು ಬೆಂಗಳೂರಿನ ಸಂಪರ್ಕ ಅಭಿವೃದ್ಧಿ'

'ಬೆಂಗಳೂರಿನ ಸಂಚಾರ ಹಾಗೂ ಮೂಲಸೌಕರ್ಯ ವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ನಾವು 2045ರ ಗುರಿ ಇಟ್ಟುಕೊಂಡು ಸಾರಿಗೆ ಸಂಪರ್ಕ ಅಭಿವೃದ್ಧಿಪಡಿಸುತ್ತಿದ್ದೇವೆ. ನೀವೆಲ್ಲರೂ ಬೆಂಗಳೂರಿಗೆ ಬನ್ನಿ' ಎಂದು ಡಿ.ಕೆ. ಶಿವಕುಮಾರ್ ಅವರು ಉದ್ಯಮಿಗಳಿಗೆ ಆಮಂತ್ರಣ ಕೊಟ್ಟರು.

'ಬೆಂಗಳೂರು ಭವಿಷ್ಯದ ನಗರ. ಇಲ್ಲಿನ ಹವಾಗುಣ, ಸಂಸ್ಕೃತಿ, ಮಾನವ ಸಂಪನ್ಮೂಲ ಅತ್ಯುತ್ತಮವಾಗಿದೆ. ವಿಶ್ವದ ಅನೇಕ ಕಂಪನಿಗಳು ಇಲ್ಲಿ ಕೆಲಸ ಮಾಡಿ ಬೆಳೆಯುತ್ತಿವೆ' ಎಂದರು.

'ನಮ್ಮಲ್ಲಿ ಅತ್ಯುತ್ತಮ ಮಾನವ ಸಂಪನ್ಮೂಲವಿದ್ದು, ವಿಶ್ವದ ಪ್ರತಿಷ್ಠಿತ 500 ಕಂಪನಿಗಳು ಬೆಂಗಳೂರಿನಲ್ಲಿವೆ. ಏರೋಸ್ಪೇಸ್, ಐಟಿ, ಮೆಡಿಕಲ್ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಇಲ್ಲಿನ ಮಾನವ ಸಂಪನ್ಮೂಲ ಕೌಶಲ ಹೊಂದಿದೆ. ಕರ್ನಾಟಕದಲ್ಲಿ 70 ಮೆಡಿಕಲ್ ಕಾಲೇಜುಗಳಿದ್ದು, ಪ್ರತಿವರ್ಷ 1.50 ಲಕ್ಷ ಆರೋಗ್ಯ ಕ್ಷೇತ್ರದ ಸಿಬ್ಬಂದಿ ತಯಾರಾಗುತ್ತಿದ್ದಾರೆ. ಬೆಂಗಳೂರಿನಲ್ಲಿ 25 ಲಕ್ಷ ಎಂಜಿನಿಯರಿಂಗ್ ವೃತ್ತಿಪರರು ಇದ್ದಾರೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಷೇರುಪೇಟೆ ಮತ್ತೆ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ಪ್ರಮುಖ ಸಂವೇದಿ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸತತ ಮೂರನೆಯ ದಿನವೂ ಇಳಿಕೆ ಕಂಡಿವೆ. ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು ನಷ್ಟದ ಅಪಾಯ ಹೆಚ್ಚಿರುವ ಹೂಡಿಕೆಗಳಿಂದ ಹೂಡಿಕೆದಾರರು ದೂರ ಇರುವಂತೆ ಮಾಡಿವೆ.

ಸೂಚ್ಯಂಕಗಳು ಬುಧವಾರದ ವಹಿವಾಟಿನ ಆರಂಭದಲ್ಲಿ ಹೆಚ್ಚು ಕುಸಿದಿದ್ದವು. ಆದರೆ ನಂತರದಲ್ಲಿ ಕೆಲವು ಪ್ರಮುಖ ಕಂಪನಿಗಳ ಷೇರುಗಳನ್ನು ಹೂಡಿಕೆದಾರರು ಖರೀದಿಸಿದ ಕಾರಣದಿಂದಾಗಿ, ಕುಸಿತದ ಪ್ರಮಾಣವು ಕಡಿಮೆ ಆಯಿತು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 82 ಸಾವಿರದ ಮಟ್ಟಕ್ಕಿಂತ ಕೆಳಕ್ಕೆ ಬಂದಿದೆ. ದಿನದ ವಹಿವಾಟಿನ ಅಂತ್ಯಕ್ಕೆ 270 ಅಂಶ ಕುಸಿದಿದೆ. ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ 1,056 ಅಂಶದವರೆಗೂ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆಯ ಸೂಚ್ಯಂಕ ನಿಫ್ಟಿ 75 ಅಂಶ ಇಳಿಕೆಯಾಗಿದೆ.

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ದಾಖಲೆಯ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಈ ನಡುವೆ ಹಣಕಾಸು, ಬ್ಯಾಂಕಿಂಗ್, ಗ್ರಾಹಕ ಬಳಕೆ ಉತ್ಪನ್ನಗಳ ಷೇರುಗಳ ಮಾರಾಟವು ಬುಧವಾರ ಜೋರಾಗಿತ್ತು ಎಂದು ವರ್ತಕರು ತಿಳಿಸಿದ್ದಾರೆ.



'ಜಾಗತಿಕ ಮಟ್ಟದಲ್ಲಿನ ಸಂಗತಿಗಳು ಹೂಡಿಕೆದಾರರ ಉತ್ಸಾಹವನ್ನು ಕುಂದಿಸಿವೆ. ಆದರೆ ಬುಧವಾರ ಹೂಡಿಕೆದಾರರು ಕೆಲವು ಆಯ್ದ ಕಂಪನಿಗಳ ಷೇರುಗಳನ್ನು ಖರೀದಿಸಿದರು. ಇದು ಆರಂಭಿಕ ಕುಸಿತದ ಪ್ರಮಾಣವನ್ನು ಕಡಿಮೆ ಮಾಡಲು ನೆರವಾಯಿತು' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಚಿನ್ನದ ದರ ₹6,500, ಬೆಳ್ಳಿ ₹11,300 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯ ಏರಿಕೆ ಮುಂದುವರಿದಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹6,500ರಷ್ಟು ಹೆಚ್ಚಳವಾಗಿ, ₹1,59,700ಕ್ಕೆ ತಲುಪಿದೆ. ಬೆಳ್ಳಿ ದರವು ಕೆ.ಜಿಗೆ ₹11,300 ಏರಿಕೆಯಾಗಿ, ₹3,34,300ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಪೂರೈಕೆಯಲ್ಲಿ ಕೊರತೆ ಉಂಟಾಗಿರುವುದು ಮತ್ತು ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಅನಿಶ್ಚಿತತೆಯಿಂದ ಹೂಡಿಕೆದಾರರು ನಿರಂತರವಾಗಿ ಚಿನ್ನ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಇದು ಬೆಲೆ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1600-2500
ಮಧ್ಯಮ	₹1000-1400
ಸಣ್ಣ	₹400-1000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28508-28508
ಪುತ್ತೂರು	₹6000-22500
ವಿಜಯಪುರ	₹8500-8500

ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲ ನಿರಾಕರಿಸಿರುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ತಿಕ್ಕಾಟ ಕಾರಣ

●ಹೌದು ●ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಧಾರಣೆ (ಶೇಂಗಾ) 21-01-2026

ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8100-8200
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1645 (1640)
ಒಂದು ವಾರದ ಡೆಲಿವರಿ	1640 (1635)
ಪಾಮ್ ವಾರದ ಡೆಲಿವರಿ	1293 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1515 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,000 (1,46,700)
ಬೆಳ್ಳಿ ಕೆ.ಜಿಗೆ	3,18,500 (3,09,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕುಶಾಕ್ ಫೇಸ್‌ಲಿಫ್ಟ್ –2026 ಬಿಡುಗಡೆ

● ಜೋಮನ್ ಕೆ. ವರ್ಗೀಸ್

ಕೊಚ್ಚಿ: ಬೆಳೆಯುತ್ತಿರುವ ಭಾರತದ ಎಸ್‌ಯುವಿ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ಸ್ಕೋಡಾ ಆಟೊ ಇಂಡಿಯಾ ಕಂಪನಿ, 'ಕುಶಾಕ್'ನ ನವೀಕೃತ ಮಾದರಿಯನ್ನು ಪರಿಚಯಿಸಿದೆ.

ಕೊಚ್ಚಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಕೋಡಾ ನಿರ್ದೇಶಕ ಮಂಡಳಿ ಸದಸ್ಯ ಮಾರ್ಟಿನ್ ಜಾನ್ ಮತ್ತು ಭಾರತೀಯ ಬ್ರ್ಯಾಂಡ್ ನಿರ್ದೇಶಕ ಅಶೀಶ್ ಗುಪ್ತಾ ಕುಶಾಕ್ ಫೇಸ್‌ಲಿಫ್ಟ್–2026 ಬಿಡುಗಡೆ ಮಾಡಿದರು.

'₹15 ಸಾವಿರ ಪಾವತಿಸಿ ಹೊಸ ಕುಶಾಕ್ ಬುಕಿಂಗ್ ಮಾಡಿಕೊಳ್ಳಬಹುದು. ಮಾರ್ಚ್‌ನಿಂದ ಡೆಲಿವರಿ ಪಡೆದುಕೊಳ್ಳಬಹುದು' ಎಂದು ಗುಪ್ತಾ ಹೇಳಿದರು.

ಶಿಮ್ಲಾ ಗ್ರೀನ್, ಸ್ಟೀಲ್ ಗ್ರೇ ಮತ್ತು ಚೆರ್ರಿ ರೆಡ್ ಎಂಬ ಮೂರು ಹೊಸ ಬಣ್ಣಗಳು ಸೇರಿ ಒಟ್ಟು 8 ಬಣ್ಣಗಳಲ್ಲಿ ಕುಶಾಕ್‌ನ ನವೀಕೃತ ಮಾದರಿ ಲಭ್ಯವಿದೆ. ಹೊಸ ಕುಶಾಕ್‌ನ ಬೆಲೆಯನ್ನು ಕಂಪನಿ ಅಧಿಕೃತವಾಗಿ ಪ್ರಕಟಿಸಿಲ್ಲ. ಇದು ₹10.70 ಲಕ್ಷದಿಂದ ₹19 ಲಕ್ಷದವರೆಗೆ ಇರಲಿದೆ ಎಂದು ಮೂಲಗಳು ತಿಳಿಸಿವೆ.



ಸ್ಕೋಡಾ ಆಟೊ ಇಂಡಿಯಾ ಕಂಪನಿಯ ಭಾರತೀಯ ಬ್ರ್ಯಾಂಡ್ ನಿರ್ದೇಶಕ ಆಶೀಶ್ ಗುಪ್ತಾ ಕೊಚ್ಚಿಯಲ್ಲಿ ಕುಶಾಕ್ ಫೇಸ್‌ಲಿಫ್ಟ್ –2026 ಬಿಡುಗಡೆ ಮಾಡಿದರು

ಕುಶಾಕ್ ಫೇಸ್‌ಲಿಫ್ಟ್‌ನಲ್ಲಿ ವಿನ್ಯಾಸ ಮತ್ತು ಪವರ್‌ಟ್ರೇನ್ ಆಯ್ಕೆಗಳಲ್ಲಿ ಪ್ರಮುಖ ಬದಲಾವಣೆಗಳನ್ನು ತರಲಾಗಿದೆ. ಎಲ್ಲ ವೇರಿಯಂಟ್‌ಗಳಲ್ಲಿ ಪನೋರಮಿಕ್ ಸನ್‌ರೂಫ್ ಮತ್ತು 6 ಏರ್‌ಬ್ಯಾಗ್‌ಗಳನ್ನು ನೀಡಲಾಗಿದೆ.

> **ಸ್ಕೋಡಾ ಕಂಪನಿಗೆ ಜಾಗತಿಕವಾಗಿ ಭಾರತವು ನಾಲ್ಕನೆಯ ಅತಿ ದೊಡ್ಡ ಮಾರುಕಟ್ಟೆ. ಕುಶಾಕ್, ಕೈಲಾಕ್, ಕೊಡಿಯಾಕ್ ಮಾದರಿಗಳು ಭಾರತೀಯರ ಹೃದಯ ಗೆದ್ದಿವೆ**
> **ಮಾರ್ಟಿನ್ ಜಾನ್,** ಸ್ಕೋಡಾ ನಿರ್ದೇಶಕ ಮಂಡಳಿ ಸದಸ್ಯ

ಸುರಕ್ಷತೆಗೆ ಆದ್ಯತೆ ನೀಡಲಾಗಿದ್ದು, ಮುಂಭಾಗದಲ್ಲಿ ಪಾರ್ಕಿಂಗ್ ಸೆನ್ಸರ್ ಅಳವಡಿಸಲಾಗಿದೆ.


'ಎಫ್‌ಟಿಎ' ಲಾಭ: ಭಾರತ–ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಭಾರತದಲ್ಲಿ ತಯಾರಿಸಿದ ಕಾರುಗಳನ್ನು ಪಶ್ಚಿಮ ಏಷ್ಯಾ ಸೇರಿ ವಿವಿಧ ದೇಶಗಳಿಗೆ ರಫ್ತು ಮಾಡಲು ಮತ್ತು ಯೂರೋಪ್‌ನಿಂದ ಬಿಡಿಭಾಗಗಳನ್ನು ತರಿಸಿಕೊಳ್ಳಲು ದೊಡ್ಡ ಮಟ್ಟದಲ್ಲಿ ಅನುಕೂಲವಾಗಲಿದೆ. ಭಾರತದ ಇ.ವಿ ಕಾರುಗಳ ಮಾರುಕಟ್ಟೆಯತ್ತಲೂ ನಾವು ಗಮನ ಹರಿಸಿದ್ದೇವೆ ಎಂದು ಮಾರ್ಟಿನ್ ತಿಳಿಸಿದರು.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಯಲ್ಲಾಪುರ	
ಬೆಟ್ಟೆ	32201-52009	ಬೆಟ್ಟೆ	54199-65700	ಆಪಿ	62165-74765
ಚಾಲಿ	47029-49499	ಗೊರಬಲು	19000-41399	ಬಿಳಿಗೋಟು	21899-32899
ಚಿಪ್ಪು	31029-36019	ರಾಶಿ	46699-56799	ಕೋಕ	12000-28502
ಕೋಕ	15019-35599	ಸರಕು	55159-91040	ಹಳೆಚಾಲಿ	38066-44610
ಫ್ಯಾಕ್ಟರಿ	9301-24899	**ಶಿರಸಿ**		ಹೊಸಚಾಲಿ	37501-49801
ಹೊಸಚಾಲಿ	40099-45125	ಬೆಟ್ಟೆ	35619-51289	ಕೆಂಪುಗೋಟು	16899-38099
ಪುತ್ತೂರು		ಬಿಳಿಗೋಟು	21299-41099	ರಾಶಿ	50869-61199
ಕೋಕ	23000-28000	ಚಾಲಿ	46099-50761	ತಟ್ಟಿಬೆಟ್ಟೆ	38119-52199
ಹೊಸತು	26000-46000	ಕೆಂಪುಗೋಟು	24199-35619		
ಹಳತು	41500-53500	ರಾಶಿ	52099-57366		

ಎಟರ್ನಲ್ ಸಿಇಒ ಸ್ಥಾನಕ್ಕೆ ಗೋಯಲ್ ರಾಜೀನಾಮೆ

ನವದೆಹಲಿ (ಪಿಟಿಐ): ಎಟರ್ನಲ್ ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಸ್ಥಾನಕ್ಕೆ ದೀಪಿಂದರ್ ಗೋಯಲ್ ಅವರು ರಾಜೀನಾಮೆ ನೀಡಿದ್ದಾರೆ. ಎಟರ್ನಲ್ ಕಂಪನಿಯ ಭಾಗವಾಗಿರುವ ಬ್ಲಿಂಕ್‌ಇಟ್‌ನ ಸಿಇಒ ಅಲ್ಬಿಂದರ್ ಧಿಂಡ್ಸಾ ಅವರು ಎಟರ್ನಲ್‌ನ ಸಿಇಒ ಆಗಿ ಫೆಬ್ರುವರಿ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ದೀಪಿಂದರ್ ಗೋಯಲ್

ಹೊಸ ಆಲೋಚನೆಗಳ ಜೊತೆ ಕೆಲಸ ಮಾಡಲು ಹಾಗೂ ಕಂಪನಿಯ ಉಪಾಧ್ಯಕ್ಷ ಹುದ್ದೆಯನ್ನು ವಹಿಸಿಕೊಳ್ಳಲು ಈಗಿನ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಗೋಯಲ್ ಅವರು ಷೇರುದಾರರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಷೇರುದಾರರ ಒಪ್ಪಿಗೆ ಪಡೆದು, ಗೋಯಲ್ ಅವರನ್ನು ಆಡಳಿತ ಮಂಡಳಿಯ ನಿರ್ದೇಶಕರನ್ನಾಗಿ ಹಾಗೂ ಕಂಪನಿಯ ಉಪಾಧ್ಯಕ್ಷರನ್ನಾಗಿ ಐದು ವರ್ಷಗಳ ಅವಧಿಗೆ ನೇಮಕ ಮಾಡಲಾಗುತ್ತದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಶೇ 6–8 ಮಟ್ಟದಲ್ಲಿ ಬೆಳವಣಿಗೆ: ವೈಷ್ಣವ್

ದಾವೋಸ್ (ಪಿಟಿಐ): ಮುಂದಿನ ಐದು ವರ್ಷಗಳವರೆಗೆ ಭಾರತದ ಆರ್ಥಿಕ ಬೆಳವಣಿಗೆ ದರವು ಶೇಕಡ 6–8ರ ಮಟ್ಟದಲ್ಲಿ ಇರಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಬುಧವಾರ ಹೇಳಿದ್ದಾರೆ.

ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಮಾವೇಶದ ಕಾರ್ಯಕ್ರಮವೊಂದರಲ್ಲಿ ಮಾತಮಾಡಿದ ಅವರು, ಅನುಮತಿಗಳನ್ನು ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸುವುದರ ಪ್ರಾಮುಖ್ಯವನ್ನು ವಿವರಿಸಿದ್ದಾರೆ. ಭಾರತದಲ್ಲಿ ಒಂದು ದೂರಸಂಪರ್ಕ ಟವರ್ ಅಳವಡಿಕೆಗೆ ಈ ಮೊದಲು ಸರಾಸರಿ 270 ದಿನಗಳು ಬೇಕಾಗುತ್ತಿದ್ದವು, ಅದು ಈಗ ಏಳು ದಿನಗಳಿಗೆ ಇಳಿಕೆಯಾಗಿದೆ ಎಂದು ತಿಳಿಸಿದ್ದಾರೆ.

ಉದ್ದೇಶ ಹಾಗೂ ಕ್ರಿಯೆಯ ನಡುವಿನ ಅಂತರವನ್ನು ತಗ್ಗಿಸಬೇಕು. ಅಧಿಕಾರಶಾಹಿ ವ್ಯವಸ್ಥೆಯು ರಾಜಕೀಯ ಶಕ್ತಿಯ ಜೊತೆ ಹೊಂದಿಕೊಳ್ಳುವಂತೆ ರಾಜಕೀಯ ನಾಯಕರು ಖಾತರಿಪಡಿಸಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದ್ದಾರೆ.

ಸ್ಮಾರ್ಟ್ ಬಜಾರ್ ಪೈಸಾ ವಸೂಲ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ 26ರವರೆಗೆ 'ಸ್ಮಾರ್ಟ್ ಬಜಾರ್‌ನ ಫುಲ್ ಪೈಸಾ ವಸೂಲ್' ಮಾರಾಟ ಮೇಳ ನಡೆಯಲಿದ್ದು, ಗ್ರಾಹಕರಿಗೆ ಹಲವು ರಿಯಾಯಿತಿಗಳು ಸಿಗಲಿವೆ. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ 'ಸ್ಮಾರ್ಟ್ ಬಜಾರ್'ಗಳ ಮಾಲೀಕತ್ವ ಹೊಂದಿದೆ.

₹749ಕ್ಕೆ 5 ಕೆ.ಜಿ ಬಾಸ್ಮತಿ ಅಕ್ಕಿ ಮತ್ತು 2.73 ಲೀಟರ್ ಎಣ್ಣೆ ಈ ಮಾರಾಟ ಮೇಳದಲ್ಲಿ ಸಿಗಲಿದೆ. ಯಾವುದೇ ಎರಡು ಬಿಸ್ಕತ್ ಪ್ಯಾಕ್ ಖರೀದಿಸಿದರೆ 1 ಬಿಸ್ಕತ್ ಪ್ಯಾಕ್ ಉಚಿತವಾಗಿ ಸಿಗುತ್ತದೆ. ಸಾಬೂನು ಮತ್ತು ಪೇಸ್ಟ್‌ಗಳಿಗೆ ಕನಿಷ್ಠ ಶೇ 40ರಷ್ಟು ರಿಯಾಯಿತಿ ಸೇರಿದಂತೆ ವಿವಿಧ ಆಕರ್ಷಕ ಕೊಡುಗೆಗಳು ಇರಲಿವೆ ಎಂದು ಪ್ರಕಟಣೆ ತಿಳಿಸಿದೆ.

ಟ್ರಂಪ್ ಶಾಂತಿ ಮಂಡಳಿಗೆ ನೆತನ್ಯಾಹು

ಜೆರುಸಲೇಂ (ಎಪಿ): ಗಾಜಾದ ಆಡಳಿತದ ಮೇಲ್ವಿಚಾರಣೆ ನಡೆಸಲಿರುವ ಶಾಂತಿ ಮಂಡಳಿಗೆ ಸೇರ್ಪಡೆಗೊಳ್ಳಲು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಬುಧವಾರ ಸಮ್ಮತಿಸಿದ್ದಾರೆ.

ಹಮಾಸ್ – ಇಸ್ರೇಲ್ ಕದನ ವಿರಾಮ ಒಪ್ಪಂದದ 2ನೇ ಹಂತದ ಅನ್ವಯ ರೂಪಿಸಲಾಗಿರುವ 'ಗಾಜಾ ಶಾಂತಿ ಮಂಡಳಿ' ಸೇರಲು ವಿವಿಧ ದೇಶಗಳ ನಾಯಕರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಹ್ವಾನ ನೀಡಿದ್ದಾರೆ.

ಇಸ್ರೇಲ್‌ನ ಪ್ರತಿಸ್ಪರ್ಧಿಯಾದ ಟರ್ಕಿಗೂ ಶಾಂತಿ ಮಂಡಳಿಯಲ್ಲಿ ಭಾಗಿಯಾಗುವಂತೆ ಆಹ್ವಾನ ನೀಡಿದ್ದರಿಂದ, ನೆತನ್ಯಾಹು ಕಚೇರಿಯು ಈ ಹಿಂದೆ ಮಂಡಳಿಯ ಕಾರ್ಯಕಾರಿ ಸಮಿತಿಯ ರಚನೆಯನ್ನೇ ಟೀಕಿಸಿತ್ತು. ಇದೀಗ, ಟ್ರಂಪ್ ಅವರ ಆಹ್ವಾನವನ್ನು ಸ್ವೀಕರಿಸಿರುವುದಾಗಿ ನೆತನ್ಯಾಹು ಅವರ ಕಚೇರಿ ತಿಳಿಸಿದೆ.

ಗಾಜಾ: 11 ಬಲಿ

ಗಾಜಾ (ಎಎಫ್‌ಪಿ/ಎಪಿ): ಗಾಜಾದಲ್ಲಿ ಇಸ್ರೇಲ್ ಸೇನೆ ಬುಧವಾರ ನಡೆಸಿದ ದಾಳಿಯಲ್ಲಿ 13 ವರ್ಷದ ಇಬ್ಬರು ಬಾಲಕರು ಮತ್ತು ಮೂವರು ಪತ್ರಕರ್ತರು ಸೇರಿದಂತೆ 11 ಮಂದಿ ಮೃತಪಟ್ಟಿದ್ದಾರೆ.

ಗಾಜಾ ನಗರದ ನೈರುತ್ಯ ಭಾಗದ ಅಲ್ ಜಹ್ರಾ ಪ್ರದೇಶದಲ್ಲಿ ಕಾರಿನ ಮೇಲೆ ನಡೆದ ವಾಯು ದಾಳಿಯಲ್ಲಿ ಪತ್ರಕರ್ತರು ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ. ಮೃತರಲ್ಲಿ ಒಬ್ಬರು ಈ ಹಿಂದೆ ಎಎಫ್‌ಪಿ ಸುದ್ದಿ ಸಂಸ್ಥೆಗೆ ಫೋಟೊ ಮತ್ತು ವಿಡಿಯೊ ಜರ್ನಲಿಸ್ಟ್ ಆಗಿ ಕೆಲಸ ಮಾಡಿದ್ದರು.

ಬುರೈಜ್ ನಿರಾಶ್ರಿತರ ಶಿಬಿರದ ಮೇಲೆ ನಡೆದ ಡ್ರೋನ್ ದಾಳಿಯಲ್ಲಿ ಒಬ್ಬ ಬಾಲಕ, ಆತನ ತಂದೆ ಮತ್ತು 22 ವರ್ಷದ ಯುವಕ ಮೃತಪಟ್ಟಿದ್ದಾರೆ. ಗಾಜಾದ ಪೂರ್ವ ಭಾಗದ ಬನೀ ಸುಹೇಲಾ ಪಟ್ಟಣದಲ್ಲಿ ಉರುವಲು ಸಂಗ್ರಹಿಸಲು ತೆರಳಿದ್ದ ಬಾಲಕ, ಇಸ್ರೇಲ್ ಸೈನಿಕರ ಗುಂಡಿಗೆ ಬಲಿಯಾಗಿದ್ದಾನೆ ಎಂದು ನಾಸೆರ್ ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಮೆರಿಕವೇ ವಿಶ್ವದ ಆರ್ಥಿಕ ಎಂಜಿನ್: ದಾವೋಸ್ ವಿಶ್ವ ಆರ್ಥಿಕ ವೇದಿಕೆಯಲ್ಲಿ ಟ್ರಂಪ್

ಗ್ರೀನ್‌ಲ್ಯಾಂಡ್: ತುರ್ತು ಮಾತುಕತೆಗೆ ಒತ್ತಾಯ

ದಾವೋಸ್ (ಸ್ವಿಟ್ಜರ್ಲೆಂಡ್) (ಎಎಫ್‌ಪಿ): 'ಸೇನಾ ಬಲ ಬಳಸಿ ಗ್ರೀನ್‌ಲ್ಯಾಂಡ್ ಅನ್ನು ಬಲವಂತವಾಗಿ ವಶಕ್ಕೆ ಪಡೆಯುವುದಿಲ್ಲ. ಆದರೆ, ಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಕ್ಷಣವೇ ಮಾತುಕತೆ ನಡೆಯಬೇಕು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯಿಸಿದರು.

ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಸಭೆಯಲ್ಲಿ ಗ್ರೀನ್‌ಲ್ಯಾಂಡ್ ವಿಷಯವನ್ನು ಪ್ರಸ್ತಾಪಿಸಿದ ಟ್ರಂಪ್, 'ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಭದ್ರತೆ ದೃಷ್ಟಿಯಿಂದ ಗ್ರೀನ್‌ಲ್ಯಾಂಡ್ ಅನ್ನು ಅಮೆರಿಕ ವಶಕ್ಕೆ ಪಡೆಯುವುದು ಅಗತ್ಯ' ಎಂದು ಪ್ರತಿಪಾದಿಸಿದರು.

'ಗ್ರೀನ್‌ಲ್ಯಾಂಡ್' ಅನ್ನು ರಕ್ಷಿಸಬಲ್ಲ ಏಕೈಕ ದೇಶ ಅಮೆರಿಕ. ಆ ಉದ್ದೇಶದಿಂದ ನಾನು ಇಲ್ಲಿ ಮತ್ತೊಮ್ಮೆ ಈ ವಿಷಯ ಪ್ರಸ್ತಾಪಿಸುತ್ತಿದ್ದು, ತಕ್ಷಣವೇ ಮಾತುಕತೆ ನಡೆಯಬೇಕು' ಎಂದರು.

'ಗ್ರೀನ್‌ಲ್ಯಾಂಡ್ ಅನ್ನು ಅಮೆರಿಕ ವಶಕ್ಕೆ ಪಡೆಯುವುದಕ್ಕೆ ನೀವು 'ಹೌದು' ಎನ್ನುವುದಾದರೆ, ನಿಮಗೆ ತುಂಬಾ ಕೃತಜ್ಞರಾಗಿರುತ್ತೇವೆ, 'ಇಲ್ಲ' ಎನ್ನುವುದಾದರೆ ನಿಮ್ಮನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತೇವೆ. ಶಕ್ತವಾದ ಮತ್ತು ಸುರಕ್ಷಿತವಾದ ಅಮೆರಿಕ ಎಂದರೆ 'ಶಕ್ತವಾದ ನ್ಯಾಟೊ' ಎಂದರ್ಥ ಎಂದು ಟ್ರಂಪ್ ಹೇಳಿದರು.

ಡೆನ್ಮಾರ್ಕ್ ವಿರುದ್ಧ ಸೇನಾ ಕ್ರಮ ಕೈಗೊಳ್ಳುವ ಸಾಧ್ಯತೆ ತಳ್ಳಿಹಾಕಿದ ಟ್ರಂಪ್, 'ಅಮೆರಿಕ ಮತ್ತು ಯೂರೋಪ್ ನಡುವಿನ ಮೈತ್ರಿಯನ್ನು ಡೆನ್ಮಾರ್ಕ್ ಹರಿದು ಹಾಕುವ ಬೆದರಿಕೆ ಹಾಕುತ್ತಿದೆ' ಎಂದು ದೂರಿದರು.

ಅಮೆರಿಕ ವಿಶ್ವದ ಆರ್ಥಿಕ ಎಂಜಿನ್: 'ಅಮೆರಿಕವು ವಿಶ್ವದ ಆರ್ಥಿಕ ಎಂಜಿನ್ ಆಗಿದೆ. ಆದರೆ, ಯೂರೋಪ್ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ' ಎಂದು ಟ್ರಂಪ್ ಹೇಳಿದರು.

'ಅಮೆರಿಕವು ಆರ್ಥಿಕ ಪ್ರಗತಿ ಸಾಧಿಸಿದರೆ ಅದರಿಂದ ಇಡೀ ವಿಶ್ವವೇ ಅಭಿವೃದ್ಧಿ ಹೊಂದುತ್ತದೆ. ನಾವೇ ಭೂಮಂಡಲದ ಆರ್ಥಿಕ ಶಕ್ತಿ' ಎಂದು ಅವರು ಪ್ರತಿಪಾದಿಸಿದರು.

'ಯೂರೋಪ್ ಬಗ್ಗೆ ಹೇಳುವುದಾದರೆ, ಈ ಖಂಡದ ಕೆಲವು ಭಾಗಗಳನ್ನು ಈಗ ಗುರುತಿಸಲು ಆಗುತ್ತಿಲ್ಲ. ನಾನು ಯೂರೋಪ್ ಅನ್ನು ಪ್ರೀತಿಸುತ್ತೇನೆ ಮತ್ತು ಯೂರೋಪ್ ಅಭಿವೃದ್ಧಿ ಹೊಂದುವುದನ್ನು ನೋಡಲು ಬಯಸುತ್ತೇನೆ. ಆದರೆ, ಈ ಖಂಡವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿಲ್ಲ' ಎಂದು ಟ್ರಂಪ್ ಹೇಳಿದರು.

ಟ್ರಂಪ್ ಮಾತು



- ಭಾರತ್–ಪಾಕ್ ಸಂಘರ್ಷ ಸೇರಿ ಹಲವು ಯುದ್ಧಗಳನ್ನು ನಿಲ್ಲಿಸಿದ್ದು ನಾನೇ
- ಅಮೆರಿಕದಿಂದಲೇ ಕೆನಡಾ ಉಳಿದುಕೊಂಡಿದೆ
- ಡೆನ್ಮಾರ್ಕ್ ಕೃತಜ್ಞತೆ ಇಲ್ಲದ ದೇಶ
- ಅಮೆರಿಕದಿಂದ ಮಾತ್ರ ಗ್ರೀನ್‌ಲ್ಯಾಂಡ್ ರಕ್ಷಣೆ ಸಾಧ್ಯ
- ಗ್ರೀನ್‌ಲ್ಯಾಂಡ್ ಖರೀದಿ ಒಪ್ಪಂದ ತಕ್ಷಣ ಆಗಬೇಕು

ಟ್ರಂಪ್ ವಿಮಾನದಲ್ಲಿ ತಾಂತ್ರಿಕ ದೋಷ

ವಾಷಿಂಗ್ಟನ್: ವಿಮಾನದಲ್ಲಿ ಸಣ್ಣ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಡೊನಾಲ್ಡ್ ಟ್ರಂಪ್, ಮೂರು ಗಂಟೆ ತಡವಾಗಿ ದಾವೋಸ್‌ಗೆ ಬಂದಿಳಿದರು.

ಅಮೆರಿಕದ ಅಧ್ಯಕ್ಷರು ದಾವೋಸ್‌ಗೆ ಪ್ರಯಾಣಿಸಿದ್ದ ಏರ್ ಫೋರ್ಸ್ ಒನ್ ವಿಮಾನದಲ್ಲಿ ಎಲೆಕ್ಟ್ರಿಕ್ ಸಮಸ್ಯೆ ಕಾಣಿಸಿಕೊಂಡಿತು. ತಕ್ಷಣವೇ ವಿಮಾನವು ವಾಷಿಂಗ್ಟನ್‌ಗೆ ಹಿಂತಿರುಗಿತು. ಬದಲಿ ವಿಮಾನದಲ್ಲಿ ಅವರು ಪ್ರಯಾಣ ಮುಂದುವರಿಸಿದರು ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ.

Sl.#	Details of Events	Date/Day/Time
1.	Publication of Notification for the election to the 21 members Executive Committee of Muslim Orphanage, 43, Dickenson Road, Bengaluru-560042.	On 22.01.2026 At 11:30 A.M. Thursday
2.	Issue of Nomination Forms and receiving of filled in forms.	On 23.01.2026 (Friday) From 10.30 A.M. to 02.00 P.M. Including 4th Saturday & Sunday (except on 26/01/2026)
3.	Last date of filling of Nominations.	On 31.01.2026 up to 02.00 P.M. (Saturday)
4.	Scrutiny of Nominations.	On 02.02.2026 at 11.00 A.M. onwards. (Monday)
5.	Publication of List of eligible contesting candidates.	On 02.02.2026 (Monday) Immediately after scrutiny of Nominations.
6.	Withdrawal of Nominations by the Candidates.	On 03.02.2026 (Tuesday) From 11:00 A.M. to 03:00 P.M.
7.	Allotment of Symbols and Publication of the Final List of Contesting Candidates.	On 03.02.2026 (Tuesday) at 05:00 P.M.
8.	In case of Election- polling will be held.	On 15.02.2026 From 08:00 A.M. To 04:00 P.M. -Sunday-
9.	Counting of Votes	ON 15.02.2026 From 5.00 pm onwards
10.	Declaration of Result.	ON 15.02.2026 Soon after completion of counting

ಪ್ರಿಯಾಂಕಾಳ ಹೊಸ ಸಿನಿಮಾ ಘೋಷಣೆ



‘ಮಹಾನಟಿ’ ರಿಯಾಲಿಟಿ ಶೋ ವಿಜೇತೆ, ‘ಏಳುಮಲೆ’ಯ ನಾಯಕಿಯಾಗಿ ನಟಿಸಿದ್ದ ಪ್ರಿಯಾಂಕಾ ಆಚಾರ್ ಹೊಸ ಸಿನಿಮಾ ಘೋಷಣೆಯಾಗಿದೆ. ಕಿರಣ್ ವಿಶ್ವನಾಥ್ ನಿರ್ದೇಶನದ ಚೊಚ್ಚಲ ಸಿನಿಮಾದಲ್ಲಿ ಪ್ರಿಯಾಂಕಾ ಬಣ್ಣಹಚ್ಚಲಿದ್ದಾರೆ.

‘ಕಾಟೇರ’ ಚಿತ್ರದ ನಿರ್ದೇಶಕ ತರುಣ್‌ಕಿಶೋರ್ ಸುಧೀರ್ ನಿರ್ಮಾಣದ, ಪುನೀತ್ ರಂಗಸ್ವಾಮಿ ನಿರ್ದೇಶನದ ‘ಏಳುಮಲೆ’ ಪ್ರಿಯಾಂಕಾ ಸಿನಿಜೀವನದ ಮೊದಲ ಹೆಜ್ಜೆ. ಈ ಸಿನಿಮಾವೇ ಅವರ ಸಿನಿಪಯಣಕ್ಕೆ ದೊಡ್ಡ ತಿರುವು ನೀಡಿದೆ. ಮೈಸೂರಿನ ಪ್ರಿಯಾಂಕಾ ಆಚಾರ್ ‘ಏಳುಮಲೆ’ಯಲ್ಲಿ ಮುಗ್ಧ ಹುಡುಗಿಯ ಪಾತ್ರದಲ್ಲಿ ಪ್ರೇಕ್ಷಕರನ್ನು ಸೆಳೆದಿದ್ದರು. ಇದೀಗ ತಮ್ಮ ಎರಡನೇ ಸಿನಿಮಾಗೆ ಪ್ರಿಯಾಂಕಾ ಸಜ್ಜಾಗಿದ್ದಾರೆ.

ಕಿಚ್ಚ ಸುದೀಪ್ ಆಪ್ತ ಬರಹಗಾರರಲ್ಲಿ ಗುರುತಿಸಿಕೊಂಡಿರುವ ಕಿರಣ್, ‘ರನ್ನ’, ‘ವಿಕ್ಟರಿ’ ಸೇರಿದಂತೆ ಹಲವು ಸಿನಿಮಾಗಳಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಕಿರಣ್ ಮೊದಲ ಸಿನಿಮಾದ ಹೀರೊ ಯಾರು ಎನ್ನುವುದನ್ನು ಶೀಘ್ರದಲ್ಲೇ ಘೋಷಿಸಲಾಗುವುದು ಎಂದಿದೆ ಚಿತ್ರತಂಡ. ಗೌರಿ ಆರ್ಟ್ಸ್ ಬ್ಯಾನರ್‌ನ ಚೊಚ್ಚಲ ಚಿತ್ರ ಇದಾಗಿದೆ.

ಎಸ್.ಮಹೇಂದರ್ ಹೊಸ ಸಿನಿಮಾ ಕೆಂಬರಗ

ಎಸ್.ಮಹೇಂದರ್, ಹಂಸಲೇಖ ಒಟ್ಟಾಗಿ ಚಿತ್ರ ಮಾಡುತ್ತಿರುವ ಸುದ್ದಿ ಇತ್ತೀಚೆಗಷ್ಟೇ ಹೊರಬಿದ್ದಿತ್ತು. ಇದೀಗ ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು ‘ಕೆಂಬರಗ’ ಎಂದು ಹೆಸರಿಡಲಾಗಿದೆ.

‘ಶೀರ್ಷಿಕೆ ಹೊಸತಾಗಿದೆ. ಆದರೆ ಆ ಪದಕ್ಕೆ ಒಂದು ಅರ್ಥವಿದೆ. ಅದು ಏನೆಂದು ತಿಳಿಯಲು ಸಿನಿಮಾ ಹೊರಬರುವವರೆಗೆ ಕಾಯಲೇಬೇಕು. ಕನ್ನಡ ಚಿತ್ರರಂಗವನ್ನು ಆಳಿದವರು, ಆಳುತ್ತಿರುವವರ ಜತೆಗೆ ಸಿನಿಮಾ ತತ್ವ, ಸಿದ್ಧಾಂತ, ಮಾದರಿ ಇತರೆ ವಿಷಯಗಳನ್ನು ಚಿತ್ರ ಒಳಗೊಂಡಿರಲಿದೆ. ಮೂಲ ಸಿನಿಮಾ ಸಿದ್ಧಾಂತದ ಜೊತೆಗೆ, ಆಧುನಿಕ ಸಿನಿಮಾ ನಿರ್ಮಾಣ ಶೈಲಿಯಲ್ಲಿ ಮೂರು ತಲೆಮಾರಿಗೂ ನಾಟುವ, ರುಚಿಸುವ, ಅಪ್ಪಟ ನೆಲದಕಥೆಯೊಂದನ್ನ ಹೇಳಲು ಹೊರಟಿದ್ದೇವೆ’ ಎಂದಿದೆ ಚಿತ್ರತಂಡ.

ಈ ಜೋಡಿ 20 ಸಿನಿಮಾಗಳಿಗೆ ಜೊತೆಯಾಗಿ ಕೆಲಸ ಮಾಡಿತ್ತು. ಶ್ರೀಗುರುರಾಯರು ಸಿನಿಮಾ ಬ್ಯಾನರ್‌ನಡಿಯಲ್ಲಿ ಕೆ.ಸಿ ವಿಜಯಕುಮಾರ್ ಬಂಡವಾಳ ಹೂಡುತ್ತಿದ್ದಾರೆ.



ಹಂಸಲೇಖ, ಎಸ್.ಮಹೇಂದರ್



ಸುಧಾಕರ್ ಗೌಡ, ಪಾಯಲ್ ಚಂಗಪ್ಪ

ಜ.30ರಂದು ‘ಅಮೃತ ಅಂಜನ್’ ತೆರೆಗೆ

ಈ ಹಿಂದೆ ‘ಅಮೃತಾಂಜನ್’ ಎಂಬ ಕಿರುಚಿತ್ರ ಮಾಡಿ ಗಮನ ಸೆಳೆದಿದ್ದ ತಂಡವೀಗ ‘ಅಮೃತ ಅಂಜನ್’ ಚಿತ್ರದೊಂದಿಗೆ ಮರಳಿದೆ. ಜ್ಯೋತಿ ರಾವ್ ಮೋಹಿತ್ ನಿರ್ದೇಶನದ ಚಿತ್ರ ಜ.30ರಂದು ತೆರೆಗೆ ಬರಲಿದೆ. ಚಿತ್ರದ ಹಾಡೊಂದು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ನಾನು ಈ ಹಿಂದೆ ‘ಸೋಡಾ ಬುಡ್ಡಿ’ ಎಂಬ ಚಿತ್ರವನ್ನ ಮಾಡಿದ್ದೆ. ಇದು ನನ್ನ ಎರಡನೇ ಚಿತ್ರ. ಈ ಸಿನಿಮಾ ಆರಂಭಿಸುವುದಕ್ಕೆ ನನ್ನ ‘ಅಮೃತಾಂಜನ್’ ಕಿರುಚಿತ್ರವೇ ಕಾರಣ. ಈ ಚಿತ್ರದ ಶೀರ್ಷಿಕೆ ವಿಚಾರವಾಗಿ ಬಹಳಷ್ಟು ಸಮಸ್ಯೆಗಳನ್ನು ಎದುರಿಸಿದ್ದೇವೆ. ಹಾಗಾಗಿ ಅಮೃತ ಅಂಜನ್ ಎಂಬ ಹೆಸರಿನೊಂದಿಗೆ ಚಿತ್ರ ನಿರ್ಮಾಣ ಮಾಡಿದ್ದು, ಇದೊಂದು ಸಂಪೂರ್ಣ ಹಾಸ್ಯಮಯ ಚಿತ್ರ. ಈ ಸಿನಿಮಾ ಪ್ರಚಾರಕ್ಕಾಗಿ ಸ್ಟಾರ್ ನಟರನ್ನು ಭೇಟಿ ಮಾಡಿದರೂ, ಯಾರೂ ಬೆಂಬಲಕ್ಕೆ ಬರಲಿಲ್ಲ. ನಮ್ಮ ತಂಡಕ್ಕೆ ಜಯಣ್ಣ ಫಿಲ್ಮ್ಸ್ ಸಾಥ್ ನೀಡಿದ್ದು, ಅವರ ಮೂಲಕ ಚಿತ್ರ ಬಿಡುಗಡೆಯಾಗುತ್ತಿದೆ’ ಎಂದರು ನಿರ್ದೇಶಕ.

ಸುಧಾಕರ್ ಗೌಡ, ಗೌರವ ಶೆಟ್ಟಿ, ಪಾಯಲ್ ಚಂಗಪ್ಪ ಮುಖ್ಯಭೂಮಿಕೆಯಲ್ಲಿದ್ದಾರೆ. ನವೀನ್. ಡಿ.ಪಡೀಲ್ ತಂದೆಯಾಗಿ ಹಾಗೂ ಮಧುಮತಿ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ.

‘ಕೆಲ ಸ್ಟಾರ್ ನಟರಿಗೆ ನಮ್ಮ ಸಿನಿಮಾಕ್ಕೆ ಪ್ರೋತ್ಸಾಹ ನೀಡುವಂತೆ ಕೇಳಿಕೊಂಡೆವು. ಆದರೆ ಒಪ್ಪಲಿಲ್ಲ. ಹೀಗಾಗಿ ಅವರನ್ನು ಬಲವಂತ ಮಾಡಲು ಸಾಧ್ಯವಿಲ್ಲ. ಸ್ಟಾರ್ ನಟರು ಪ್ರಚಾರ ಮಾಡಿದರೆ ಸಿನಿಮಾಕ್ಕೆ ಪ್ರಾರಂಭದಲ್ಲಿ ಸ್ವಲ್ಪ ಜನರ ಬರುತ್ತಾರೆ ಎಂಬ ಉದ್ದೇಶದಿಂದ ಅವರ ಬಳಿ ಸಹಾಯ ಕೇಳಿದ್ದು’ ಎಂದರು ಪಾಯಲ್.

ಕಾರ್ತಿಕ್ ರೂವಾರಿ, ಶ್ರೀ ಭವ್ಯ, ಪಲ್ಲವಿ ಪರ್ವ ಸೇರಿದಂತೆ ಹಲವಾರು ಕಲಾವಿದರು ಚಿತ್ರದಲ್ಲಿದ್ದಾರೆ. ಲೋಕೇಶ್ ನಾಗಪ್ಪ ಬಂಡವಾಳ ಹೂಡಿರುವ ಚಿತ್ರಕ್ಕೆ ಸುಮಂತ್ ಆಚಾರ್ಯ ಛಾಯಾಚಿತ್ರಗ್ರಹಣ, ಕಿರಣ್ ಕುಮಾರ್ ಸಂಕಲನ ಹಾಗೂ ರೋಹಿತ್ ಶೋವರ್ ಹಿನ್ನೆಲೆ ಸಂಗೀತವಿದೆ.



ನರೇಶ್

‘ಶುಭಕೃತ್ ನಾಮ ಸಂವತ್ಸರ’ದಲ್ಲಿ ನರೇಶ್

ಈ ಹಿಂದೆ ‘ಫೋರ್ ವಾಲ್ಸ್’ ಎಂಬ ಸಿನಿಮಾ ನಿರ್ದೇಶಿಸಿದ್ದ ಎಸ್.ಎಸ್.ಸಜ್ಜನ್ ‘ಶುಭಕೃತ್ ನಾಮ ಸಂವತ್ಸರ’ ಎಂಬ ಸಿನಿಮಾ ನಿರ್ದೇಶಿಸುತ್ತಿದ್ದು, ತೆಲುಗು ನಟ ನರೇಶ್ ವಿಜಯಕೃಷ್ಣ ತಂಡ ಸೇರಿಕೊಂಡಿದ್ದಾರೆ.

ಸಿನಿಮಾದಲ್ಲಿ ‘ಲಕ್ಷ್ಮೀ ನಿವಾಸ’ ಧಾರಾವಾಹಿಯ ‘ಸಿದ್ದೇಗೌಡ್ರು’ ಪಾತ್ರದ ಮೂಲಕ ಗುರುತಿಸಿಕೊಂಡಿರುವ ನಟ ಧನಂಜಯ್ ನಾಯಕನಾಗಿ ನಟಿಸುತ್ತಿದ್ದಾರೆ. ನರೇಶ್ ಈ ಸಿನಿಮಾದಲ್ಲಿ ಕುಡುಕನ ಪಾತ್ರದಲ್ಲಿ ನಟಿಸುತ್ತಿದ್ದು, ಅವರ ಜನ್ಮದಿನದ ಸಂದರ್ಭದಲ್ಲಿ ಪಾತ್ರದ ಪೋಸ್ಟರ್ ಬಿಡುಗಡೆ ಮಾಡಿದೆ ಚಿತ್ರತಂಡ. ಸದ್ಯ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿರುವ ಚಿತ್ರತಂಡ, ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಏಕಕಾಲಕ್ಕೆ ಚಿತ್ರೀಕರಣ ನಡೆಸುತ್ತಿದೆ.

ಶೀರ್ಷಿಕೆಯೇ ಹೇಳುವಂತೆ ಇದೊಂದು ಹಬ್ಬದ ಹಿನ್ನೆಲೆಯಲ್ಲಿ ನಡೆಯುವ ಕಥೆಯಾಗಿದ್ದು, ಅದಕ್ಕೆ ಕ್ರೈಂ ಥ್ರಿಲ್ಲರ್ ಸ್ಪರ್ಶ ನೀಡಿದ್ದಾರೆ ಸಜ್ಜನ್. ಎಸ್.ವಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ‘ಶುಭಕೃತ್ ನಾಮ ಸಂವತ್ಸರ’ ತೆರೆಗೆ ಬರಲಿದೆ. ತೆಲುಗಿನ ‘ರುದ್ರಮದೇವಿ’, ‘ಗರುಡವೇಗ’ ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿರುವ ದೇವೇಂದ್ರ ವಡ್ಡೆ ಛಾಯಾಚಿತ್ರಗ್ರಹಣ, ಸುಧಾ ಶ್ರೀನಿವಾಸ್ ಸಂಗೀತ ನಿರ್ದೇಶನವಿರಲಿದೆ.

ರಾಜ್ಯ ಒಲಿಂಪಿಕ್ಸ್: ಮಹಿಳಾ ವಿಭಾಗದಲ್ಲಿ ಮೈಸೂರಿಗೆ ಚಿನ್ನ

ಬ್ಯಾಸ್ಕೆಟ್‌ಬಾಲ್: ಒರಿಯನ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರಿನ ಯಂಗ್ ಒರಿಯನ್ಸ್ ಮತ್ತು ಮೈಸೂರು ತಂಡಗಳು, ರಾಜ್ಯ ಒಲಿಂಪಿಕ್ಸ್ ಪ್ರಯುಕ್ತ ನಡೆಯುತ್ತಿರುವ ಬ್ಯಾಸ್ಕೆಟ್‌ಬಾಲ್ ಪಂದ್ಯಾವಳಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್‌ಪಟ್ಟ ಅಲಂಕರಿಸಿದವು.

ಯಂಗ್ ಒರಿಯನ್ಸ್ ತಂಡ ಬುಧವಾರ ನಡೆದ ಫೈನಲ್‌ನಲ್ಲಿ 76–71 ರಲ್ಲಿ ಐದು ಅಂಕಗಳಿಂದ ಬ್ಯಾಂಕ್ ಆಫ್ ಬರೋಡ ತಂಡವನ್ನು ಮಣಿಸಿತು. ಯಂಗ್ ಒರಿಯನ್ಸ್ ಆಟಗಾರರು ಆರಂಭದಿಂದಲೂ ಉತ್ತಮ ಆಟದ ಪ್ರದರ್ಶನ ತೋರಿದರು. ಒರಿಯನ್ಸ್‌ನ ಅಭಿಷೇಕ್ 24, ಗೌತಮ್ 16 ಪಾಯಿಂಟ್ಸ್ ಗಳಿಸಿದರು. ಡಿವೈಇಎಸ್ ಬೆಂಗಳೂರು ತಂಡ 49–28 ರಿಂದ ಜಿಎಸ್‌ಟಿ ಕಸ್ಟಮ್ಸ್ ತಂಡವನ್ನು ಮಣಿಸಿ ಕಂಚಿನ ಪದಕ ಗೆದ್ದುಕೊಂಡಿತು.

ಮಹಿಳೆಯರ ಫೈನಲ್ ಪಂದ್ಯದಲ್ಲಿ ಡಿವೈಇಎಸ್ ಮೈಸೂರು ತಂಡ 30–18 ರಿಂದ ಡಿವೈಇಎಸ್ ವಿದ್ಯಾನಗರ ತಂಡವನ್ನು ಮಣಿಸಿ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿತು. ಸಾನಿಕಾ (10 ಪಾಯಿಂಟ್ಸ್), ಸಾಧನಾ (8 ಪಾಯಿಂಟ್ಸ್) ಉತ್ತಮ ಆಟದ ನೆರವಿನಿಂದ ಮೈಸೂರು ತಂಡ 30-18 ಅಂತರದಿಂದ ಜಯ ಸಾಧಿಸಿತು. ಡಿವೈಇಎಸ್ ಮಂಡ್ಯ ಮೂರನೇಸ್ಥಾನಕ್ಕೆತೃಪ್ತಿಪಡಬೇಕಾಯಿತು.

ವೇಟ್‌ಲಿಫ್ಟಿಂಗ್ ಪಂದ್ಯಾವಳಿಯಲ್ಲಿ ದಕ್ಷಿಣ ಕನ್ನಡದ ಪುರುಷ ಹಾಗೂ ಮಹಿಳೆಯರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಪುರುಷರ 110 ಕೆ.ಜಿ ಮತ್ತು 110 ಕೆ.ಜಿ ಮೇಲ್ಪಟ್ಟವರ ವಿಭಾಗದಲ್ಲಿ ಎಲ್ಲ ಆರೂ ಪದಕಗಳು ದಕ್ಷಿಣ ಕನ್ನಡದ ಪಾಲಾದವು. ಪ್ರತ್ಯುಶ್, ರಂಜಿತ್ ಕುಮಾರ್, ಪ್ರೀತೇಶ್ ಡಿಸಿಲ್ವಾ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದರು.



ಬ್ಯಾಸ್ಕೆಟ್‌ಬಾಲ್ ಟೂರ್ನಿಯ ವಿಜೇತ ಯಂಗ್ ಒರಿಯನ್ಸ್ ತಂಡ

ಚಿರಂತ್‌ಗೆ ಮೂರು ಚಿನ್ನ

ಪುರುಷರ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ಬೆಂಗಳೂರಿನ ಚಿರಂತ್ ವಿ.ಶೆಟ್ಟಿ ಮಿಂಚಿದರು. ಮೂರು ಚಿನ್ನ, ಒಂದು ಬೆಳ್ಳಿ, ಒಂದು ಕಂಚಿನ ಪದಕ ಪಡೆದರು.

ಜಿಮ್ನಾಸ್ಟಿಕ್: ಪುರುಷರ ಆಲ್‌ರೌಂಡರ್ ವೈಯಕ್ತಿಕ ವಿಭಾಗ– ಚಿರಂತ್ ವಿ.ಶೆಟ್ಟಿ (ಬೆಂಗಳೂರು), ಗಂಗಾಧರ್ ಮತ್ತಿ (ಧಾರವಾಡ), ಬಿ.ಎನ್.ತ್ರಿಶೂಲ್ ಗೌಡ (ಬೆಂಗಳೂರು).

ಟೇಬಲ್ ವಾಲ್ಟ್: ಚಿರಂತ್ ವಿ.ಶೆಟ್ಟಿ (ಬೆಂಗಳೂರು), ಆರ್.ಎ.ಗಗನ್ (ತುಮಕೂರು), ಡಿ.ಎಂ.ದಶನ್ (ಮೈಸೂರು).

ಸ್ಟಿಲ್ ರಿಂಗ್ಸ್: ಬಿ.ಎನ್.ತ್ರಿಶೂಲ್ ಗೌಡ (ಬೆಂಗಳೂರು), ಸಂಕೇತ್ ಎಸ್.ಮಾನೆ (ಧಾರವಾಡ), ಚಿರಂತ್ ವಿ.ಶೆಟ್ಟಿ (ಬೆಂಗಳೂರು).

ಹೈ ಬಾರ್: ಡಿ.ಎಂ.ದಶನ್ (ಮೈಸೂರು), ಚಿರಂತ್ ವಿ.ಶೆಟ್ಟಿ (ಬೆಂಗಳೂರು), ಸಂಕೇತ್ ಎಸ್.ಮಾನೆ (ಧಾರವಾಡ).

‘ಅರಾವಳಿ: ತಜ್ಞರ ಸಮಿತಿ ರಚನೆ’

ಮರುವ್ಯಾಖ್ಯಾನ ಮತ್ತು ಅಕ್ರಮ ಗಣಿಗಾರಿಕೆ ಕುರಿತು ಸುಪ್ರೀಂ ಕೋರ್ಟ್ ವಿಚಾರಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅರಾವಳಿ ಪರ್ವತ ಶ್ರೇಣಿ ಎಂದರೆ ಯಾವುದು ಎಂಬ ವ್ಯಾಖ್ಯಾನ ಬದಲಿಸಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಇಲ್ಲಿ ಅಕ್ರಮವಾಗಿ ನಡೆಸಲಾಗುತ್ತಿರುವ ಗಣಿಗಾರಿಕೆ ಮತ್ತು ಇದರಿಂದ ಪರಿಸರಕ್ಕೆ ಆಗುತ್ತಿರುವ ಹಾನಿ, ಜೊತೆಗೆ ಅರಾವಳಿಯ ವ್ಯಾಖ್ಯಾನ ಏನಾಗಬೇಕು ಎಂಬ ಕುರಿತು ಪರಿಶೀಲನೆ ನಡೆಸಲು ತಜ್ಞರ ಸಮಿತಿ ರಚಿಸುವುದಾಗಿ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್ ಮಾಲ್ಯಾ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು 2025ರ ಡಿ.29ರಿಂದ ಸ್ವಯಂ ಪ್ರೇರಿತ ವಿಚಾರಣೆ ಆರಂಭಿಸಿದೆ. ಇದರ ಭಾಗವಾಗಿ ಬುಧವಾರ ವಿಚಾರಣೆ ನಡೆಸಿತು.

ತಜ್ಞರ ಸಮಿತಿಯಲ್ಲಿ ಯಾರು ಇರಬೇಕು ಎಂಬ ಬಗ್ಗೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಮತ್ತು ಕೆ.ಎಂ. ನಟರಾಜ್, ವಿಚಾರಣೆಯಲ್ಲಿ ನ್ಯಾಯಾಲಯಕ್ಕೆ ಅಮ್ಯುಕಸ್ ಕ್ಯೂರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಪರಮೇಶ್ವರ ಅವರ ಸಲಹೆಯನ್ನು ಪೀಠ ಕೇಳಿತು. ಪರಿಸರವಾದಿಗಳು ಮತ್ತು ಅರಣ್ಯ ತಜ್ಞರ ಹೆಸರುಗಳನ್ನು ನಾಲ್ಕು ವಾರಗಳ ಒಳಗೆ ನೀಡಬೇಕು ಎಂದೂ ಗಡುವು ನೀಡಿತು.

ಈ ಸಮಿತಿಯು ಸುಪ್ರೀಂ ಕೋರ್ಟ್‌ನ ನಿರ್ದೇಶನ ಮತ್ತು ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಲಿದೆ ಎಂದು ಪೀಠ ಹೇಳಿತು. ಅರಾವಳಿ ಪರ್ವತ ಶ್ರೇಣಿ ಯಾವುದು ಎಂಬ ಮರುವ್ಯಾಖ್ಯಾನಕ್ಕೆ ಒಪ್ಪಿಗೆ ನೀಡಿದ್ದ ತನ್ನ ಆದೇಶಕ್ಕೆ ಈ ಹಿಂದೆಯೇ ನ್ಯಾಯಾಲಯ ತಡೆ ನೀಡಿತ್ತು. ಈ ತಡೆಯನ್ನು ಬುಧವಾರ ಮುಂದಿನ ಆದೇಶದವರೆಗೂ ವಿಸ್ತರಿಸಿತು.



ಅರಾವಳಿ ಪರ್ವತ ಶ್ರೇಣಿ

‘ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿದೆ’

‘ಪರ್ವತ ಶ್ರೇಣಿಯ ಕೆಲವು ಭಾಗಗಳಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಸಲು ಅನುಮತಿ ನೀಡಲಾಗಿದೆ. ಮರಗಳನ್ನು ಕಡಿಯಲಾಗುತ್ತಿದೆ. ಇದನ್ನು ನಿಲ್ಲಿಸಲೇಬೇಕು’ ಎಂದು ರಾಜಸ್ಥಾನದ ರೈತರ ಪರ ವಾದ ಮಂಡಿಸುತ್ತಿರುವ ಹಿರಿಯ ವಕೀಲ ರಾಜು ರಾಮಚಂದ್ರನ್ ಅವರು ಪೀಠದ ಗಮನಕ್ಕೆ ತಂದರು.

‘ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ತಂದರೆ, ನಾವು ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅಕ್ರಮ ಗಣಿಗಾರಿಕೆಯು ಸರಿಪಡಿಸಲು ಸಾಧ್ಯವಾಗದಂಥ ಪರಿಸ್ಥಿತಿಯನ್ನು ತಂದೊಡ್ಡುತ್ತದೆ ಮತ್ತು ಇದು ಅಪರಾಧ. ಆದ್ದರಿಂದ ಇದನ್ನು ನಿಲ್ಲಿಸಲೇಬೇಕು’ ಎಂದು ಸಿಜೆಐ ಸೂರ್ಯ ಕಾಂತ್ ಹೇಳಿದರು.

‘ರಾಜಸ್ಥಾನ ಸರ್ಕಾರವು ಈ ವಿಚಾರವನ್ನು ಕೂಡಲೇ ಗಮನಿಸಬೇಕು’ ಎಂದು ಪೀಠ ಸೂಚಿಸಿತು. ರಾಜಸ್ಥಾನ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರು ಇದಕ್ಕೆ ಪ್ರತಿಕ್ರಿಯಿಸಿ, ‘ಅಕ್ರಮ ಗಣಿಗಾರಿಕೆಯನ್ನು ತಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ವ್ಯಾಖ್ಯಾನಿಸುವುದರಿಂದಲೇ ಸಮಸ್ಯೆ’

ಎ.ಡಿ. ಸಿಂಗ್ ಎಂಬುವರ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಮಧ್ಯಂತರ ಅರ್ಜಿ ಸಲ್ಲಿಸಿದರು.

‘ಅರಾವಳಿ ಪರ್ವತ ಶ್ರೇಣಿಯನ್ನು ವ್ಯಾಖ್ಯಾನಿಸಲು ಬರುವುದಿಲ್ಲ. ಬೆಟ್ಟಗಳನ್ನೇ ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭೂ ಪದರಗಳ ಅಡಿಯ ಪದರಗಳು ನಿರಂತರವಾಗಿ ಬದಲಾಗುತ್ತಲೇ ಇರುತ್ತವೆ. ಅರಾವಳಿ ವಿಚಾರದಲ್ಲಿ ಈ ಪದರವು ಗುಜರಾತ್‌ನಿಂದ ಉತ್ತರ ಪ್ರದೇಶದ ತುದಿಯವರೆಗೂ ಇದೆ. ಅರಾವಳಿಯನ್ನು ವ್ಯಾಖ್ಯಾನಿಸಲು ಇಳಿದರೆ, ಸಮಸ್ಯೆ ಅಲ್ಲಿಂದಲೇ ಆರಂಭವಾಗುತ್ತದೆ. ಮೊದಲಿಗೆ ಈ ವಿಚಾರವನ್ನು ವಿಚಾರಣೆಗೆ ಪರಿಗಣಿಸಬೇಕು’ ಎಂದು ಸಿಬಲ್ ವಾದಿಸಿದರು.

2030ರವರೆಗೆ ಅಟಲ್ ಪಿಂಚಣಿ ಯೋಜನೆ ವಿಸ್ತರಣೆಗೆ ಅಸ್ತು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಅಟಲ್ ಪಿಂಚಣಿ ಯೋಜನೆಯನ್ನು 2030–31ನೇ ಹಣಕಾಸು ವರ್ಷದ ವರೆಗೆ ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯು, ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕೆ ರೂಪಿಸಿರುವ ಯೋಜನೆಗಳಿಗೆ ಆರ್ಥಿಕ ನೆರವು ಮುಂದುವರಿಸುವುದಕ್ಕೂ ಅನುಮೋದನೆ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ಆದಾಯ ಭದ್ರತೆ ಒದಗಿಸುವ ದೃಷ್ಟಿಯಿಂದ ಅಟಲ್ ಪಿಂಚಣಿ ಯೋಜನೆಯನ್ನು 2015ರ ಮೇ 9ರಂದು ಆರಂಭಿಸಲಾಯಿತು. ಪ್ರಸ್ತುತ, 8.66 ಕೋಟಿ ಜನರು ಈ ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ.

ನೋಂದಾಯಿತ ಸದಸ್ಯರು ಪಾವತಿಸಿದ ವಂತಿಗೆ ಆಧಾರದಲ್ಲಿ, ಫಲಾನುಭವಿಗೆ 60 ವರ್ಷ ತುಂಬಿದ ನಂತರ ಮಾಸಿಕ ಕನಿಷ್ಠ ಒಂದು ಸಾವಿರ ರೂಪಾಯಿಯಿಂದ ₹5 ಸಾವಿರ ವರೆಗೆ ಪಿಂಚಣಿ ನೀಡಲಾಗುತ್ತದೆ.

ಅಲ್ಕರಾಜ್ ಸೇರಿ ಪ್ರಮುಖರ ಮುನ್ನಡೆ

ಆಸ್ಟ್ರೇಲಿಯಾ ಓಪನ್ ಟೆನಿಸ್: ಸಬಲೆಂಕಾ, ಗಾಫ್ ಗೆಲುವು

ಮೆಲ್ಬರ್ನ್ (ಎಎಫ್‌ಪಿ): ಜರ್ಮನಿಯ ಯಾನಿಕ್ ಹಾಂಫ್‌ಮನ್ ಅವರು ಒಂದೇ ಸಮನೇ ಅಟ್ಟುತ್ತಿದ್ದ ಸಿಡಿಗುಂಡುಗಳಂಥ ಹೊಡೆತಗಳನ್ನು ನಿಭಾಯಿಸುವಲ್ಲಿ ಯಶಸ್ವಿಯಾದ ಕಾರ್ಲೋಸ್ ಅಲ್ಕರಾಜ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತನ್ನು ತಲುಪಿದರು. ಬುಧವಾರ ಉರಿಬಿಸಿಲಿನ ವಾತಾವರಣದಲ್ಲಿ ಇತರ ಪ್ರಮುಖ ತಾರೆಯರೂ ಮುನ್ನಡೆ ಸಾಧಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಅಗ್ರ ಕ್ರಮಾಂಕದ ಅರಿನಾ ಸಬಲೆಂಕಾ, ಅಮೆರಿಕದ ಕೊಕೊ ಗಾಫ್ ಕೂಡ ಎರಡನೇ ಸುತ್ತಿನ ಪಂದ್ಯಗಳನ್ನು ಸಲೀಸಾಗಿ ಗೆದ್ದುಕೊಂಡರು. ಮೂರು ಬಾರಿ ಫೈನಲ್ ತಲುಪಿರುವ ಡೇನಿಲ್ ಮೆಡ್ವೆಡೆವ್ ಗೆಲುವಿಗೆ ನಾಲ್ಕು ಸೆಟ್‌ಗಳನ್ನು ಆಡಿ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಕನಸಿನ ಹಾದಿಯಲ್ಲಿ ಇನ್ನೊಂದು ಹೆಜ್ಜೆಯಿಟ್ಟರು. ಹೋದ ವರ್ಷ ಫೈನಲ್‌ನಲ್ಲಿ ಯಾನಿಕ್ ಸಿನ್ನರ್ ಕೈಲಿ ಸೋಲನುಭವಿಸಿದ್ದ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಸಹ ಜಯಗಳಿಸಿದವರಲ್ಲಿ ಒಳಗೊಂಡಿದ್ದಾರೆ.

ರಾಡ್ ಲೇವರ್ ಅರೇನಾದಲ್ಲಿ ಆಡಿದ ಸ್ಪೇನ್‌ನ ಸೂಪರ್‌ಸ್ಟಾರ್ ಅಲ್ಕರಾಜ್ 7–6 (7–4), 6–3, 6–2 ರಿಂದ ಪ್ರಬಲ ಹೊಡೆತಗಳ ಆಟಗಾರ ಹಾಂಫ್‌ಮನ್ ಅವರನ್ನು ಸೋಲಿಸಿದರು. ಆ ಮೂಲಕ ಅಗ್ರ ಕ್ರಮಾಂಕದ ಅಲ್ಕರಾಜ್ ‘ಕ್ಯಾರೀರ್ ಗ್ರ್ಯಾನ್‌ಸ್ಲಾಮ್’ ಸಾಧಿಸುವತ್ತ ಇನ್ನೊಂದು ಹೆಜ್ಜೆಯಿಟ್ಟರು.

ಆದರೆ 22 ವರ್ಷ ವಯಸ್ಸಿನ ಅಲ್ಕರಾಜ್‌ಗೆ ಅವರಿಗಿಂತ 12 ವರ್ಷ ಹಿರಿಯ ಎದುರಾಳಿಯಾದ ಹಾಂಫ್‌ಮನ್ ಸಾಕಷ್ಟು ಕಾಡಿದರು. ಆರು ಪ್ರಮುಖ ಪ್ರಶಸ್ತಿಗಳನ್ನು ಗೆದ್ದಿರುವ ಅಲ್ಕರಾಜ್, ಆಸ್ಟ್ರೇಲಿಯಾ ಓಪನ್‌ನಲ್ಲಿ ಒಮ್ಮೆಯೂ ಎಂಟರ ಘಟ್ಟ ದಾಟಿಲ್ಲ.

ಆಸ್ಟ್ರೇಲಿಯಾ ಓಪನ್ ಗೆದ್ದುಕೊಂಡಲ್ಲಿ ಅಲ್ಕರಾಜ್, ಅವರು ಎಲ್ಲ ನಾಲ್ಕೂ ಪ್ರಮುಖ ಗ್ರ್ಯಾನ್‌ಸ್ಲಾಮ್ ಟೂರ್ನಿಗಳನ್ನು ಗೆದ್ದಂತೆ ಆಗಲಿದೆ. ಮಾತ್ರವಲ್ಲ, ಈ ಸಾಧನೆಗೆ ಪಾತ್ರರಾದ ಅತಿ ಕಿರಿಯ ಆಟಗಾರ ಎನಿಸಿದ್ದಾರೆ. ಸ್ಪೇನ್‌ನವರೇ ಆದ ರಫೆಲ್ ನಡಾಲ್ 24ನೇ ವಯಸ್ಸಿನಲ್ಲಿ ಈ ಸಾಧನೆ ದಾಖಲಿಸಿದ್ದರು.

ಊಹಿಸಲಾಗದ ಆಟವಾಡುವ ಮೆಡ್ವೆಡೇವ್ ಒತ್ತಡದಲ್ಲೂ ಶಾಂತಚಿತ್ತದಿಂದ ಆಡಿ 6–7 (9–11), 6–3, 6–4, 6–2 ರಿಂದ ಫ್ರಾನ್ಸ್‌ನ ಕ್ವೆಂಟಿನ್ ಹಾಲಿಸ್ ಅವರನ್ನು ಮಣಿಸಿದರು. ಹೋರಾಟದ ಮೊದಲ ಸೆಟ್ ಕಳೆದುಕೊಂಡ ನಂತರ ರಷ್ಯದ ಆಟಗಾರ ಪರದಾಡಲಿಲ್ಲ. ಅವರ ಮುಂದಿನ ಎದುರಾಳಿ ಹಂಗೆರಿಯ ಫ್ಯಾಬಿಯನ್ ಮೊರೊಝಾನ್.

ಸಂಜೆಯ ವೇಳೆ ಭಾರಿ ಮಳೆಯಾಯಿತು. ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್– ಫ್ರಾನ್ಸ್‌ನ ಅಲೆಕ್ಸಾಂಡ್ರ ಮುಲ್ಲರ್ ನಡುವಣ ಪಂದ್ಯ ಅರ್ಧ ಗಂಟೆ ವಿಳಂಬವಾಯಿತು. ಆದರೆ ಇದೇನೂ ಜ್ವರೇವ್ ಆಟದ ಮೇಲೆ ಪರಿಣಾಮ ಬೀರಲಿಲ್ಲ. ಅವರು 6–3, 4–6, 6–3, 6–4 ರಿಂದ ಜಯಗಳಿಸಿದರು.

ಸಬಲೆಂಕಾ ಮುನ್ನಡೆ: ಬೆಲರೂಸ್‌ನ ಸಬಲೆಂಕಾ 6–3, 6–1 ರಿಂದ ಚೀನಾದ ಬಾಯಿ ಝುಷುವಾನ್ ಅವರನ್ನು ಹಿಮ್ಮೆಟ್ಟಿಸಿದರು. ಅವರ ಮುಂದಿನ ಎದುರಾಳಿ ರಷ್ಯಾ ಸಂಜಾತೆ ಅನಸ್ತೇಸಿಯಾ ಪೊಟಪೋವಾ.

ಮಾರ್ಗರೇಟ್ ಕೋರ್ಟ್ ಅರೇನಾದಲ್ಲಿ ಮೂರನೇ ಶ್ರೇಯಾಂಕದ ಗಾಫ್ 6–2, 6–2 ರಿಂದ ಸರ್ಬಿಯಾದ ಓಲ್ಗಾ ಡಾನಿಲೊವಿಕ್ ಅವರನ್ನು ಸೋಲಿಸಿದರು.

12ನೇ ಶ್ರೇಯಾಂಕದ ಎಲಿನಾ ಸ್ವಿಟೊಲಿನಾ (ಉಕ್ರೇನ್), ಟರ್ಕಿಯ ಪ್ರತಿಭೆ ಝಿನೆಪ್ ಸೊನ್ಮೆಝ್, ಕೆನಡಾದ ವಿಕ್ಟೋರಿಯಾ ಎಂಬೊಕೊ ಕೂಡ ಮುನ್ನಡೆದರು. ರಷ್ಯಾದ 18 ವರ್ಷ ವಯಸ್ಸಿನ ಮಿಯೆರಾ ಆಂಡ್ರೀವಾ 6–0, 6–4 ರಿಂದ ಗ್ರೀಸ್‌ನ ಮರಿಯಾ ಸಕ್ಕರಿ ವಿರುದ್ಧ ಜಯಗಳಿಸಿದರು.



ಚೆಂಡನ್ನು ಹಿಂತಿರುಗಿಸುವ ಯತ್ನದಲ್ಲಿ ಕಾರ್ಲೋಸ್ ಅಲ್ಕರಾಜ್ ಎಎಫ್‌ಪಿ ಚಿತ್ರ

ಎರಡನೇ ಸುತ್ತಿಗೆ ಭಾಂಬ್ರಿ– ಗೊರಾನ್ಸನ್

ಮೆಲ್ಬರ್ನ್ (ಪಿಟಿಐ): ಭಾರತದ ಅಗ್ರ ಡಬಲ್ಸ್ ಆಟಗಾರ ಯುಕಿ ಭಾಂಬ್ರಿ ಅವರು ಸ್ವೀಡನ್‌ನ ಜೊತೆಗಾರ ಆಂಡ್ರೆ ಗೊರಾನ್ಸನ್ ಜೊತೆಗೂಡಿ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ ಬುಧವಾರ ನೇರ ಸೆಟ್‌ಗಳ ಗೆಲುವು ದಾಖಲಿಸಿದರು.

ಹತ್ತನೇ ಶ್ರೇಯಾಂಕದ ಇಂಡೊ–ಸ್ವೀಡಿಶ್ ಜೋಡಿ ಕೋರ್ಟ್ ನಂಬರ್ 13ರಲ್ಲಿ ನಡೆದ ಪಂದ್ಯದಲ್ಲಿ 6–3, 6–3 ರಿಂದ ಜೇಮ್ಸ್ ಡಕ್ವರ್ಥ್– ಕ್ರುಝ್ ಹೆವಿಡ್ ಜೋಡಿಯನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆಯಿತು.

ಕ್ರೀಡಾಕೂಟಗಳ ಅವ್ಯವಸ್ಥೆ: ಎಸ್‌ಒಪಿ ರೂಪಿಸಲು ಸಚಿವಾಲಯ ಸೂಚನೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಆತಿಥ್ಯದ ಆಕಾಂಕ್ಷೆ ಹೊಂದಿರುವ ವೇಳೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮುಜುಗರದ ಸನ್ನಿವೇಶ ತಪ್ಪಿಸಲು ಕ್ರೀಡಾ ಸಚಿವಾಲಯ ಕ್ರಮಕ್ಕೆ ಮುಂದಾಗಿದೆ. ಇಂಡಿಯಾ ಓಪನ್ ಬ್ಯಾಡ್ಮಿಂಟನ್ ವೇಳೆ ಆದ ಅವ್ಯವಸ್ಥೆಯನ್ನು ತಪ್ಪಿಸಲು ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ರೂಪಿಸುವಂತೆ ಸಚಿವಾಲಯವು ಭಾರತ ಕ್ರೀಡಾ ಪ್ರಾಧಿಕಾರಕ್ಕೆ ಸೂಚಿಸಿದೆ.

ಪಂದ್ಯದ ವೇಳೆ ಹಕ್ಕಿ ಹಿಕ್ಕೆ ಹಾಕಿದ್ದು, ಪ್ರೇಕ್ಷಕರ ಗ್ಯಾಲರಿಯಲ್ಲಿ ಕೋತಿ ಪ್ರತ್ಯಕ್ಷವಾಗಿದ್ದು, ಅನೈರ್ಮಲ್ಯ, ನಿರ್ವಹಣೆ ಇಲ್ಲದ ಸಲಕರಣೆ, ಸೌಲಭ್ಯಗಳಿಂದಾಗಿ ಇಂಡಿಯಾ ಓಪನ್ ಟೂರ್ನಿಯ ಆತಿಥ್ಯ ವಹಿಸಿದ್ದ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದ ವರ್ಚಸ್ಸಿಗೆ ಧಕ್ಕೆಯಾಗಿತ್ತು.

‘ಸ್ಪರ್ಧೆಗಳನ್ನು ನಡೆಸಲು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಿದ್ದೇವೆ. ಆದರೆ ಆಯೋಜನೆಯಲ್ಲಿ ಲೋಪದೋಷ ಕಂಡುಬಂದರೆ, ಎಲ್ಲರೂ ಕ್ರೀಡಾ ಸಚಿವಾಲಯದ ಉತ್ತರದಾಯಿತ್ವ ನಿರೀಕ್ಷಿಸುತ್ತಾರೆ. ಹೀಗಾಗಿ ಯೋಜನಾ ಹಂತದಲ್ಲೇ ಸಚಿವಾಲಯ ಒಳಗೊಳ್ಳುವುದು ಯೋಗ್ಯ’ ಎಂದು ಮೂಲವೊಂದು ಪಿಟಿಐಗೆ ತಿಳಿಸಿದೆ.

ಲಕ್ಷ್ಯ, ಸಿಂಧು, ಶ್ರೀಕಾಂತ್ ಶುಭಾರಂಭ

ಜಕಾರ್ತ (ಪಿಟಿಐ): ಭಾರತದ ಪಿ.ವಿ. ಸಿಂಧು, ಲಕ್ಷ್ಯ ಸೇನ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಎರಡನೇ ಸುತ್ತು ಪ್ರವೇಶಿಸಿದರು.


ಒಲಿಂಪಿಯನ್ ಸಿಂಧು ಅವರು ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ 22–20, 21–18ರಿಂದ ನೇರ ಗೇಮ್‌ಗಳಲ್ಲಿ ಜಪಾನ್‌ನ ಮನಾಮಿ ಸುಯಿಝು ಅವರನ್ನು ಮಣಿಸಿದರು. ಐದನೇ ಶ್ರೇಯಾಂಕದ ಸಿಂಧು, 53 ನಿಮಿಷ ನಡೆದ ಹಣಾಹಣಿಯಲ್ಲಿ ಸುಯಿಝು ಅವರ ಪೈಪೋಟಿಯನ್ನು ಸಮರ್ಥವಾಗಿ ಎದುರಿಸಿದರು.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ಪಂದ್ಯದಲ್ಲಿ 21–15, 21–23, 24–22ರಿಂದ ಜಪಾನ್‌ನ ಕೋಕಿ ವತಾನಬೆ ಅವರನ್ನು ಮಣಿಸಿದರು. ಮೊದಲ ಗೇಮ್‌ನಲ್ಲಿ ಜಪಾನ್‌ನ ಆಟಗಾರನ ವಿರುದ್ಧ ಪ್ರಾಬಲ್ಯ ಸಾಧಿಸಿದ ಶ್ರೀಕಾಂತ್, ಎರಡನೇ ಗೇಮ್ ಅನ್ನು ಕಳೆದುಕೊಂಡರು. ನಿರ್ಣಾಯಕವಾಗಿದ್ದ ಮೂರನೇ ಗೇಮ್ ಗೆಲ್ಲಲು ಭಾರತದ ಆಟಗಾರ ಬೆವರು ಹರಿಸಬೇಕಾಯಿತು. ಅಂತಿಮವಾಗಿ 1 ಗಂಟೆ 12 ನಿಮಿಷಗಳಲ್ಲಿ ಪಂದ್ಯವನ್ನು ತಮ್ಮದಾಗಿಸಿಕೊಂಡರು.

ಲಕ್ಷ್ಯ ಅವರು 21–13, 16–21, 21–14ರಿಂದ 2021ರ ವಿಶ್ವ ಚಾಂಪಿಯನ್ಸ್ ಕಂಚು ವಿಜೇತ, ಚೀನಾ ತೈಪೆಯ ವಾಂಗ್ ಝು ವೀ ಅವರನ್ನು ಮಣಿಸಿದರು. ಉದಯೋನ್ಮುಖ ಆಟಗಾರ ಅನ್ಮೋಲ್ ಖಾರ್ಬ್ 21-16, 21-17ರಿಂದ ಪೈ ಯು ಪೊ (ಚೀನಾ ತೈಪೆ) ವಿರುದ್ಧ ಗೆದ್ದು, ಎರಡನೇ ಸುತ್ತಿಗೆ ಮುನ್ನಡೆದರು.

ಆದರೆ, ಭಾರತದ ಕಿರಣ್ ಜಾರ್ಜ್ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿಯೇ ಟೂರ್ನಿಯಿಂದ ನಿರ್ಗಮಿಸಬೇಕಾಯಿತು. ಅವರು 17–21, 14–21ರಿಂದ ಆತಿಥೇಯ ರಾಷ್ಟ್ರದ ಮೊಹ್ ಝಾಕಿ ಉಬೈದಿಲ್ಲಾ ವಿರುದ್ಧ ಸೋಲನುಭವಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣಕ್ಕಿಳಿದಿದ್ದ ಆಕರ್ಷಿ ಕಶ್ಯಪ್ ಅವರೂ ಹೊರಬಿದ್ದರು. ಭಾರತದ ಆಟಗಾರ್ತಿ 21–8, 20–22, 17–21ರಿಂದ ಡೆನ್ಮಾರ್ಕ್‌ನ ಜೂಲಿ ಡವಾಲ್ ಜೇಕಬ್ಸನ್ ಎದುರು ಪರಾಭವಗೊಂಡರು.



ಭಾರತದ ಕಿದಂಬಿ ಶ್ರೀಕಾಂತ್

ಶರ್ಮಾ ಅಬ್ಬರ; ಭಾರತ ಶುಭಾರಂಭ

ನ್ಯೂಜಿಲೆಂಡ್ ವಿರುದ್ಧ ಮೊದಲ ಟಿ20 ಪಂದ್ಯ ● ಫಿನಿಷರ್ ಪಾತ್ರದಲ್ಲಿ ರಿಂಕು ಮಿಂಚು ● ಸೂರ್ಯ ಪಡೆಗೆ 48 ರನ್ ಜಯ

84 ರನ್
35 ಎಸೆತ
5 ಬೌಂಡರಿ
8 ಸಿಕ್ಸರ್



ಅಭಿಷೇಕ್ ಶರ್ಮಾ
ಪಿಟಿಐ ಚಿತ್ರ

ನಾಗ್ಪುರ (ಪಿಟಿಐ): ಎಡಗೈ ಬ್ಯಾಟರ್ ಅಭಿಷೇಕ್ ಶರ್ಮಾ ಅವರ ಮಿಂಚಿನ ಬ್ಯಾಟಿಂಗ್ ನೆರವಿನಿಂದ ಭಾರತ ತಂಡವು ಬುಧವಾರ ನಡೆದ ಮೊದಲ ಟಿ20 ಪಂದ್ಯದಲ್ಲಿ 48 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿತು.

ಇಲ್ಲಿನ ವಿಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಭಿಷೇಕ್ ನ್ಯೂಜಿಲೆಂಡ್ ಬೌಲಿಂಗ್ ದಾಳಿಯನ್ನು ಧ್ವಂಸಗೊಳಿಸಿದರು. ವಿಶ್ವದ ಅಗ್ರಮಾನ್ಯ ಟಿ20 ಬ್ಯಾಟರ್ ಆಗಿರುವ ಅವರು ಎಗ್ಗಿಲ್ಲದೇ ಬ್ಯಾಟ್ ಬೀಸಿ ಕೇವಲ 35 ಎಸೆತಗಳಲ್ಲಿ 84 ರನ್ ಸಿಡಿಸಿದರು. ಕೊನೆಯಲ್ಲಿ ರಿಂಕು ಸಿಂಗ್ ಅವರೂ ಬಿರುಸಿನ ಆಟವಾಡಿದರು. ಅದರಿಂದಾಗಿ, ಸೂರ್ಯಕುಮಾರ್ ಯಾದವ್ ಪಡೆಯು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 238 ರನ್‌ಗಳ ಭಾರಿ ಮೊತ್ತ ಗಳಿಸಿತು.

ಕಠಿಣ ಗುರಿ ಬೆನ್ನಟ್ಟಿದ ಮಿಚೆಲ್ ಸ್ಯಾಂಟನರ್ ಬಳಗಕ್ಕೆ ಎಡಗೈ ವೇಗಿ ಅರ್ಷದೀಪ್ ಸಿಂಗ್ ಮೊದಲ ಓವರ್‌ನಲ್ಲಿಯೇ ಆಘಾತ ನೀಡಿದರು. ಡೆವೊನ್ ಕಾನ್ವೆ ಅವರು ಶೂನ್ಯಕ್ಕೆ ನಿರ್ಗಮಿಸಿದರು. ಬಳಿಕ, ರಚಿನ್ ರವೀಂದ್ರ (1; 5ಎ) ಅವರು ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಅಭಿಷೇಕ್ ಹಿಡಿದ ಅಮೋಘ ಕ್ಯಾಚ್‌ಗೆ ಹಿಂತಿರುಗಬೇಕಾಯಿತು.

ಆಲ್‌ರೌಂಡರ್ ಗ್ಲೆನ್ ಫಿಲಿಪ್ಸ್ (78; 40ಎ, 4x4, 6x6) ಅವರು ಟಿಮ್ ರಾಬಿನ್ಸನ್ (21; 15ಎ) ಜೊತೆಗೂಡಿ ಮೂರನೇ ವಿಕೆಟ್‌ಗೆ 51 ರನ್ ಸೇರಿಸಿ ದರು. ರಾಬಿನ್ಸನ್ ಔಟಾದ ಬಳಿಕ ಮಾರ್ಕ್ ಚಾಪ್‌ಮನ್ (39; 24ಎ, 4x4, 6x2) ಅವರೊಂದಿಗೆ 79 ಜತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ, ಕಿವೀಸ್ ಪಡೆ ನಿಯಮಿತವಾಗಿ ವಿಕೆಟ್ ಕಳೆದುಕೊಂಡಿತು. ನ್ಯೂಜಿಲೆಂಡ್ 7 ವಿಕೆಟ್‌ಗೆ 190 ರನ್‌ಗಳಿಸಿ, ಸವಾಲು ಮುಗಿಸಿತು.

ಇದಕ್ಕೆ ಮೊದಲು, ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡವು 27 ರನ್‌ಗಳಾಗುವಷ್ಟರಲ್ಲಿ ಆರಂಭ ಆಟಗಾರ ಸಂಜು ಸ್ಯಾಮ್ಸನ್ (10) ಮತ್ತು ಮೂರನೇ ಕ್ರಮಾಂಕದಲ್ಲಿ ಆಡಿದ ಇಶಾನ್ ಕಿಶನ್ (8) ಅವರನ್ನು ಕಳೆದುಕೊಂಡಿತ್ತು. ಆದರೆ, ಇನ್ನೊಂದು ಬದಿಯಲ್ಲಿ ನೆಲೆಯೂರಿ ನಿಂತ ಅಭಿಷೇಕ್ ಬಿರುಸಿನ ಅರ್ಧಶತಕ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ ಎಂಟು ಭರ್ಜರಿ ಸಿಕ್ಸರ್ ಮತ್ತು ಐದು ಬೌಂಡರಿಗಳು ಇದ್ದವು.

ಅಭಿಷೇಕ್ ಅವರಿಗೆ ಕಿವೀಸ್ ಬೌಲಿಂಗ್ ಪಡೆಯಲ್ಲಿ ಯಾರೂ ಅಪಾಯ ವೊಡ್ಡುವಂತೆ ಕಾಣಲಿಲ್ಲ. ಕ್ರಿಸ್ಟಿನ್ ಕ್ಲಾರ್ಕ್ ಮತ್ತು ಕೈಲ್ ಜೇಮಿಸನ್ ತೀವ್ರ ದಂಡನೆಗೊಳಗಾದರು. ಮೂರು ಸಿಕ್ಸರ್‌ಗಳ ನಂತರವಷ್ಟೇ, ಸ್ಪಿನ್ನರ್ ಗ್ಲೆನ್ ಫಿಲಿಪ್ಸ್ ಬೌಲಿಂಗ್‌ನಲ್ಲಿ ಅವರ ಮೊದಲ ಬೌಂಡರಿ ಬಂದಿತು. ಅಭಿಷೇಕ್ ಆಟದಿಂದಾಗಿ ನಿರಾಳರಾದ ಸೂರ್ಯ ಎಂದಿನ ಲಯದಲ್ಲಿ ಅಲ್ಲದಿದ್ದರೂ ಕೊಂಚ ವಿಶ್ವಾಸದಿಂದ ಆಡಿ 22 ಎಸೆತಗಳಲ್ಲಿ 32 ರನ್ ಬಾರಿಸಿದರು. ಅಭಿಷೇಕ್ ಜೊತೆಗೂಡಿ ಮೂರನೇ ವಿಕೆಟ್‌ಗೆ ಕೇವಲ 47 ಎಸೆತಗಳಲ್ಲಿ 99 ರನ್ ಜೊತೆಯಾಟವಾಡಿದರು.

ಇನಿಂಗ್ಸ್‌ನ ಅಂತಿಮ ಕೆಲವು ಓವರುಗಳಲ್ಲಿ ರಿಂಕು ಸಿಂಗ್ (ಅಜೇಯ 44, 20 ಎ) ಅವರು ತಂಡದ ಮೊತ್ತ ಮತ್ತಷ್ಟು ಹಿಗ್ಗಲು ಕಾರಣರಾದರು. ದೀರ್ಘಕಾಲದ ನಂತರ ಫಿನಿಷರ್ ಪಾತ್ರದಲ್ಲಿ ಮಿಂಚಿದ ಅವರು 4 ಸಿಕ್ಸರ್, 3 ಬೌಂಡರಿಗಳನ್ನು ಚಚ್ಚಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರುಗಳಲ್ಲಿ 7 ವಿಕೆಟ್‌ಗೆ 238 (ಅಭಿಷೇಕ್ ಶರ್ಮ 84, ಸೂರ್ಯಕುಮಾರ್ ಯಾದವ್ 32, ಹಾರ್ದಿಕ್ ಪಾಂಡ್ಯ 25, ರಿಂಕು ಸಿಂಗ್ ಔಟಾಗದೇ 44; ಜೇಕಬ್ ಡಫಿ 27ಕ್ಕೆ2, ಕೈಲ್ ಜೇಮಿಸನ್ 54ಕ್ಕೆ2). ನ್ಯೂಜಿಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 190 (ಗ್ಲೆನ್ ಫಿಲಿಪ್ಸ್ 78, ಮಾರ್ಕ್ ಚಾಪ್‌ಮನ್ 39, ಡೇರಿಲ್ ಮಿಚೆಲ್ 28; ವರುಣ್ ಚಕ್ರವರ್ತಿ 37ಕ್ಕೆ2, ಶಿವಂ ದುಬೆ 28ಕ್ಕೆ2). ಫಲಿತಾಂಶ: ಭಾರತ ತಂಡಕ್ಕೆ 48 ರನ್ ಜಯ; ಸರಣಿಯಲ್ಲಿ 1–0 ಮುನ್ನಡೆ. ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ.

ರಣಜಿ ಟ್ರೋಫಿ: ಕರ್ನಾಟಕ–ಮಧ್ಯಪ್ರದೇಶ ಹಣಾಹಣಿ ಇಂದಿನಿಂದ

ಪ್ರಾಬಲ್ಯ ಮುಂದುವರಿಸುವತ್ತ ಮಯಂಕ್ ಪಡೆ ಚಿತ್ತ

● ಗಿರೀಶ ದೊಡ್ಡಮನಿ

ಆಲೂರು(ಬೆಂಗಳೂರು): ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಋತುವಿನ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಚರಣದಲ್ಲಿಯೂ ತನ್ನ ಪ್ರಾಬಲ್ಯವನ್ನು ಮುಂದುವರಿಸುವ ಛಲದಲ್ಲಿದೆ.

ಅಕ್ಟೋಬರ್ ನವೆಂಬರ್‌ನಲ್ಲಿ ನಡೆದಿದ್ದ ಎಲೀಟ್ ಬಿ ಗುಂಪಿನ ಮೊದಲ ಚರಣದಲ್ಲಿ ಅಗ್ರಸ್ಥಾನ ಪಡೆದಿರುವ ಕರ್ನಾಟಕ ಗುರುವಾರದಿಂದ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು ಎದುರಿಸಲಿದೆ. ಮೊದಲ ಹಂತದಲ್ಲಿ ಐದು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಿತ್ತು. ಉಳಿದ ಮೂರರಲ್ಲಿ ಡ್ರಾ ಸಾಧಿಸಿತ್ತು. ಇದರಿಂದಾಗಿ ಒಟ್ಟು 21 ಅಂಕಗಳು ಕರ್ನಾಟಕದ ಖಾತೆಯಲ್ಲಿವೆ. ಎರಡನೇ ಹಂತದಲ್ಲಿ ಮಧ್ಯಪ್ರದೇಶ ಮತ್ತು ಪಂಜಾಬ್ (ಮುಲ್ಲನಪುರದಲ್ಲಿ ನಡೆಯಲಿದೆ) ಎದುರಿನ ಪಂದ್ಯಗಳು ಬಾಕಿ ಇವೆ.

ಕಳೆದ 11 ವರ್ಷಗಳ ನಂತರ ರಣಜಿ ಟ್ರೋಫಿ ಜಯಿಸುವ ಛಲದಲ್ಲಿದೆ. ಬಲಗೈ ಬ್ಯಾಟರ್ ಕರುಣ್ ನಾಯರ್ ಅವರು ರಣಜಿ ಟೂರ್ನಿಯಲ್ಲಿ ಅತ್ಯಧಿಕ ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಐದು ಪಂದ್ಯಗಳಿಂದ 602 ರನ್ ಪೇರಿಸಿದ್ದಾರೆ. ಅದರಲ್ಲಿ ಎರಡು ಶತಕಗಳಿವೆ. ಆದರೆ ಅಮೋಘ ಲಯದಲ್ಲಿದ್ದ ಬ್ಯಾಟರ್ ಸ್ಮರಣ್ ರವಿಚಂದ್ರನ್ (595 ರನ್) ಅವರು ಲಭ್ಯರಿಲ್ಲ. ಗಾಯದಿಂದಾಗಿ ವಿಶ್ರಾಂತಿ ಪಡೆದಿದ್ದಾರೆ. ನಿಕಿನ್ ಜೋಸ್ ತಂಡಕ್ಕೆ ಮರಳಿರುವುದು ಸಮಾಧಾನದ ಸಂಗತಿ. ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ 700ಕ್ಕೂ ಹೆಚ್ಚು ರನ್ ಗಳಿಸಿದ ದೇವದತ್ತ ಪಡಿಕ್ಕಲ್ ಅವರು ಕೆಂಪು ಚೆಂಡಿನಲ್ಲಿ ಸಾಮರ್ಥ್ಯ ಪಣಕ್ಕೊಡ್ಡಲು ಸಿದ್ಧರಾಗಿದ್ದಾರೆ.

ವಿದ್ವತ್ ಕಾವೇರಪ್ಪ (14 ವಿಕೆಟ್) ಅವರಿಗೂ ಲಯಕ್ಕೆ ಮರಳಲು ಇದು ಉತ್ತಮ ಅವಕಾಶವಾಗಿದೆ. ಮೊದಲ ಹಂತದಲ್ಲಿ ಸ್ಪಿನ್ನರ್‌ಗಳಾದ ಶ್ರೇಯಸ್ ಗೋಪಾಲ್ (27 ವಿಕೆಟ್), ಮೊಹಸಿನ್ ಖಾನ್ (12) ಮತ್ತು ಶಿಖರ್ ಶೆಟ್ಟಿ (12) ಮೂವರೂ ಸೇರಿ 51 ವಿಕೆಟ್ ಹಂಚಿಕೊಂಡಿದ್ದರು. ಆಲೂರಿನ ಕ್ರೀಡಾಂಗಣದಲ್ಲಿಯೂ ಅವರು ಮಿಂಚುವ ನಿರೀಕ್ಷೆ ಇದೆ.

ಮಧ್ಯಪ್ರದೇಶ ತಂಡದ ಬ್ಯಾಟಿಂಗ್ ವಿಭಾಗ ಬಲಿಷ್ಠ ವಾಗಿದೆ. ರಜತ್ ಪಾಟೀದಾರ್, ವೆಂಕಟೇಶ್ ಅಯ್ಯರ್, ಹಿಮಾಂಶು ಮಂತ್ರಿ, ನಾಯಕ ಶುಭಂ ಶರ್ಮಾ, ಹರ್ಷ ಗವಳಿ ಅವರು ದೀರ್ಘ ಇನಿಂಗ್ಸ್ ಆಡಬಲ್ಲರು. ಸ್ಪಿನ್ನರ್ ಕುಮಾರ ಕಾರ್ತಿಕೇಯ (21 ವಿಕೆಟ್) ಮತ್ತು ಸಾರಾಂಶ್ ಜೈನ್ (19 ವಿಕೆಟ್) ಅವರು ಜೊತೆಯಾಟಗಳನ್ನು ಮುರಿಯುವ ಸಮರ್ಥರಾಗಿದ್ದಾರೆ. ಮಧ್ಯಪ್ರದೇಶ ತಂಡವು ಆಡಿರುವ 5 ಪಂದ್ಯಗಳಲ್ಲಿ 1ರಲ್ಲಿ ಗೆದ್ದಿದೆ. ಉಳಿದ ಪಂದ್ಯಗಳು ಡ್ರಾ ಆಗಿವೆ. ಒಟ್ಟು 16 ಅಂಕ ಗಳಿಸಿದೆ.



ಮಯಂಕ್ ಅಗರವಾಲ್

ಆರ್‌ಸಿಬಿಗೆ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ವಿನಂತಿ

‘ಚಿನ್ನಸ್ವಾಮಿ’ಯಲ್ಲೇ ಪಂದ್ಯ ಆಯೋಜಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ನಡೆಸಬೇಕು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ವಿನಂತಿ ಮಾಡಿದರು.

‘ಈಗ ಚೆಂಡು ಆರ್‌ಸಿಬಿ ಅಂಗಳದಲ್ಲಿದೆ. ಐಪಿಎಲ್ ಮತ್ತು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸಲು ಸಂಸ್ಥೆಗೆ ರಾಜ್ಯ ಸರ್ಕಾರದಿಂದ ಷರತ್ತುಬದ್ಧ ಅನುಮತಿ ದೊರಕಿದೆ. ಸರ್ಕಾರದ ನಿರ್ದೇಶನಗಳಂತೆ ಫೆಬ್ರುವರಿ ಅಂತ್ಯದೊಳಗೆ ನವೀಕರಣ ಕಾರ್ಯಗಳನ್ನು ಪೂರ್ಣಗೊಳಿಸಿಕೊಡುತ್ತೇವೆ. ಆಗ ಷರತ್ತಿಲ್ಲದೇ ಅನುಮತಿ ಪತ್ರ ಪಡೆಯುವ ವಿಶ್ವಾಸವಿದೆ. ಆದ್ದರಿಂದ ಹಾಲಿ ಚಾಂಪಿಯನ್ ಆರ್‌ಸಿಬಿಯು ಉದ್ಘಾಟನೆ ಸೇರಿದಂತೆ ಎಲ್ಲ ಏಳು ಪಂದ್ಯಗಳನ್ನೂ ಇಲ್ಲಿಯೇ ಆಡಲಿ’ ಎಂದು ಪ್ರಸಾದ್ ಅವರು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

‘ಸುಮಾರು 17 ವರ್ಷಗಳಿಂದ ಇದೇ ಮೈದಾನದಲ್ಲಿ ಆಡಿ ಬೆಳೆದಿರುವ ತಂಡ ಆರ್‌ಸಿಬಿ. ಬೆಂಗಳೂರಿನ ಅಭಿಮಾನಿಗಳಿಂದಲೇ ಅವರು ಬೆಳೆದಿರುವುದು. ಆದ್ದರಿಂದ ಇಲ್ಲಿಯೇ ತಮ್ಮ ಐಪಿಎಲ್ ಪಂದ್ಯಗಳನ್ನು ಆಡುವುದು ಅವರ ಹೊಣೆಯಾಗಿದೆ. ಇಲ್ಲಿ ಪಂದ್ಯಗಳ ಆಯೋಜನೆಗೆ ಅವರು (ಆರ್‌ಸಿಬಿ) ಹಿಂಜರಿಯುತ್ತಿರುವುದಕ್ಕೆ ಕಾರಣ ಗೊತ್ತಿಲ್ಲ’ ಎಂದು ಹೇಳಿದರು.

‘ನಮ್ಮ ಸಮಿತಿಯು ಅಧಿಕಾರಕ್ಕೆ ಬಂದು 45 ದಿನಗಳು ಕಳೆದಿವೆ. ಈ ಅವಧಿಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಗೃಹ ಸಚಿವರೊಂದಿಗೆ ಹಲವು ಸುತ್ತುಗಳ ಮಾತುಕತೆ ನಡೆಸಿದ್ದೇವೆ. ಸರ್ಕಾರದಿಂದ ಉತ್ತಮ ಸ್ಪಂದನೆ ಲಭಿಸಿದೆ. ಆರ್‌ಸಿಬಿ ಕೂಡ ಸ್ಪಂದಿಸಬೇಕು. ನಮ್ಮೊಂದಿಗೆ ಕೈಜೋಡಿಸಬೇಕು’ ಎಂದರು.

‘ಸರ್ಕಾರವು ನೀಡಿರುವ ಅನುಮತಿಯಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೂಡ ಸಮಾಧಾನ ವ್ಯಕ್ತಪಡಿಸಿದೆ. ಮುಂಬರುವ ದಿನಗಳಲ್ಲಿ ಅಂತರರಾಷ್ಟ್ರೀಯ ಪಂದ್ಯಗಳ ಆಯೋಜನೆಗೆ ಅವಕಾಶ ನೀಡುವ ಭರವಸೆ ನೀಡಿದೆ. ಜೂನ್ 4ರಂದು ನಡೆದ ಕಾಲ್ತುಳಿತದ ದುರ್ಘಟನೆಯ ನಂತರ ಇಲ್ಲಿ ಯಾವುದೇ ಪಂದ್ಯ ನಡೆದಿಲ್ಲ. ಮಹಿಳಾ ವಿಶ್ವಕಪ್ ಮತ್ತು ಮುಂದಿನ ತಿಂಗಳು ನಡೆಯುವ ಪುರುಷರ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳ ಆಯೋಜನೆಯಿಂದ ಚಿನ್ನಸ್ವಾಮಿ ಅಂಗಳ ವಂಚಿತವಾಗಿದೆ. ಇದಕ್ಕೆ ಪರಿಹಾರವಾಗಿ ಮುಂದಿನ ದಿನಗಳಲ್ಲಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನು ಬಿಸಿಸಿಐ ನೀಡಲಿದೆ’ ಎಂದು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಸಂಸ್ಥೆಯ ಕಾರ್ಯದರ್ಶಿ ಸಂತೋಷ್ ಮೆನನ್, ‘ನಿನ್ನೆ (ಮಂಗಳವಾರ) ನಡೆದ ಐಪಿಎಲ್ ಆಡಳಿತ ಸಮಿತಿ ಸಭೆಯಲ್ಲಿ ನಾವು ಭಾಗವಹಿಸಿದ್ದೆವು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳ ಆಯೋಜನೆಯ ಕುರಿತು ಕೆಎಸ್‌ಸಿಎ ಮತ್ತು ಆರ್‌ಸಿಬಿ ಪರಸ್ಪರ ತೀರ್ಮಾನ ತೆಗೆದುಕೊಳ್ಳಲು ಮುಕ್ತವಾಗಿದೆಯೆಂದು ಸಮಿತಿಯು ಸಲಹೆ ನೀಡಿದೆ. ಆರ್‌ಸಿಬಿಗೂ ಇಲ್ಲಿಯೇ ಪಂದ್ಯಗಳನ್ನು ನಡೆಸುವ ಇಚ್ಛೆ ಇದೆ. ಆದರೆ ಕೆಲವು ಸಂಗತಿಗಳಲ್ಲಿ ಅವರಿಗೆ ಸ್ಪಷ್ಟತೆ ಬೇಕಿದ್ದು, ಶೀಘ್ರದಲ್ಲಿಯೇ ಈ ಕುರಿತು ಅವರೊಂದಿಗೆ ಚರ್ಚಿಸಲಿದ್ದೇವೆ’ ಎಂದರು.

ಈ ಸಂದರ್ಭದಲ್ಲಿ ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಹಾಜರಿದ್ದರು.

ಕಾಗದರಹಿತ ಟಿಕೆಟ್

ಮುಂಬರುವ ದಿನಗಳಲ್ಲಿ ಡಿಜಿಟಲ್ ಟಿಕೆಟ್ ವಿತರಣಾ ವ್ಯವಸ್ಥೆಯನ್ನು ಜಾರಿ ಮಾಡಲಾಗುವುದು. ಇದು ಕಾಗದರಹಿತ ವ್ಯವಸ್ಥೆಯಾಗಲಿದೆ. ಇವತ್ತು ಪ್ರತಿಯೊಬ್ಬರ ಬಳಿಯೂ ಮೊಬೈಲ್ ಫೋನ್ ಇರುವುದರಿಂದ ಡಿಜಿಟಲ್ ಟಿಕೆಟ್ ಪಡೆಯುವುದು ಕಷ್ಟವಲ್ಲ. ಗೇಟ್ ಬಳಿರುವ ಅಧಿಕೃತ ಡಿಜಿಟಲ್ ಸಲಕರಣೆ ಮೂಲಕ ಟಿಕೆಟ್ ಸ್ಕ್ಯಾನ್ ಮಾಡಿಕೊಂಡು ಒಳಬರುವ ವ್ಯವಸ್ಥೆಯಾಗಲಿದೆ. ಇದರಿಂದ ಕ್ರೀಡಾಂಗಣದ ಬಳಿ ಟಿಕೆಟ್ ಮಾರಾಟವಿರುವುದಿಲ್ಲ. ಆದ್ದರಿಂದ ಮುಂದಿನ ದಿನಗಳಲ್ಲಿ ಟಿಕೆಟ್ ಕೌಂಟರ್‌ಗಳೂ ಇರುವುದಿಲ್ಲ ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದರು.

ಪ್ರವೇಶದ್ವಾರಗಳ ನವೀಕರಣ ಕಾಮಗಾರಿ

ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ದುರ್ಘಟನೆ ನಡೆದಿತ್ತು. 11 ಅಭಿಮಾನಿಗಳು ಸಾವಿಗೀಡಾಗಿದ್ದರು. ಅದರ ನಂತರ ರಾಜ್ಯ ಸರ್ಕಾರ ನೇಮಕಮಾಡಿದ್ದ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಅವರ ಸಮಿತಿಯು ಪ್ರೇಕ್ಷಕರ ಸುರಕ್ಷತೆಗಾಗಿ ಕ್ರೀಡಾಂಗಣದಲ್ಲಿ ಕೆಲವು ಸುಧಾರಣಾ ಕ್ರಮಗಳನ್ನು ಸೂಚಿಸಿತ್ತು. ಅದರ ಪ್ರಕಾರ ಕ್ರೀಡಾಂಗಣದ ಪ್ರವೇಶದ್ವಾರಗಳಲ್ಲಿ ಬದಲಾವಣೆ ಕಾರ್ಯ ಆರಂಭವಾಗಿದೆ.

ಅಗ್ನಿ ದುರಂತದ ಸಂದರ್ಭದಲ್ಲಿ ಅಗ್ನಿಶಾಮಕ ವಾಹನಗಳು, ತುರ್ತು ಸಂದರ್ಭಗಳಲ್ಲಿ ಅಂಬುಲೆನ್ಸ್ ಮತ್ತಿತರ ವಾಹನಗಳ ಸುಗಮ ಸಂಚಾರಕ್ಕೆ ಅನುವಾಗುವಂತೆ ಕೆಲವು ದ್ವಾರಗಳನ್ನು ಅಗಲಗೊಳಿಸುವ ಕಾರ್ಯ ನಡೆಯುತ್ತಿದೆ. ಪ್ರೇಕ್ಷಕರ ಸರದಿ ಸಾಲುಗಳು ಫುಟ್‌ಪಾತ್ ಬದಲಿಗೆ ಕ್ರೀಡಾಂಗಣದೊಳಗಿನ ಆವರಣದಲ್ಲಿ ಇರುವಂತೆ ವ್ಯವಸ್ಥೆ ಮಾಡುವ ಕಾರ್ಯವೂ ನಡೆಯುತ್ತಿದೆ.

‘ಸ್ಪಷ್ಟತೆ’ ನಿರೀಕ್ಷೆಯಲ್ಲಿ ಆರ್‌ಸಿಬಿ

‘ಕರ್ನಾಟಕ ಸರ್ಕಾರದ ನಿರ್ಧಾರಗಳನ್ನು ನಾವು ಸ್ವಾಗತಿಸುತ್ತೇವೆ. ಐತಿಹಾಸಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲು ನಮಗೂ ಅಗಾಧ ಆಸೆ ಇದೆ. ಕೆಎಸ್‌ಸಿಎ ಮಾಡುತ್ತಿರುವ ಪ್ರಯತ್ನಗಳು ಶ್ಲಾಘನೀಯ. ಷರತ್ತುಬದ್ಧ ಅನುಮತಿ ಪಡೆಯುವಲ್ಲಿ ಸಂಸ್ಥೆಯ ಪ್ರಯತ್ನಕ್ಕೆ ಅಭಿನಂದನೆಗಳು’ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿಯು ತಿಳಿಸಿದೆ.

ವೆಂಕಟೇಶ್ ಪ್ರಸಾದ್ ಪತ್ರಿಕಾಗೋಷ್ಠಿಗೆ ಪ್ರತಿಕ್ರಿಯೆಯಾಗಿ ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಆರ್‌ಸಿಬಿ, ‘ಅಭಿಮಾನಿಗಳ ಸುರಕ್ಷತೆಗಾಗಿ ಪರಸ್ಪರ ಎಲ್ಲರೊಡಗೂಡಿ ಕಾರ್ಯನಿರ್ವಹಿಸಲು ಬದ್ಧರಾಗಿದ್ದೇವೆ. ಪ್ರಾಥಮಿಕ ಚರ್ಚೆಗಳನ್ನು ನಡೆಸಲಾಗಿದೆ. ಈ ಸಂದರ್ಭದಲ್ಲಿ ಇನ್ನೂ ಕೆಲವು ಸಂಗತಿಗಳಲ್ಲಿ ಅಸ್ಪಷ್ಟತೆ ಇದೆ. ಅವುಗಳ ನಿವಾರಣೆಗೆ ಪ್ರಯತ್ನಿಸುತ್ತಿದ್ದೇವೆ. ತವರು ಅಭಿಮಾನಿಗಳ ಮುಂದೆ ಪಂದ್ಯಗಳನ್ನು ನಡೆಸಲು ನಾವು ಬದ್ಧರಾಗಿದ್ದೇವೆ. ಇದೇ ಹೊತ್ತಿನಲ್ಲಿ ಪ್ರೇಕ್ಷಕರ ಸುರಕ್ಷತೆಗಾಗಿ ಕೈಗೊಳ್ಳುವ ಕ್ರಮಗಳು ಮುಖ್ಯ’ ಎಂದು ಉಲ್ಲೇಖಿಸಿದೆ.

ಆರ್‌ಸಿಬಿಯು ಕೆಲವು ದಿನಗಳ ಹಿಂದಷ್ಟೇ ಪುಣೆ, ರಾಯಪುರ ಮತ್ತು ನವಿ ಮುಂಬೈನಲ್ಲಿ ಪಂದ್ಯಗಳ ಆಯೋಜನೆಗಾಗಿ ಕ್ರೀಡಾಂಗಣಗಳನ್ನು ಪರಿಶೀಲಿಸಿತ್ತು. ಅಲ್ಲಿಯ ಆಡಳಿತಗಳೊಂದಿಗೆ ಮಾತುಕತೆಯನ್ನೂ ನಡೆಸಿತ್ತು.

ಬಿಸಿಬಿ ಮನವಿ ತಿರಸ್ಕರಿಸಿದ ಐಸಿಸಿ

ದುಬೈ (ಪಿಟಿಐ): ಭಾರತದಲ್ಲಿ ನಿಗದಿಯಾಗಿರುವ ತನ್ನ ಟಿ20 ವಿಶ್ವಕಪ್ ಪಂದ್ಯ ಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಬೇಕೆಂಬ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ ಮನವಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಬುಧವಾರ ತಿರಸ್ಕರಿಸಿದೆ.

ಟೂರ್ನಿ ನಡೆಯುವ ಭಾರತದ ಯಾವುದೇ ತಾಣದಲ್ಲಿ ಬಾಂಗ್ಲಾದೇಶದ ಆಟಗಾರರು, ಅಧಿಕಾರಿಗಳು ಮತ್ತು ಅಭಿಮಾನಿಗಳ ಸುರಕ್ಷತೆಗೆ ಸಂಬಂಧಿಸಿ ಆತಂಕಕಾರಿ ಸ್ಥಿತಿಯಿದೆ ಎಂಬುದನ್ನು ವಿಶ್ವಾಸದಿಂದ ಹೇಳುವ ಹಾಗಿಲ್ಲ. ಹೀಗಾಗಿ ಪಂದ್ಯಗಳು ಪೂರ್ವನಿಗದಿಯಂತೆ ನಡೆಯಲಿವೆ ಎಂದು ಅದು ಹೇಳಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಐಸಿಸಿ ಮಂಡಳಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು. ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯು ಆಟಗಾರರ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿ ಭಾರತದಲ್ಲಿನ ತನ್ನ ಪಂದ್ಯಗಳನ್ನು ಸ್ಥಳಾಂತರಿಸುವಂತೆ ಆಗ್ರಹಿಸಿದ್ದ ಕಾರಣ ಈ ಸಭೆ ಕರೆಯಲಾಗಿತ್ತು.

‘ಸದ್ಯದ ಪರಿಸ್ಥಿತಿಯಲ್ಲಿ ಪಂದ್ಯಗಳ ಮರು ನಿಯೋಜನೆ ಮಾಡಿದರೆ ಐಸಿಸಿ ಟೂರ್ನಿಗಳ ಪಾವಿತ್ರ್ಯತೆಗೆ ಧಕ್ಕೆಯಾಗಬಹುದು. ಸಮಿತಿಯ ನಿಷ್ಪಕ್ಷಪಾತ ನಿಲುವಿಗೂ ಭಂಗ ಉಂಟಾಗಬಹುದು’ ಎಂದು ಐಸಿಸಿ ತಿಳಿಸಿದೆ.

ಪಾಕ್ ಬೆಂಬಲ: ಮತದಾನದ ವೇಳೆ 16 ಸದಸ್ಯರಲ್ಲಿ 14 ರಾಷ್ಟ್ರಗಳು ಬಿಸಿಬಿಯ ಮನವಿಗೆ ವಿರುದ್ಧವಾಗಿ ಮತಹಾಕಿದವು. ಪಾಕಿಸ್ತಾನ ಬಿಸಿಬಿ ಪರ ಮತಹಾಕಿತು. ಅಂತಿಮ ನಿರ್ಧಾರ ಕೈಗೊಳ್ಳಲು ಐಸಿಸಿ, ಬಾಂಗ್ಲಾದೇಶಕ್ಕೆ ಇನ್ನೂ ಒಂದು ದಿನದ ಗಡುವು ನೀಡಿದೆ ಎಂದು ಐಸಿಸಿ ಮೂಲಗಳು ತಿಳಿಸಿವೆ.

ಗುಕೇಶ್–ಪ್ರಜ್ಞಾನಂದ ಪಂದ್ಯ ಡ್ರಾ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್, ಭಾರತದ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಮಂಗಳವಾರ ಸ್ವದೇಶದ ಆರ್. ಪ್ರಜ್ಞಾನಂದ ಅವರ ಜೊತೆ ಡ್ರಾ ಮಾಡಿಕೊಂಡರು. ಇದು ಗುಕೇಶ್ ಅವರಿಗೆ ಸತತ ನಾಲ್ಕನೇ ಡ್ರಾ.

ಭಾರತದ ಅಗ್ರ ಆಟಗಾರ ಅರ್ಜುನ್ ಇರಿಗೇಶಿ (2.5 ಅಂಕ) ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಅನೀಶ್ ಗಿರಿ (1 ಅಂಕ) ಅವರ ರಕ್ಷಣಾಕೋಟೆ ಭೇದಿಸಲು ವಿಫಲರಾಗಿ ಅರ್ಧ ಪಾಯಿಂಟ್‌ಗೆ ತೃಪ್ತರಾಗಬೇಕಾಯಿತು.

ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಮತ್ತು ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ತಲಾ ಮೂರು ಅಂಕ ಗಳಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಗುಕೇಶ್ 2 ಅಂಕ ಗಳಿಸಿದ್ದಾರೆ. ಮೊದಲ ಎರಡು ಪಂದ್ಯಗಳಲ್ಲಿ ಸೋಲನುಭವಿಸಿದ್ದ ಪ್ರಜ್ಞಾನಂದ (1 ಅಂಕ) ನಂತರ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದಾರೆ.